XX. ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಪರಿಸರ, ಜೀವಿಶಾಸ್ತ್ರ ಹಾಗೂ ತಂತ್ರಜ್ಞಾನ ಸಾಂಪ್ರದಾಯಿಕವಲ್ಲದ ಇಂಧನ ರಾಜ್ಯ ಮಂತ್ರಿ): ಮಾನ್ಯ ಅಧ್ಯಕ್ಷರೆ,

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮದ 39(2)ನೇ ಪ್ರಕರಣದ ಮೇರೆಗೆ;

1. 1995-96ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವಾರ್ಷಿಕ ವರದಿ;

1974ರ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮದ 40(7)ನೇ ಪ್ರಕರಣದ ಮೇರೆಗೆ;

2. 1995-96ನೇ ಸಾಲಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಲೆಕ್ಕಪತ್ರ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

12.30 ಪಿ.ಎಂ

(6) ವರದಿಯನ್ನು ಒಪ್ಪಿಸುವುದು

ಶ್ರೀ ಕೆ.ಎಸ್.ಬೀಳಗಿ: ಮಾನ್ಯ ಅಧ್ಯಕ್ಷರೆ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು, ಗುಲ್ಬರ್ಗಾ ಜಿಲ್ಲೆಯ ಶಹಪುರ ಪಟ್ಟಣದಲ್ಲಿ ಪರಿಶಿಷ್ಠ ಜಾತಿಯವರ ಮೇಲೆ ನಡೆಯಿತೆನ್ನಲಾದ ದೌರ್ಜನ್ಯ, ಹಲ್ಲೆ ಹಾಗೂ ಮನೆಗಳಿಗೆ ಮತ್ತು ಅಂಗಡಿಗಳಿಗೆ ಬೆಂಕಿ ಹಚ್ಚಿ ಅವರ ಆಸ್ತಿಪಾಸ್ತಿಗಳನ್ನು ನಾಶಪಡಿಸಿರುವ ಬಗೆಗಿನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

(7) ನಿಯಮ 60-ರ ಮೇರೆಗೆ

ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ವಿಫಲವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು:

ಅಧ್ಯಕ್ಷರು: ಈಗ ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳೋಣ, ಈ ನಿಲುವಳಿ ಸೂಚನೆಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮತ್ತು ಮಾನ್ಯ ಯಡಿಯೂರಪ್ಪನವರ ನೋಟೀಸ್ ಎರಡು ನಿಮಿಷಗಳ ವ್ಯತ್ಯಾಸದಲ್ಲಿ

ಬಂದಿದೆ. ಆದರೆ ಈಗ ಅಧಿಕೃತ ವಿರೋಧಪಕ್ಷದವರಿಗೆ ಮೊದಲು ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನಾನು ಪ್ರತಿಪಕ್ಷದ ನಾಯಕನಾಗಿದ್ದಾಗ ಅಥವಾ ಮುಂಚೆಯಾಗಲಿ, ಯಾವುದೇ ಸಂದರ್ಭದಲ್ಲಾಗಲಿ, ಈ ರೀತಿ ನಿಲುವಳಿ ಸೂಚನೆಗಳನ್ನು ಕೊಟ್ಟಾಗ ಮೊದಲು ಕೊಟ್ಟಂಥವರಿಗೆ ಆದ್ಯತೆ ಕೊಡುವುದು, ಕೆಲವು ಸಂದರ್ಭದಲ್ಲಿ ಒಂದು ಬಾರಿ ಅವರಿಗೆ, ಒಂದು ಬಾರಿ ನಮಗೆ ಕೊಡುವುದು ಇದು ನಿಮ್ಮ ಡಿಸ್ಕ್ರಿಷನ್‌ಗೆ ಬಿಟ್ಟಿದ್ದು, ನಾನೇನು ರೂಲ್ ಮೇಲೆ ಮಾತನಾಡಲು ಇಷ್ಟಪಡುವುದಿಲ್ಲ. ಆದರೆ ನೆನ್ನೆ ದಿವಸ ನಾನು ಬೇರೆ ಯಾವುದೋ ಕಾರಣಕ್ಕೋಸ್ಕರ, ಆ ಸ್ಥಾನಕ್ಕೆ ಗೌರವ ಕೊಡಬೇಕೆಂದು, ಬೀದರ್ ಜಿಲ್ಲೆಯ ಸಮಸ್ಯೆ ಬಂದಾಗ ನಾನು ಮಾತನಾಡಲಿಲ್ಲ, ನಂತರ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ವಿನಂತಿ ಮಾಡುವುದೇನೆಂದರೆ ಈ ಜ್ವಲಂತ ಸಮಸ್ಯೆ ಬಗ್ಗೆ ನಿಲುವಳಿ ಸೂಚನೆಯ ಮೂಲಕ ನಾವು ಮೊದಲು ನೋಟೀಸ್ ಕೊಟ್ಟಿದ್ದೇವೆ, ಆದ್ದರಿಂದ ತಾವು ನನಗೆ ಮೊದಲು ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೋಟೀಸ್ ಕೊಡುವುದರಲ್ಲಿ ನಿಮಗೂ, ಅವರಿಗೂ ಎರಡು ನಿಮಿಷ ವ್ಯತ್ಯಾಸವಾಗಿರಬಹುದು, ನಮ್ಮ ನಿಯಮಾವಳಿ ಪ್ರಕಾರ ಒಂದು ಘಂಟೆ ಮೊದಲು ಕೊಡಬೇಕು. ಈಗ ಅವರು ಅಧಿಕೃತ ವಿರೋಧಪಕ್ಷದವರಾಗಿರುವುದರಿಂದ ಮೊದಲ ಅವಕಾಶ ಅವರಿಗೆ ಕೊಡಬೇಕು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಗೆ ನೋಟೀಸ್‌ನ್ನು ಒಂದು ಗಂಟೆ ಮುಂಚಿತವಾಗಿ ಕೊಡಬೇಕೆಂಬ ನಿಯಮವಿದೆ. ಆದರೆ ಒಂದು ಗಂಟೆಗೆ ಎರಡು ನಿಮಿಷ ಇರುವಾಗ ಕೊಡಬಹುದು. ಒಂದು ಗಂಟೆಯ ಸಮಯ ಇರುವುದರಿಂದ ನಾವು ಕಾದು ಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ತಾವು ನನಗೆ ಸ್ಪಷ್ಟನೆ ಮಾಡಬೇಕು. ಇವತ್ತು ನಿಲುವಳಿ ಸೂಚನೆ ಅಥವಾ ಬೇರೆ ಯಾವುದೇ ಇರಬಹುದು, ಸಂಖ್ಯೆಯಲ್ಲಿ ಒಂದೋ ಎರಡೋ ಹೆಚ್ಚು ಕಡಿಮೆ ಇರಬಹುದು, ಅದಕ್ಕೂ ಸಹ ಮಹತ್ವವಿದೆ. ನಾವು ಮೊದಲನೇ ಸ್ಥಾನದಲ್ಲಿದ್ದೇವೆ, ಅದನ್ನು ನಾನು ಇಲ್ಲಿ ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಪ್ರಶ್ನೆ ಏನೆಂದರೆ ಹಿಂದೆ ಈ ರೀತಿಯ ವಿಷಯಗಳು ಬಂದಾಗ ಯಾವ ನಿಯಮಾವಳಿ ಪ್ರಕಾರ ಅವಕಾಶ ಮಾಡಿಕೊಟ್ಟಿದ್ದೀರೋ, ಆ ರೀತಿ ನಮಗೂ ಸಹ ಕೊಡಿ.

ಅಧ್ಯಕ್ಷರು: ನಾನು ನಿಯಮಾವಳಿಗಳನ್ನು ಅನುಸರಿಸುತ್ತೇನೆ. ಒಂದು ವಿಚಾರದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವಾಗ ವಿರೋಧ ಪಕ್ಷದವರಿಗೆ ಮತ್ತು ಇತರೇ ವಿರೋಧ ಪಕ್ಷಗಳವರು ಒಟ್ಟಿಗೆ ಪ್ರಸ್ತಾಪ ಮಾಡಿ ನೋಟೀಸ್ ಕೊಟ್ಟಾಗ, ಆ ಸಂದರ್ಭದಲ್ಲಿ ಸಂಪ್ರದಾಯದ ಪ್ರಕಾರ ಮೊದಲು ಅಧಿಕೃತ ವಿರೋಧ ಪಕ್ಷದವರಿಗೆ ಮಾನ್ಯತೆ ಕೊಡುವ ಪದ್ಧತಿಯನ್ನು ಹಾಕಿಕೊಳ್ಳೋಣ. ನಂತರ ಎರಡನೇ ಗುಂಪಿಗೆ ಅವಕಾಶವನ್ನು ಕೊಡುತ್ತೇನೆ. ಇತರೆ ವಿರೋಧ ಪಕ್ಷದವರು ಹೆಚ್ಚು ಜನ ಇಲ್ಲ ಎಂಬ ಕಾರಣಕ್ಕಾಗಿ ಅವರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳದೇ ಇರತಕ್ಕಂಥ ಸನ್ನಿವೇಶವನ್ನು ಸೃಷ್ಟಿ ಮಾಡುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಅವಕಾಶ ಕೊಡುವುದರಲ್ಲಿ ಎರಡು ಮಾತಿಲ್ಲ. ತಾವು ಅಧ್ಯಕ್ಷರಾಗಿರತಕ್ಕಂಥ ಸಂದರ್ಭದಲ್ಲಿ ನಾವು ಪ್ರತಿ ಪಕ್ಷದ ನಾಯಕನಾಗಿದ್ದಾಗ, ತಾವು ಅನೇಕ ಸಾರಿ ಕೇವಲ ಸಂಖ್ಯೆಗಾಗಿ ಯಡಿಯೂರಪ್ಪನವರೇ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಒಂದೊಂದು ಸಲ ಪ್ರಮುಖ ವಿಷಯ ಇರುವುದರಿಂದ ಅವರಿಗೂ ಅವಕಾಶ ಕೊಡಬೇಕೆಂದು ಹೇಳಿದ್ದೀರಿ.

ಅಧ್ಯಕ್ಷರು: ನೋಟೀಸ್ ಇಲ್ಲದೇ ಇದ್ದಾಗ ಆ ರೀತಿ ಮಾಡಿರಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಎರಡು ನೋಟೀಸ್ ಇದ್ದಾಗಲೂ ಸಹಿತ ಅವಕಾಶ ಕೊಟ್ಟಿದ್ದೀರಿ. ನಾನು ತಮ್ಮ ಕೊಠಡಿಗೆ ಬಂದು ಮಾತನಾಡುತ್ತೇನೆ.

ಅಧ್ಯಕ್ಷರು: ದಯಮಾಡಿ ಆ ರೀತಿ ಯಾವಾಗ ಆಗಿದೆ ಎಂಬುದನ್ನು ತೋರಿಸಿ; ನೋಟೀಸ್ ಕೊಡದೆ ಇದ್ದಾಗ ತೊಂದರೆ ಆಗುತ್ತದೆ, ನೋಟೀಸ್ ಕೊಟ್ಟಿದ್ದರೆ I think, I cannot do it. ಯಾವಾಗ ಆ ರೀತಿ ಆಗಿದೆ ಎಂಬುದನ್ನು ನನ್ನ ಗಮನಕ್ಕೆ ತಂದರೆ I can also correct myself. If any such thing has happened I can always explain my position, and I can tell what I have done that day is wrong.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು: ತಾವು ಕೊಟ್ಟಿದ್ದೀರಿ. ತಮ್ಮ ನಿಲುವಳಿ ಸೂಚನೆ ಇಲ್ಲದೇ ಸದನ ಹೇಗೆ ನಡೆಯುತ್ತದೆ? ಆನಂತರ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಇವತ್ತು ನಿಯಮ 60ರ ಅಡಿಯಲ್ಲಿ, ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಬಿದ್ದ ಅನಿರೀಕ್ಷಿತ

ಮಳೆಯಿಂದಾಗಿ ಇಡೀ ಜಿಲ್ಲೆಯಲ್ಲಿ ತೊಗರಿ ಬೆಳೆ ಹಾಗೂ ಸೂರ್ಯಕಾಂತಿ ಬೆಳೆ, ಕಡಲೆ ಮತ್ತು ರಬಿ ಕ್ರಾಪ್, ಇವೆಲ್ಲವೂ ಕೂಡ ಸಂಪೂರ್ಣವಾಗಿ ನಾಶವಾಗಿದ್ದು, ರೈತರು ಮಾಡಿದ ಸಾಲವನ್ನು ತೀರಿಸಲಾರದೆ ಪ್ರಾಣಹತ್ಯೆಯನ್ನು ಮಾಡಿಕೊಂಡಿದ್ದು, ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅದಕ್ಕಾಗಿ ರೈತರಲ್ಲಿ ಏನು ಕಳವಳ ಉಂಟಾಗಿದೆ, ಇದರ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮುಖಾಂತರ ಸೆಳೆಯಬೇಕೆಂದು ಈ ಒಂದು ನಿಲುವಳಿಸೂಚನೆಯನ್ನು ಸಭೆಯ ಮುಂದೆ ನಾವು ಮಂಡಿಸಿದ್ದೇವೆ. ತಮಗೂ ನಾನು ಅಭಿನಂದಿಸುತ್ತೇನೆ. ನೆನ್ನೆ ದಿವಸ ಇದರ ಬಗ್ಗೆ ನಾವು ತರಾತುರಿಯಲ್ಲಿ ಈ ಸದನದ ಗಮನವನ್ನು ಸೆಳೆಯಬೇಕು, ಸರ್ಕಾರದ ಗಮನವನ್ನು ಸೆಳೆಯಬೇಕೆಂದು ಈ ವಿಷಯವನ್ನು ಪ್ರಸ್ತಾಪ ಮಾಡಿದೆವು. ಅದರಲ್ಲಿ ಬಹಳಷ್ಟು ಹಿರಿಯ ನಾಯಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕೂಡ ಸ್ವಲ್ಪ ನೊಂದ ಮನಸ್ಸಿನಿಂದ ನೆನ್ನೆ ಇದನ್ನು ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ, ಇವತ್ತು ಬೇಕಾದರೆ ಮಾಡಬಹುದಾಗಿತ್ತು ಎನ್ನತಕ್ಕಂಥ ಮಾತನ್ನು ಅವರು ಇಲ್ಲಿ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಮತ್ತು ತಮ್ಮ ಕೊಠಡಿಯಲ್ಲಿಯೂ ಕೂಡ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ಅಲ್ಲಿ ಇರತಕ್ಕಂಥ ವಾತಾವರಣ ಮತ್ತು ವಿಷಯದ ಗಂಭೀರತೆಯ ಬಗ್ಗೆ ಈ ಸದನದ ಗಮನವನ್ನು ಸೆಳೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮಾತ್ರ ಈ ಕೆಲಸ ನೆನ್ನೆ ದಿವಸ ಇಲ್ಲಿ ಮಾಡಿದ್ದೇವೆಯೇ ಹೊರತಾಗಿ, ಸದನಕ್ಕೆ ಅಗೌರವ ತರಬೇಕು ಅಥವಾ ರಾಜ್ಯಪಾಲರಿಗೆ ಅವಮಾನ ಮಾಡಬೇಕೆಂಬ ದೃಷ್ಟಿಯಿಂದ ಮಾಡಿಲ್ಲ. ಇದು ಕೆಲವು ಪತ್ರಿಕೆಗಳಲ್ಲಿ ರೌಡಿ ರೀತಿಯಾಗಿ ವರ್ತಿಸಿದರು ಎಂದು ಬಂದಿದೆ. ಪತ್ರಿಕೆಯವರು ಯಾವ ಭಾಷೆಯನ್ನು ಉಪಯೋಗ ಮಾಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ತಾವು ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. ಈ ಸದನದಲ್ಲಿ ಅವರೂ ಕೂಡ ಹಿಂದೆ ಇದ್ದಿದ್ದರೆ ಅನೇಕ ಸಾರಿ ರಾಜ್ಯಪಾಲರ ಭಾಷಣ ಆಗುವಾಗ ಯಾವರೀತಿ ಆಗಿದೆ ಎಂಬುದರ ಬಗ್ಗೆ ನಡವಳಿಕೆಯನ್ನು ಓದಿದರೆ ಬಹುಶಃ ಅವರಿಗೂ ಕೂಡ ಗೊತ್ತಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಅದಕ್ಕೆ ನಾನು ಸಮರ್ಥನೆ ಮಾಡಿಕೊಳ್ಳುವುದಿಲ್ಲ. ಇಲ್ಲಿ ಆಗಿರುವ ಬಗ್ಗೆ ನಮ್ಮ ಸದಸ್ಯರಿಂದಾಗಲಿ ಅಥವಾ ಬಿಎಸ್‌ಪಿ ಸದಸ್ಯರಿಂದಾಗಲಿ ಆ ವಿಷಯದ ಗಂಭೀರತೆಯ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಏನು ನಡವಳಿಕೆ ನಡೆಯಿತು, ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಅದು ಮನಸ್ಸಿಗೆ ನೋವು ಉಂಟು ಮಾಡತಕ್ಕಂಥ ಒಂದು ಅಂಶವಾಗಿದ್ದರೂ ಕೂಡ ಈ ಒಂದು ಸಾರ್ವಜನಿಕ ಸಮಸ್ಯೆ ಬಗ್ಗೆ ತಮ್ಮ ಮುಖಾಂತರ ಮತ್ತು ರಾಜ್ಯಪಾಲರು ಇದ್ದಾಗ ಗಮನ ಸೆಳೆಯಬೇಕೆಂಬ ಏಕೈಕ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತಾಗಿ ಬೇರೆ ಯಾವುದೇ ಕಾರಣಕ್ಕೆ ಮಾಡಿಲ್ಲ ಎಂಬ ಮಾತನ್ನು ಪುನಃ ಹೇಳಿ ಮತ್ತು ತಮ್ಮ ಮನಸ್ಸಿಗೆ ಇದರ ಬಗ್ಗೆ ನೋವು ಉಂಟಾಗಿದ್ದರೆ ತಾವು ಕ್ಷಮಿಸಬೇಕೆಂದು ಕೇಳಿ, ತಮ್ಮ ಕ್ಷಮೆಯನ್ನು ಕೇಳಿಕೊಂಡು ಈ ರೀತಿಯಾಗಿ ನಡೆದಿಲ್ಲವೆಂದು ಯಾರಾದರೂ ಭಾವಿಸಿದ್ದರೆ ಅದು ಸರಿಯಲ್ಲ ಬಹುಶಃ ಸುಮಾರು 20-30 ವರ್ಷಗಳ ಹಿಂದೆ ನಡೆದಿರುವಂಥ ನಡವಳಿಕೆಯನ್ನು ತೆಗೆದು ಓದಿದರೆ

ಗೊತ್ತಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ. ಈ ವಿಷಯವನ್ನು ಹೇಳಿ ನನ್ನ ಮಾತನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ. ಇವತ್ತು ಪ್ರಮುಖವಾಗಿ ಪ್ರಸ್ತಾಪಮಾಡತಕ್ಕಂಥ ವಿಷಯ ತಮಗೆ ಗೊತ್ತಿದೆ, 1997ನೇ ಸಾಲಿನಲ್ಲಿ, ವಿಶೇಷವಾಗಿ ಬೀದರ್ ಜಿಲ್ಲೆ ಮತ್ತು ಗುಲ್ಬರ್ಗ ಜಿಲ್ಲೆಯ ಕೆಲವು ಭಾಗದಲ್ಲಿ ಅತಿವೃಷ್ಟಿಯಿಂದ ಒಂದು ಕಡೆ, ಮತ್ತೆ ಕೆಲವು ಕಡೆ ಅನಾವೃಷ್ಟಿಯಿಂದ ಬೆಳೆಗಳು ಹಾಳಾಗಿವೆ. ವಿಶೇಷವಾಗಿ ದ್ವಿದಳಧಾನ್ಯಗಳು ಹಾಳಾಗಿವೆ. ನಮ್ಮ ರೈತರು ಸಾಲ ಮಾಡಿ ಗೊಬ್ಬರ ತಂದು ಅವರು ಸಾಕಷ್ಟು ಪ್ರಯತ್ನವನ್ನು ಮಾಡಿದರೂ ಕೂಡ ತಮ್ಮ ಬೆಳೆಗಳನ್ನು ಉಳಿಸಿಕೊಳ್ಳತಕ್ಕಂಥ ಪ್ರಯತ್ನ ನಡೆಯಲಿಲ್ಲ. ಯಾರು ಈ ಗೊಬ್ಬರವನ್ನು ಸಪ್ಲೈ ಮಾಡುತ್ತಾರೆ, ಅವರೂ ಕೂಡ ಬಹಳಷ್ಟು ಫ್ರಾಡ್ ಮತ್ತು ಕಡಿಮೆ ಗುಣಮಟ್ಟದ ಔಷಧಿಗಳನ್ನು ಸರಬರಾಜು ಮಾಡತಕ್ಕಂಥಾದ್ದು ಕೂಡ ಇದೆ. ಅದರ ಬಗ್ಗೆ ಕೂಡ ಸರ್ಕಾರದವರು ಕ್ರಮವನ್ನು ಜರುಗಿಸುವಂಥ ಅವಶ್ಯಕತೆ ಇದೆ. ಈ ಸಮಯದಲ್ಲಿ ರೈತರು ಬಹಳಷ್ಟು ಸಾಲ ಮಾಡಿದ್ದರೂ ಕೂಡ ತಮ್ಮ ಬೆಳೆಗಳನ್ನು ನಿಸರ್ಗದ ವಿಕೋಪದಿಂದ ಉಳಿಸಿಕೊಳ್ಳಲು ಆಗಲಿಲ್ಲ. ಸರ್ಕಾರದವರೂ ಕೂಡ ಆ ಕಡೆ ಗಮನ ಕೊಡಲಿಲ್ಲ. ತಮಗೆ ನಾನು ಹೇಳಬೇಕಾದರೆ ಬೀದರ್ ಜಿಲ್ಲೆಯಲ್ಲಿ ತೊಗರಿ ಬಿತ್ತನೆ ಮಾಡಿರತಕ್ಕಂಥಾ ಪ್ರದೇಶ 49,980 ಹೆಕ್ಟೇರ್, ಅದರಲ್ಲಿ ಹಾನಿಯಾದ ಪ್ರದೇಶ 40984 ಹೆಕ್ಟೇರ್, ಜೋಳ ಬಿತ್ತನೆ ಆಗಿರುವ ಪ್ರದೇಶ 35,850 ಹೆಕ್ಟೇರ್ ಅದರಲ್ಲಿ ಹಾನಿಯಾಗಿರುವ ಪ್ರದೇಶ 21,510 ಹೆಕ್ಟೇರ್, ಸೂರ್ಯಕಾಂತಿ ಸುಮಾರು 4650 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ ಹಾನಿಯಾಗಿರುವ ಪ್ರದೇಶ 2510 ಎಕರೆ. ಅದೇ ರೀತಿಯಲ್ಲಿ ಕುಸಬಿ 9636 ಎಕರೆ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ 3854 ಎಕರೆ ಪ್ರದೇಶದಲ್ಲಿ ರೈತರು ತಮ್ಮ ಬೆಳೆಯನ್ನು ಕಳೆದುಕೊಂಡಿದ್ದಾರೆ. ಇದು ಬೀದರ್ ಪರಿಸ್ಥಿತಿ. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು 2,36,888 ಎಕರೆ ಪ್ರದೇಶ ಬಿತ್ತನೆ ಆಗಿದ್ದರೆ ಅದರಲ್ಲಿ ಹಾನಿಯಾಗಿರುವ ಪ್ರದೇಶ ಸುಮಾರು 93,642 ಹೆಕ್ಟೇರ್‌ಗಳು. ಇದರಲ್ಲಿ ಮಳೆ ಸರಿಯಾದ ಸಮಯಕ್ಕೆ ಬಾರದೇ ಇರತಕ್ಕಂಥ ಪ್ರದೇಶ ಕೂಡ ಇದೆ. ಮಳೆ ಬಂದರೂ ಕೂಡ ಸಕಾಲದಲ್ಲಿ ಮಳೆ ಬಾರದೇ ಇದ್ದ ಕಾರಣ ಹಾನಿಯಾಗಿರುವ ಪ್ರದೇಶ ಕೂಡ ಇದೆ. ಕೀಟನಾಶಕಗಳನ್ನು ಹೊಡೆದರೂ ಬೆಳೆ ಬಾರದೇ ಇರುವ ಕಾರಣ ಸಹ ಇದೆ. ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯ ಜಾಯಿಂಟ್ ಡೈರೆಕ್ಟರ್ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರಲ್ಲಿ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟವಾಗಿದೆ, ನಾಶವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಸಹ 125 ಕೋಟಿ ರೂಪಾಯಿಗಳ ಬೆಳೆ ನಾಶವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಒಂದು ಪತ್ರವನ್ನೂ ಸಹ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಕಳುಹಿಸಿದ್ದಾರೆ. ಈ ಒಂದು ಬೆಳೆಯಿಂದ ರೈತರಿಗೆ ಏನು ಹಾನಿಯಾಗಿದೆ ಅವರು ಸಾಲ ಮಾಡಿ, ತಮ್ಮ ಬೆಳೆಯನ್ನು ಪ್ರಾಮಾಣಿಕವಾಗಿ ಉಳಿಸಿಕೊಳ್ಳಬೇಕೆನ್ನುವ ಪ್ರಯತ್ನ ಮಾಡಿದರೂ ಕೂಡ ಅವರು ಆ ಬೆಳೆಯನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ

ನಿಸರ್ಗದ ವಿಕೋಪದಿಂದ, ಅವರು ಸಾಲದ ರೂಪದಲ್ಲಿ ತಂದಂತಹ ಸಾಲ ಅದು ಬ್ಯಾಂಕ್‌ನಿಂದ ಇರಬಹುದು, ಪ್ರೈವೇಟ್‌ನಲ್ಲಿ ಇರಬಹುದು, ಔಷಧಿ ಅಂಗಡಿ ಯವರಿಂದ ಪಡೆದುಕೊಂಡಂತಹ ಸಾಲ ಇರಬಹುದು, ಅಥವಾ ಬೇರೆಯವರಿಂದಲೇ ಇರಬಹುದು, ಅವರು ಆ ಸಾಲದ ಭಾರವನ್ನು ಸಹಿಸದೇ ಅನೇಕ ರೈತರು ಆತ್ಮಹತ್ಯೆ ಮಾಡಿಕ್ಕೊಂಡಿದ್ದಾರೆ ಎನ್ನತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ, ಮತ್ತು ಜಿಲ್ಲಾಧಿಕಾರಿಗಳ ಮತ್ತು ಎಸ್.ಪಿ. ಅವರ ವರದಿಯನ್ನು ನೋಡಿದರೂ ಸಹ ಅವರು ಅದರಲ್ಲಿ ಕೆಲವನ್ನು ಒಪ್ಪಿದ್ದಾರೆ, ಕೆಲವನ್ನು ಒಪ್ಪಿಲ್ಲ. 8-10 ಜನ ಏನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅವರೆಲ್ಲರೂ ಸಹ ಸಾಲವನ್ನು ಪಡೆದುಕೊಂಡಂತಹ ಜನ ಅಥವಾ ಬೆಳೆಯನ್ನು ಯಾರು ಕಳೆದುಕೊಂಡಿದ್ದಾರೆ ಅಂತಹವರಿಗೆ ಮಾತ್ರ ಸೀಮಿತ ಇಲ್ಲ, ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ ಎನ್ನತಕ್ಕಂಥ ಮಾತನ್ನೂ ಕೂಡ ಅವರು ಹೇಳಿದ್ದಾರೆ. ಇವತ್ತು ಈ ಒಂದು ಬೆಳೆ ನಾಶವಾದ ಮತ್ತು ಬೆಳೆ ಹಾನಿಯಾದ ಕಾರಣದಿಂದ ಸುಮಾರು 7-8 ಜನ ಬೀದರ್ ಜಿಲ್ಲೆಯಲ್ಲಿ ಆತ್ಮಹತ್ಯೆಮಾಡಿಕೊಂಡಿದ್ದಾರೆ. ಅದರಲ್ಲಿ ವಿಶೇಷವಾಗಿ ಒಂದೆರಡು ಜನರದ್ದು ನೇರವಾಗಿ ಅವರು ತಮ್ಮ ವರದಿಯಲ್ಲಿ ಒಪ್ಪಿಕೊಂಡಿದ್ದಾರೆ. ನಾನು ನಿನ್ನೆಯ ದಿನ ಈ ವರದಿಯನ್ನು ತರಿಸಿಕೊಂಡೆ. ಉದಾಹರಣೆಗೆ ಹೇಳುವುದಾದರೆ ಒಂದೂವರೆ ಗಂಟೆಗೆ ನನಗೆ ಈ ಮಾಹಿತಿ ಬೀದರ್ ಜಿಲ್ಲೆಯಿಂದ ಬಂದಿದೆ. ಕುಂಠಿಸಿರ್ಸಿ ವಿಲೇಜ್ ಬಾಲ್ಕಿ ತಾಲ್ಲೂಕು, ತೊಂದರೆಗೆ ಒಳಗಾದವರು "Deleep son of Siddlingappa, cause of death by consuming poison due to illegal intimacy of his wife with Mr. Maruthi" ಎನ್ನತಕ್ಕಂಥ ಮಾತನ್ನು ಇದರಲ್ಲಿ ಹೇಳಿದ್ದಾರೆ. ಆದರೆ ಆ ಭಾಗದಿಂದ ಬರತಕ್ಕಂಥ ರೈತರು ಇದು ಸುಳ್ಳು ಪೊಲೀಸರು ಈ ರೀತಿಯಾಗಿ ಸೃಷ್ಟಿ ಮಾಡಿದ್ದಾರೆ. ಈ ಕೇಸನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ಮತ್ತು ಯಾರೋ ಒಬ್ಬರು ಅಲ್ಲಿ ಈ ಒಂದು ಅನಾಹುತಕ್ಕೆ ತುತ್ತಾಗಿದ್ದಾರೆ ಅವರದ್ದು ಮತ್ತು ಇನ್ನೊಬ್ಬ ಮಾರುತಿ ಎನ್ನತಕ್ಕಂಥವನದ್ದು ಏನು ಜಗಳ ಇತ್ತು ಇದನ್ನು ತಂದು ಇಡಬೇಕು ಎನ್ನುವಂತಹ ದೃಷ್ಟಿಯಿಂದಲೇ ಈ ಮಾತನ್ನು ಹೇಳಿದ್ದಾರೆ ಎನ್ನತಕ್ಕಂಥಾದ್ದು ಅಲ್ಲಿನ ರೈತರು ಸ್ಪಷ್ಟವಾಗಿ ಹೇಳಿದ್ದಾರೆ. ಅದೇ ರೀತಿಯಾಗಿ ಗುರುಜಿ ವಿಲೇಜ್ ಶ್ರೀಮತಿ ಜೀಜಾಬಾಯಿ ವೈಫ್ ಆಫ್ ಶ್ರೀಮಂತರಾವ್ ಅಂದರೆ ಆ ಹೆಣ್ಣುಮಗಳೇ ತನ್ನ ಹೊಲದ ಉಸ್ತುವಾರಿಯನ್ನು ನೋಡಿಕೊಳ್ಳತಕ್ಕಂಥವಳು, ಈ ಕೆಲಸವನ್ನು ಮಾಡತಕ್ಕಂಥವಳು. ಅವರು ಏನು ಹೇಳುತ್ತಾರೆ ಸಾಲ ಪಡೆದುಕೊಂಡು ಅಥವಾ ಬೆಳೆ ಹಾಳಾಗಿದೆ ಎಂದು ಆ ಹೆಣ್ಣು ಮಗಳು ಸತ್ತಿಲ್ಲ ಆದರೆ ಹೊಟ್ಟೆ ನೋವಿನಿಂದ ಆ ಹೆಣ್ಣುಮಗಳು ಸತ್ತಿದ್ದಾಳೆ ಎಂದು ಪೊಲೀಸ್‌ನವರ ವರದಿಯಲ್ಲಿ ಇದೆ. ಆಮೇಲೆ ಇನ್ನೊಬ್ಬ ಲಕ್ಷ್ಮೀಬಾಯಿ ವೈಫ್ ಆಫ್ ಎಕನಾಥ್ ಇವಳ ಬಗ್ಗೆ ಕೂಡ ಅವರು ಕನ್‌ಜೂಮಿಂಗ್ ಪಾಯಿಜನ್ ಸಿನ್ಸ್ ಹರ್ ಹಸ್‌ಬೆಂಡ್ ವಾಜ್ ಇನ್ ಡೆತ್ ಅಂದರೆ ಇವರಾಗಲಿ ಆಮೇಲೆ ಕಾಸರಗಾಮ್ ಪ್ರಭು ಎನ್ನತಕ್ಕಂಥವರು ಹಿ ಹ್ಯಾಸ್ ಟು ರೀ ಪೇ ಹಿಸ್ ಡೆಟ್‌ಡ್ಯೂಟು ಕ್ರಾಪ್ ಫೈಲ್ಯೂರ್ ಅಂಡ್ ಹೀ ಹ್ಯಾಸ್ ಟು ಕನ್‌ಜ್ಯೂಮ್ ಪಾಯಿಜನ್ ಅಂಡ ಡೆಡ್ ಇದು ಪೊಲೀಸ್‌ನವರೇ

ಹೇಳುತ್ತಿದ್ದಾರೆ. ಅವನಿಗೆ ಸಾಲ ಆಗಿತ್ತು ಅವನ ಕ್ರಾಪ್ ಸರ್ವನಾಶವಾಗಿತ್ತು, ಅದಕ್ಕಾಗಿ ಅವನು ಆ ಸಾಲದ ಭಾರವನ್ನು ಸಹಿಸದೇ ಇವತ್ತಿನದಿನ ಆತ ತನ್ನ ಪ್ರಾಣವನ್ನು ಕಳೆದುಕೊಂಡಿದ್ದಾನೆ ಎನ್ನತಕ್ಕಂಥ ಮಾತನ್ನು ಪೊಲೀಸ್‌ನವರು ಎಫ್.ಐ.ಆರ್.ನಲ್ಲಿ ಅವರೇ ಈ ಮಾತನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಕಲವಾಡಿ ಅಲ್ಲಹಳ್ಳಿ, ಸಿದ್ದೇಶ್ವರ್ ಬಾತಂಪುರ, ಇಂತಹ ಅನೇಕ ಹಳ್ಳಿಗಳಲ್ಲಿ ಸುಮಾರು 7-8 ಜನ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ ಮತ್ತು ಅದಕ್ಕೆ ಕೆಲವು ಕೇಸ್‌ಗಳಲ್ಲಿ ಸರ್ಕಾರ ಒಪ್ಪಿಕೊಂಡಿದೆ, ಕೆಲವು ಕೇಸಸ್‌ಗಳಲ್ಲಿ ಬೇರೆ ಕಾರಣಗಳು ಇವೆ ಎಂದು ಅವರು ಹೇಳುತ್ತಿದ್ದಾರೆ. ಅದೂ ಇರಲಿ ಬೇರೆ ಕಾರಣಗಳು ಇದ್ದರೆ ಅದಕ್ಕೆ ಬೇರೆ ಒಂದು ವಿಚಾರಣೆ ಆಗಲಿ ಬೇಕಾದರೆ ಅದಕ್ಕೆ ಒಂದು ನ್ಯಾಯಾಂಗ ತನಿಖೆ ನಡೆಯಲಿ. ಪೊಲೀಸ್‌ನವರು ಇಂತಹ ಫಾಲ್ಸ್ ಕೇಸಸ್ ಹೈ ಲೈಟ್ ಮಾಡುತ್ತಿದ್ದರೆ ಅವರಿಗೂ ಇದು ಗೊತ್ತಾಗಲಿ. ಇಲ್ಲಾ ಬೆಳೆ ಕಳೆದುಕೊಂಡಂತಹ ವ್ಯಕ್ತಿ ಸಾಲದ ಹೊರೆಯಿಂದ ಪ್ರಾಣ ಕಳೆದುಕೊಂಡಂತಹ ವ್ಯಕ್ತಿ ಇದ್ದರೆ ಅದಕ್ಕೆ ಏನು ಮಾಡಬೇಕು ಎನ್ನತಕ್ಕಂಥಾದ್ದನ್ನು ಸರ್ಕಾರ ಗಮನಿಸಿ ಅದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇದು ಅಲ್ಲಿ ಪ್ರಾರಂಭವಾಗಿದ್ದು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿಂದ. ಬೆಳೆ ಹಾನಿಯಾಗಿದೆ, ಔಷಧಿ ಹೊಡೆದರೂ ಸಹ ತಡೆದುಕೊಳ್ಳುತ್ತಿಲ್ಲ. ಬೆಳೆ ಬರುತ್ತಿಲ್ಲ ಅದಕ್ಕೆ ಸರ್ಕಾರ ಏನಾದರೂ ಪರಿಹಾರ ಕೊಡಬೇಕೆಂದು ಅಲ್ಲಿನ ಜನ ಕೇಳಿದರೂ ಕೂಡ ಅವರ ಯಾವುದೇ ಮಾತನ್ನು ಸರ್ಕಾರ ಕಿವಿಗೆ ಹಾಕಿಕೊಳ್ಳದೆ ಅಲ್ಲಿಗೆ ಇವತ್ತು ಯಾವ ಅಧಿಕಾರಿಗಳೂ ಹೋಗಿಲ್ಲ ಮಂತ್ರಿಗಳೂ ಹೋಗಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರೂ ಸಹ ಹೋಗಿಲ್ಲ. ಇದರ ಬಗ್ಗೆ ಯಾರೂ ಚಿಂತನೆ ಮಾಡಿಲ್ಲ. ಈ ವಿಷಯ ದೊಡ್ಡ ದೊಡ್ಡ ಪತ್ರಿಕೆಗಳನ್ನೊಳಗೊಂಡಂತೆ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ದೊಡ್ಡ ದೊಡ್ಡ ಪತ್ರಿಕೆಗಳ ಮುಖ ಪುಟದಲ್ಲಿ ಈ ವಿಷಯ ಪ್ರಕಟಗೊಂಡಿದ್ದರೂ ಕೂಡ ಆ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ನಾನು ಬೀದರ್‌ಗೆ ಹೋಗಿದ್ದಾಗ, ತೊಗರಿಬೇಳೆ, ಸೂರ್ಯಕಾಂತಿ, ಕಡ್ಲೆ, ಜೋಳ, ಎಲ್ಲಾ ಹಾಳಾಗಿತ್ತು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಮತ್ತು ನ್ಯಾಚುರಲ್ ಕೆಲಾಮಿಟಿ ಫಂಡ್ ಮೂಲಕ ರೈತರುಗಳಿಗೆ ಕಾಂಪನ್‌ಸೇಷನ್ ಕೊಡತಕ್ಕಂಥ ಕೆಲಸ ಮಾಡಬೇಕು. ಮತ್ತು ಯಾರು ಸತ್ತಿದ್ದಾರೋ, ಅವರುಗಳಿಗೆ, ಬೇರೆ ಜನರಿಗೆ ಯಾವ ರೀತಿ ಕಾಂಪನ್‌ಸೇಷನ್ ಕೊಡುತ್ತೀರೋ ಅದೇ ರೀತಿಯಾಗಿ ಇವರುಗಳಿಗೂ ಒಂದೊಂದು ಲಕ್ಷ ರೂಪಾಯಿಗಳ ಕಾಂಪನ್‌ಸೇಷನ್ ಕೊಡಬೇಕೆಂದು ನಾವು ಅಪೀಲ್ ಮಾಡಿದ್ದೆವು. ಆದರೆ, ಆ ಅಪೀಲ್ ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಚೀಫ್ ಸೆಕ್ರೆಟರಿಯವರಿಗೆ ನೇರವಾಗಿ ನಾನು ಪತ್ರ ಕೂಡ ಬರೆದಿದ್ದೇನೆ. ಮತ್ತು ಪತ್ರಿಕೆಗಳಿಗೆ ಹೇಳಿಕೆ ಕೊಡುವುದರ ಮೂಲಕ ಅಲ್ಲಿನ ಜಿಲ್ಲಾಧಿಕಾರಿಗಳ ಹಾಗೂ ಸರ್ಕಾರದ ಗಮನವನ್ನು ನಾವು ಬೀದರ್‌ಗೆ ಹೋಗಿದ್ದಂಥ ಕಾಲದಲ್ಲಿ ಸೆಳೆದಿದ್ದೇವೆ. ಆದರೂ ಕೂಡ ಇವತ್ತೂ ಕೆಲವು ಮಾತುಗಳನ್ನು ನಾನು ಹೇಳುತ್ತೇನೆ. ಇದರಲ್ಲಿ ಕೆಲವು ಅತಿಶಯೋಕ್ತಿ ವಿಷಯ ಇರಬಹುದು, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಬಡ

ರೈತರುಗಳು ಜೀವನ ನಡೆಸಬೇಕೆನ್ನುವ ದೃಷ್ಟಿಯಿಂದ ಮತ್ತು ಮಾನವೀಯ ಅನುಕಂಪ ದೃಷ್ಟಿಯಿಂದ ಸರ್ಕಾರವು ಇದರ ಬಗ್ಗೆ ಗಮನಕೊಟ್ಟು ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಜಾಯಿಂಟ್ ಡೈರೆಕ್ಟರ್ ಅವರನ್ನು ಕರೆಸಿ ಅವರ ಜೊತೆ ಮಾತನಾಡಿ ಎಷ್ಟೆಷ್ಟು ಕಾಂಪನ್‌ಸೇಷನ್ ಕೊಡಬಹುದೆಂಬ ಬಗ್ಗೆ ಸರ್ಕಾರ ಇದುವರೆಗೂ ಏನೂ ಹೇಳಿಲ್ಲ. ಇದು ಏನು ತೋರಿಸುತ್ತಿದೆ ಎಂದರೆ ಸರ್ಕಾರ, ಇದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಆ ಕಡೆ ಲಕ್ಷ್ಯ ಕೊಟ್ಟೇ ಇಲ್ಲ. ನಾವೂ ರೈತರ ಪರ ಇದ್ದೇವೆ, ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳಿಕೊಳ್ಳುವುದಷ್ಟೇ ಅವರ ಕೆಲಸವಾಗಿದೆ. ಆದರೆ, ರೈತರುಗಳಿಗೆ ಯಾವಾಗ ಸಹಾಯ ಬೇಕಾಗಿದೆಯೋ ಆವಾಗ ಅವರ ಸಹಾಯಕ್ಕೆ ಸರ್ಕಾರ ನಿಲ್ಲದೆ ಹೋದರೆ ಆ ಜನರು ಯಾವ ರೀತಿಯಿಂದ ಇವರಲ್ಲಿ ಮೊರೆ ಹೋಗಬೇಕು ಮತ್ತು ಕೇಳಬೇಕು ಎಂದು ನನಗೆ ಗೊತ್ತಾಗುತ್ತಿಲ್ಲ. ಜಿಲ್ಲಾಧಿಕಾರಿಗಳು ಮತ್ತು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಜಾಯಿಂಟ್ ಡೈರೆಕ್ಟ್‌ರ್‌ರವರು ಕೊಟ್ಟಿರತಕ್ಕಂಥ ವರದಿಯಲ್ಲಿ ನಷ್ಟಕ್ಕೆ ಒಳಗಾದ ಕೆಲವು ರೈತರುಗಳು ಆತ್ಮಹತ್ಯೆ ಮಾಡಿಕೊಂಡಿರುವುದು ನಿಜವೆಂದು ಕಂಡ ಮೇಲೆ ಇಲ್ಲಿಯವರೆಗೂ ಸತ್ತ ಕುಟುಂಬದವರುಗಳಿಗೆ ಏಕೆ ಕಾಂಪನ್‌ಸೇಷನ್ ಕೊಟ್ಟಿಲ್ಲ ಎಂದು ಸರ್ಕಾರ ಹೇಳಬೇಕು. ಈ ಬಗ್ಗೆ ಕೆಲವು ದಿವಸಗಳ ಹಿಂದೆ ಗಲಾಟೆಯಾದ ಮೇಲೆ ಮತ್ತು ಇನ್ನೇನು ಚುನಾವಣೆ ಕೆಲವೇ ದಿವಸಗಳಲ್ಲಿ ಇದೆ ಎನ್ನುವಾಗ ಕ್ಯಾಬಿನೆಟ್‌ನಲ್ಲಿ ಒಂದು ಡಿಸಿಷನ್ ತೆಗೆದುಕೊಳ್ಳಲಾಯಿತು. ಅದರ ಪ್ರಕಾರ ಆ ಜಿಲ್ಲೆಯ ಉಸ್ತುವಾರಿ ಮಿನಿಸ್ಟರ್, ಅಗ್ರಿಕಲ್ಚರ್ ಮಿನಿಸ್ಟರ್ ಮತ್ತು ರೆವಿನ್ಯೂ ಮಿನಿಸ್ಟರ್ ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕೆಂದು ತೀರ್ಮಾನವಾಯಿತು. ಆದರೆ, ಚುನಾವಣೆಯ ಬಿಸಿ ಇದ್ದುದ್ದರಿಂದ ಅವರೂ ಅಲ್ಲಿಗೆ ಹೋಗಲಿಲ್ಲ. ಇವರುಗಳೆಲ್ಲಾ ಬಿಜಿ ಇದ್ದರೆಂದು ಇಟ್ಟುಕೊಳ್ಳೋಣ, ಚೀಫ್ ಸೆಕ್ರೆಟರಿಯವರು ಬಿಜಿ ಇದ್ದರಾ? ರೆವಿನ್ಯೂ ಕಮಿಷನರ್‌ರವರು ಬಿಜಿ ಇದ್ದರಾ? ಅಗ್ರಿಕಲ್ಚರಲ್ ಡೈರೆಕ್ಟರ್‌ರವರು ಬಿಜಿ ಇದ್ದರಾ? ಇವರೆಲ್ಲಾ ಏನು ಮಲಗಿದ್ದರಾ? ರಾಜಕೀಯ ದೃಷ್ಟಿಯಿಂದ ಮತ್ತು ಚುನಾವಣೆ ದೃಷ್ಟಿಯಿಂದ ಅವರು ಏನಾದರೂ ಹೇಳಿರಬಹುದು, ಆದರೆ ಉಳಿದಂಥ ಅಧಿಕಾರಿಗಳು, ಈ ರೊಟೀನ್ ಕೆಲಸವನ್ನು ಏಕೆ ಮಾಡಿಲಿಲ್ಲ? ಇದರ ಅರ್ಥ ಏನೆಂದರೆ, 'ಈ ಸರ್ಕಾರ ಮಲಗಿದೆ.' ಇವರುಗಳಿಗೆ ರೈತರುಗಳ ಬಗ್ಗೆ ಕಾಳಜಿ ಇಲ್ಲವೆಂದು ಸ್ಪಷ್ಟವಾಗುತ್ತದೆ. ನಿಮ್ಮ ಅಧಿಕಾರಿಗಳು ಯಾವಾಗ ರಿಪೋರ್ಟ್ ಕಳುಹಿಸಿದ್ದಾರೆಂಬ ಬಗ್ಗೆ ನಾನು ತಾರೀಖು ಕೂಡ ಕೊಡುತ್ತೇನೆ. ಈ ಸರ್ಕಾರ ಎಷ್ಟು ಗಾಢವಾದ ನಿದ್ರೆಯಲ್ಲಿ ಇದೆಯೆಂದರೆ, ಇವರನ್ನು ಎಚ್ಚರ ಮಾಡುವುದಕ್ಕೂ ಸಾಧ್ಯವಿಲ್ಲ. ಆ ರೀತಿ ನಿದ್ರೆಯಲ್ಲಿ ಇರುವುದರಿಂದಲೇ ಈ ಗತಿ ಆಗಿರುವುದು. ದಿನಾಂಕ: 31-1-1998ರಂದು ಗುಲ್ಬರ್ಗಾ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದರಲ್ಲಿ ಸ್ಪಷ್ಟವಾಗಿ ಏನು ಹೇಳಿದ್ದಾರೆಂದರೆ, A report has been obtained from the Joint director, Agriculture. According to the figures, the

estimated loss is about Rs.125 crores. The reasons in the short related to the erratic weather conditions. ದಿನಾಂಕ: 31-1-1998 ರಂದು, ಡಿಒ ನಂ. ಆರ್ಇವಿ:ಸಿಎಎಲ್: 165:97-98ರ ಪ್ರಕಾರ ಬರೆದ ಪತ್ರ ತಮ್ಮ ಮುಂದೆ ಇದೆ. ಇದರಲ್ಲಿ ಮುಂದೆ ಅವರು ಏನು ಹೇಳಿದ್ದಾರೆಂದರೆ The loss is substantial and since the livelihood of the lakhs of farmers is involved, this issue may create serious law and order situation. ಅಂದರೆ, ಈ ಮಾತನ್ನು ನಿಮ್ಮ ಜಿಲ್ಲಾಧಿಕಾರಿಗಳೇ ಹೇಳುವಾಗ, 'ಲಾ ಅಂಡ್ ಆರ್ಡ್‌ರ್ ಸಿಚ್ಯುಯೇಷನ್ ಕ್ರಿಯೇಟ್ ಆಗುತ್ತದೆ. ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಪತ್ರ ಬರೆದರೂ ಕೂಡ ಅವರು ನಿದ್ರೆ, ಮಾಡುವುದಾದರೆ ಈ ಸರ್ಕಾರಕ್ಕೆ ನಾವು ಏನು ಹೇಳಬೇಕು? ರೋಟೀನ್ ಕೆಲಸವನ್ನು ನಿಮ್ಮ ಅಧಿಕಾರಿಗಳು ಮಾಡದೇ ಹೋದರೆ, ಅದು ಈ ಸರ್ಕಾರದ ವೈಫಲ್ಯವೆಂದು ಹೇಳಬೇಕೋ ಅಥವಾ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಹತೋಟಿ ಇಲ್ಲವೆಂದು ಹೇಳಬೇಕೋ? ಫೈನಾನ್ಸ್ ಡಿಪಾರ್ಟ್‌ಮೆಂಟ್ ಇದೆ, ಚೀಫ್ ಸೆಕ್ರೆಟರಿಯವರು ಇದ್ದಾರೆ, ರೆವಿನ್ಯೂ ಇಲಾಖೆ ಇದೆ, ಅಗ್ರಿಕಲ್ಚರ್ ಇಲಾಖೆ ಇದೆ, ಡೆವಲಪ್‌ಮೆಂಟ್ ಕಮಿಷನರ್‌ರವರು ಇದ್ದಾರೆ, ಇವರುಗಳಿಗೆಲ್ಲಾ ಸಂಬಳ ಕೊಟ್ಟುಕೊಂಡು ಬರೀ ಕ್ಯಾಬಿನೆಟ್ ಮೀಟಿಂಗ್ ಸಮಯದಲ್ಲಿ ಬ್ರೀಫ್ ಮಾಡುವುದಕ್ಕೆ ಇಟ್ಟುಕೊಳ್ಳಲಾಗಿದೆಯೆ? ಇಂಥಾ ಕೆಲಸಗಳನ್ನು ಮಾಡಬೇಕೆಂದು ಈ ಅಧಿಕಾರಿಗಳನ್ನು ಏಕೆ ಕಳುಹಿಸಲಿಲ್ಲ? ಬೀದರ್‌ನಲ್ಲಿ ಈ ರೀತಿಯಾಗಿದೆಯೆಂದು ವರದಿ ಬಂದ ಎಷ್ಟು ದಿನಗಳ ನಂತರ ಸತ್ತವರ ಹೆಸರುಗಳನ್ನು ಬಹಿರಂಗಗೊಳಿಸಿದರು? ಅಲ್ಲಿನ ರೈತರುಗಳ ಮುಖಂಡರುಗಳು, ನಮ್ಮ ಪಕ್ಷದ ನಾಯಕರುಗಳು, ಬಿ.ಜೆ.ಪಿ.ನವರು ಮತ್ತು ಜನತಾದಳದ ಕೆಲವು ಮುಖಂಡರುಗಳೆಲ್ಲಾ ಸೇರಿ ಒಂದು ದೊಡ್ಡ ಅಜಿಟೇಷನ್ ಮಾಡಿದ ಮೇಲೆ, ಆವಾಗ ಇಲ್ಲಿಂದ ಟೆಲಿಗ್ರಾಮ್ ಮೇಲೆ ಟೆಲಿಗ್ರಾಮ್ ಕೊಟ್ಟು ಇಲ್ಲಿನ ಅಧಿಕಾರಿಗಳು ಕ್ಯಾಬಿನೆಟ್ ಮೀಟಿಂಗ್‌ಗೆ ನೋಟ್ ತಯಾರು ಮಾಡಿಕೊಟ್ಟರು. ಆವಾಗ, ಸತ್ತಂಥವರ ಕುಟುಂಬವರ್ಗದವರುಗಳಿಗೆ ನ್ಯಾಚುರಲ್ ಕೆಲಾಮಿಟಿ ಫಂಡ್‌ನಲ್ಲಿ ಪರಿಹಾರವನ್ನು ಕೊಡತಕ್ಕಂಥ ಪ್ರಯತ್ನ ಮಾಡೋಣ ಎಂದು ಹೇಳಲಾಗಿದೆ. ಎಲ್ಲವನ್ನೂ ಕಳೆದುಕೊಂಡು ಅಲ್ಲಿನ ರೈತರುಗಳಲ್ಲಿ 8 ಜನರು ಸತ್ತ ಮೇಲೆ ಇವತ್ತು ಇವರುಗಳು ಕಣ್ಣು ತೆರೆಯುತ್ತಿರುವುದರಿಂದ ಯಾರಿಗಾಗಿ ಈ ಸರ್ಕಾರ ಇರಬೇಕು? ಸರ್ಕಾರ ಅಂದರೆ, ಜನರ ಕಲ್ಯಾಣಕ್ಕಾಗಿ, ಜನರ ಅಭಿವೃದ್ಧಿಗಾಗಿ, ರೈತರ ಅಭಿವೃದ್ಧಿಗಾಗಿ ಕೆಲಸ ಮಾಡಬೇಕು. ಜನರ ಕಷ್ಟ ಕಾಲದಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವಿಲ್ಲವೆಂದ ಮೇಲೆ ಇವರು ಇನ್ನೂ ಏಕೆ ಇದ್ದಾರೆ? ಅದಕ್ಕಾಗಿಯೇ ಮೊನ್ನೆ ನಡೆದ ಚುನಾವಣೆಯಲ್ಲಿ ಇವರ ಪರವಾಗಿ ಜನರು ಮತ ಕೊಟ್ಟಿಲ್ಲ. ಇವರ ಪಾಲಿಸಿ, ಇವರ ಪ್ರೋಗ್ರಾಮ್, ಇವರ ಡೆವಲಪ್‌ಮೆಂಟ್, ಮತ್ತು ಜನರ ಸಮಸ್ಯೆಗಳಿಗೆ ಇವರು ಹೇಗೆ ಸ್ಪಂದಿಸುತ್ತಿದ್ದಾರೋ ಅದನ್ನು ನೋಡಿಕೊಂಡೇ ಜನರು ತೀರ್ಮಾನ ಕೊಟ್ಟಿದ್ದಾರೆ. ನಿಜವಾಗಲೂ ಇವರು ಜನ

ಸಂಪರ್ಕವನ್ನು ಕಳೆದುಕೊಂಡಿದ್ದಾರೆ ಮತ್ತು ಜನ ಬೆಂಬಲವನ್ನು ಕೂಡಾ ಕಳೆದುಕೊಂಡಿದ್ದಾರೆ. ಇದನ್ನು ನಾನು ಹೇಳಲೇಬೇಕಾಗುತ್ತದೆ. ಇನ್ನೂ ನಮ್ಮ ಸರ್ಕಾರ ಗಟ್ಟಿಯಾಗಿದೆ, ಕೊನೆಯವರೆಗೂ ನಾವು ಇದೇ ರೀತಿ ಮಜಾ ಮಾಡಿಕೊಂಡು ಹೋಗೋಣ ಎನ್ನುವ ಮನೋಭಾವ ಇದ್ದರೆ, ಅದು ಖಂಡಿತವಾಗಿ ರಾಜ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ, ಈ ರಾಜ್ಯದಲ್ಲಿರತಕ್ಕಂಥ ಜನತೆಗೆ ದ್ರೋಹ ಮಾಡಿದಂತಾಗುತ್ತದೆ. ಯಾವ ಜನರು ಅವರುಗಳಿಗೆ ಅಧಿಕಾರದಲ್ಲಿ ಕೂಡಿಸಿದ್ದಾರೋ ಅವರುಗಳಿಗೆ ಅವರು ದ್ರೋಹ ಮಾಡಿದಂಥಾಗುತ್ತದೆ. ಅದಕ್ಕಾಗಿ, ಬೀದರ್ ಜಿಲ್ಲಾಧಿಕಾರಿಗಳು ಮತ್ತು ಅಲ್ಲಿನ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಆಫೀಸರ್‌ರವರು ಕಳುಹಿಸಿರತಕ್ಕಂಥ ರಿಪೋರ್ಟ್ ಪ್ರಕಾರ ಅಲ್ಲಿನ ಜನರುಗಳಿಗೆ ಕಾಂಪೆನ್‌ಸೇಷನ್ ಕೊಡಬೇಕು. ಯಾರು 8 ಜನ ರೈತರುಗಳು, ಸಾಲವನ್ನು ತೀರಿಸುವುದಕ್ಕೆ ಸಾಧ್ಯವಿಲ್ಲವೆಂದು ಮನಗಂಡು ಸೂಯಿಸೈಡ್ ಮಾಡಿಕೊಂಡಿದ್ದಾರೋ ಆ ಕುಟುಂಬದವರಿಗೆ ನ್ಯಾಚುರಲ್ ಕೆಲಾಮಿಟಿ ಫಂಡ್ ಮೂಲಕ ಒಂದೊಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡಬೇಕು. ಈ ಪರಿಹಾರವನ್ನು ಕೊಡುವುದಕ್ಕೂ ಇವತ್ತು ಮೀನಾಮೇಷ ಎಣಿಸಲಾಗುತ್ತಿದೆ. ಅದಕ್ಕಾಗಿ ಸತ್ತಿದ್ದಾರೋ ಅಥವಾ ಬೇರೆ ಯಾವ ಕಾರಣಕ್ಕೆ ಸತ್ತಿದ್ದಾರೋ ಎಂದು ಹೇಳಲಾಗುತ್ತಿದೆ. ಅದರ ಬಗ್ಗೆ ಇವರುಗಳಿಗೆ ಅನುಮಾನವಿದ್ದರೆ, ಒಂದು ಸಿ.ಒ.ಡಿ., ಎನ್‌ಕ್ವೈರಿ ಮಾಡಿಸಿ ಅಥವಾ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ. ಯಾವುದಾದರೂ ತಪ್ಪಿ ಒಂದೆರಡು ಕೇಸ್‌ನಲ್ಲಿ ಅತಿಶಯೋಕ್ತಿ ಇದ್ದರೆ ಅವರುಗಳಿಗೆ ಬೇರೆ ಯಾವ ರೀತಿಯಿಂದ ಸಹಾಯ ಮಾಡಬೇಕೋ ಅದನ್ನು ಮಾಡಿ.

1.00 ಪಿ.ಎಂ

ಆದರೆ ಏನೂ ನಡೆದಿಲ್ಲವೆಂದು ನೀವು ಹೇಳಿದರೆ ಖಂಡಿತವಾಗಿ ಇದು ಸರಿಯಲ್ಲ. ನಿಮ್ಮ ಜಿಲ್ಲಾಧಿಕಾರಿಗಳು ಒಪ್ಪಿಕೊಂಡಿದ್ದಾರೆ. ನಿಮ್ಮ ಎಸ್.ಪಿ.ಯವರು ಒಪ್ಪಿಕೊಂಡಿದ್ದಾರೆ. ಅದೇರೀತಿಯಾಗಿ ಎಫ್.ಐ.ಆರ್. ಕೂಡ ದಾಖಲೆಯಾಗಿದೆ. ಯಾವ ರೈತರು ಬೆಳೆಯನ್ನು ಕಳೆದುಕೊಂಡಿದ್ದಾರೆ ಅವರಿಗೆ ದಯವಿಟ್ಟು ಕನಿಷ್ಟ ಪಕ್ಷ ನೀವು ಒಂದೊಂದು ಎಕರೆಗೆ ಒಂದು ಸಾವಿರ ರೂಪಾಯಿಗಳನ್ನಾದರೂ ಕೊಡಿ. ಒಂದು ಹೆಕ್ಟೇರ್‌ಗೆ 2500 ಆಗಬಹುದು. ನಿಮ್ಮ ಕಡೆ ಸ್ವಲ್ಪ ನೀರಾವರಿ ಇರುವುದರಿಂದ ಪಂಪ್‌ಸೆಟ್ಟು ಇರುವುದರಿಂದ, ಒಂದು ಬೆಳೆ ಹೋದರೆ, ಇನ್ನೊಂದು ಬೆಳೆಯನ್ನು ಮಾಡಿಕೊಳ್ಳಬಹುದು. ಒಂದು ಸಲ ಹೋದರೆ ಇವರು ಒಂದು ವರ್ಷ ಕಾಯಬೇಕು. ಏಕೆಂದರೆ ನಮಗೆ ಬರತಕ್ಕಂಥದ್ದು ಹಿಂಗಾರಿ ಮತ್ತು ಮುಂಗಾರಿ ಇವರೆಡೇ. ಖರೀಫ್‌ನಲ್ಲಿ ಕಮರ್ಷಿಯಲ್ ಕ್ರಾಪ್ಸ್ ಇದು ಕುಸುಬಿ ಇರಬಹುದು, ಕಾಳುಗಳು ಇರಬಹುದು. ರಾಬಿನಲ್ಲಿ ಜೋಳ ಹೋಯಿತು. ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಹಿಡಿದು ಇದನ್ನು ಮಾಡದೇ ಹೋದರೆ, ಅಲ್ಲಿನ ಜನ ಈಗಾಗಲೇ ವಲಸೆ ಹೋಗುತ್ತಿದ್ದಾರೆ. ಬೆಂಗಳೂರಿಗೆ ಅನೇಕ ಜನ ಕೆಲಸಕ್ಕಾಗಿ ಬರುತ್ತಿದ್ದಾರೆ, ಬಾಂಬೆಗೆ

ಹೋಗುತ್ತಿದ್ದಾರೆ. ಅನೇಕ ಕಡೆ ಇವತ್ತಿನ ದಿವಸ ಅಗ್ರಿಕಲ್ಚರ್ ಲೇಬರ್ಸ್‌ಗೆ ಗತಿ ಇಲ್ಲ ಬಿಡಿ, ಏಕೆಂದರೆ ರೈತರಿಗೆ ಈ ಪರಿಸ್ಥಿತಿಯಾದ ಮೇಲೆ ಕೂಲಿಗಾರರ ಗತಿ ಏನು? ಕೂಲಿಗಾರರಿಗೆ ಕೂಲಿ ಸಿಗುವ ಪ್ರಶ್ನೆಯೇ ಇಲ್ಲ; ಅದು ಸೆಕೆಂಡರಿ. ಅವರು ಈಗಾಗಲೇ ಊರು ಬಿಟ್ಟಿದ್ದಾರೆ. ತಕ್ಷಣ ಇದರ ಬಗ್ಗೆ ತಾವು ಕ್ರಮವನ್ನು ಜರುಗಿಸುವುದು ಮತ್ತು ಒಂದೊಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಯಾವ ರೈತರು ಇದ್ದಾರೆ, ಅವರಿಗೆ ಕೊಡಬೇಕು. ಸುಮಾರು ಲಕ್ಷಾಂತರ ಎಕರೆಯಲ್ಲಿ ಬೆಳೆಯನ್ನು ಕಳೆದುಕೊಂಡಿದ್ದಾರೆ, ಪ್ರತಿ ಹೆಕ್ಟೇರ್‌ಗೆ ಒಂದು ಸಾವಿರ ರೂಪಾಯಿಗಳನ್ನು ಕನಿಷ್ಠ ಪಕ್ಷ ಅವರಿಗೆ ಕೊಡತಕ್ಕಂಥ ವ್ಯವಸ್ಥೆ ಸರ್ಕಾರ ಮಾಡಬೇಕು ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ತಾವು ಇದನ್ನು ಪೂರ್ತಿಯಾಗಿ ಇನ್ನೂ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ನಮ್ಮ ನಿಲುವಳಿ ಸೂಚನೆಯನ್ನು ತಾವು ಒಪ್ಪಿಕೊಂಡಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಇಷ್ಟೇ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸರಿಯ್ಹಾಗುವುದಿಲ್ಲ. ಏಕೆಂದರೆ ಕೆಲವು ವಿಷಯಗಳು ಇವೆ, ನಮ್ಮ ಜಿಲ್ಲಾಧಿಕಾರಿಗಳ ಲೆಟರ್ ಇದೆ, ಜಂಟಿ ನಿರ್ದೇಶಕರು ಯಾವ ರೀತಿಯಾಗಿ ಹೇಳಿದ್ದಾರೆ, ಅಲ್ಲಿನ ರೈತರು ಯಾವ ರೀತಿಯಾಗಿ ಹೇಳಿದ್ದಾರೆ. ಮತ್ತು ಅಲ್ಲಿಂದ ಕೆಲವು ಹಳ್ಳಿಗಳಿಗೆ ಇವರೇ ಹೋಗಿ ಒತ್ತಾಯ ಮಾಡಿ ಆತ್ಮಹತ್ಯೆಯನ್ನು ಈ ಕಾರಣಕ್ಕಾಗಿ ಮಾಡಿಕೊಂಡಿಲ್ಲ ನಿಮ್ಮ ಬೇರೆ ಕಾರಣಗಳಿವೆ ಎಂದು ಒತ್ತಾಯ ತಂದು ಸ್ಟೇಟ್‌ಮೆಂಟ್‌ಗಳನ್ನು ಕೂಡ ಕೆಲವರು ಹೋಗಿ ತಂದಿದ್ದನ್ನು ನಾವು ಪ್ರಸ್ತಾಪ ಮಾಡಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ತಾವು ಅವಕಾಶ ಮಾಡಿಕೊಡಬೇಕು. ಮತ್ತು ಈ ಸದನದಲ್ಲಿ ಇದರ ಬಗ್ಗೆ ಚರ್ಚೆ ನಡೆಯಲಿ ಎಂದು ಹೇಳಿ; ಎಂದೂ ಕೂಡ ಯಾವ ಜಿಲ್ಲೆಯಲ್ಲಿ ಈ ರೀತಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಂಢಂಥ ಒಂದು ಕಾರಣ ಇಲ್ಲ. ಇವತ್ತು ಬೀದರ್ ಜಿಲ್ಲೆಯಲ್ಲಿ ನಡೆದಿದೆ. ಅನೇಕ ಕಡೆ ತೊಗರಿ ಬೆಳೆಗೆ ಕೊಟ್ಟಿಲ್ಲವೆಂದು ಅಲ್ಲ ಸೂರ್ಯಕಾಂತಿಗೂ ಕೊಟ್ಟಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಆವಾಗ ಮೊಯ್ಲಿಯವರು 11 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ, ಸ್ವಲ್ಪ ಮನಸ್ಸು ಮಾಡಿ ತಾವು ಇದನ್ನು ನೋಡಿದ್ದರೆ ಖಂಡಿತವಾಗಿ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಇಷ್ಟು ಜನ ಸಾಯುತ್ತಾ ಇರಲಿಲ್ಲ. ಇವತ್ತು ಇಷ್ಟು ಜನ ತಮ್ಮ ಜೀವನವನ್ನು ಕಳೆದುಕೊಳ್ಳಬೇಕಾದರೆ ಈ ಸರ್ಕಾರ ಕಾರಣ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳಬೇಕಾಗುತ್ತದೆ. ಇಷ್ಟು ಬೆಳೆ ನಾಶವಾಗಿದೆ ಲಕ್ಷ್ಯ ಕೊಡದೆ ಇದ್ದ ಕಾರಣ ಮತ್ತು ಯಾವ ಯಾವ ಕಂಪನಿಯಿಂದ ಕೀಟನಾಶಕವನ್ನು ತಂದು ಇವತ್ತಿನ ದಿವಸ ಉಪಯೋಗ ಮಾಡಿದ್ದಾರೆ, ಆ ಕಂಪನಿಯವರು ಯಾರಿದ್ದಾರೆ, ಅವರ ಮೇಲೆ ಕೂಡ ಕ್ರಮ ಜರುಗಿಸಬೇಕು. ಅನೇಕ ಬಾರಿ ಮೀಟಿಂಗ್ ಕರೆಯುತ್ತಾರೆ, ನಿಮ್ಮ ಅಗ್ರಿಕಲ್ಚರ್ ಆಫೀಸರ್ಸ್ ಮೀಟಿಂಗ್ ಕರೆಯುತ್ತಾರೆ. ಒಂದೆರಡು ವಾರ ಕರೆದು ಆಮೇಲೆ ಬಿಟ್ಟು ಬಿಡುವುದು. ಆದರಿಂದ ಅವರಿಗೆ ಏನಾಗಿದೆ, ವರ್ಷದ ಕೊನೆಗೆ ಬಂದು ಆರ್ಡರ್ ತೆಗೆದುಕೊಂಡು

ಹೋಗುತ್ತಾರೆ. ''ಸಂಕಟ ಬಂದಾಗ ವೆಂಕಟರಮಣ ಎನ್ನುವುದು'' ತೊಂದರೆಯಲ್ಲಿದ್ದಾಗ ಆರ್ಡರ್‌ಗಳನ್ನು ತೆಗೆದುಕೊಂಡು ಹೋಗುವುದು. ಸಿಕ್ಕಾಪಟ್ಟೆ ಪರ್ಚೇಸ್ ಮಾಡುವುದು, ತಮಗೆ ಬೇಕಾದಲ್ಲಿ ಕೊಡುವುದು. ಕೊನೆಗೆ ಈ ಪರಿಸ್ಥಿತಿ ಉಂಟಾಗಿ, ಇವತ್ತು ರೈತರು ತಮ್ಮ ಜೀವನವನ್ನು ಕಳೆದುಕೊಳ್ಳುವಂತಾಗಿದೆ. ಅವರು ಏನು ಹೇಳುತ್ತಿದ್ದಾರೆ ಸ್ವಲ್ಪ ಕೇಳಿ, ಆಲೂಗಡ್ಡೆ ಆಂಧ್ರದ ರೈತರು ಹಾಳಾದರೂ ಕೊಟ್ಟಿದ್ದಾರೆ, ಕರ್ನಾಟಕದ ರೈತರು ಹಾಳಾದರೂ ಕೊಟ್ಟಿದ್ದಾರೆ, ಆಲೂಗಡ್ಡೆಗೆ 45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಹಾಗೆ ಯೋಚನೆ ಮಾಡಿ ಎಂದು ಹೇಳುತ್ತಿದ್ದಾರೆ. ಅವರು ರೈತರೇ ಇವರು ರೈತರೇ; ಅದಕ್ಕಾಗಿ ನಾನು ಇವತ್ತು ತಮ್ಮ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಷ್ಟೆಲ್ಲಾ ಅನಾಹುತಕ್ಕೆ ಕಾರಣಕರ್ತರು ಸರ್ಕಾರದವರು ಮತ್ತು ಸರ್ಕಾರದ ನಿರ್ಲಕ್ಷತೆ, ಅಧಿಕಾರಿಗಳ ವಿಶೇಷವಾದ ನಿರ್ಲಕ್ಷತೆ ಮತ್ತು ಅದರ ಬಗ್ಗೆ ಯಾವ ರೀತಿ ಇರಲಿ, ಇವತ್ತು ಈ ಕೆಲಸ ಏನು ಅಲ್ಲಿ ನಡೆದಿದೆ, ಇದರ ಬಗ್ಗೆ ಕಾಳಜಿ ಇಲ್ಲದೆ ಇರತಕ್ಕಂಥ ಸರ್ಕಾರ ಇವತ್ತು ನಮ್ಮ ಮುಂದಿದೆ. ಇದರ ಬಗ್ಗೆ ಅವರು ಏನು ಹೇಳುತ್ತಾರೆ ನಾನು ನಿರೀಕ್ಷೆ ಮಾಡುತ್ತೇನೆ. ಆಮೇಲೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಸನ್ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆ ಮೂಲಕ ಬೀದರ್ ಜಿಲ್ಲೆಯಲ್ಲಿ ಕನಿಷ್ಟ 10 ಜನ ರೈತರು ಅವರು ಬೆಳೆದಂಥ ತೊಗರಿ ಬೆಳೆ ನಾಶವಾಗಿ ಸಾಲವನ್ನು ತೀರಿಸುವುದಕ್ಕಾಗದೆ ಜೀವನ ನಡೆಸುವುದಕ್ಕೆ ಆಗದೆ ಜಿಗುಪ್ಸೆಗೊಂಡು ವಿಷವನ್ನು ಸೇವಿಸಿ ನೇಣು ಹಾಕಿಕೊಂಡು ಸತ್ತಂಥದ್ದು ಪತ್ರಿಕೆಯಲ್ಲಿ ವರದಿಯಾಗಿದೆ. ನಾನು ಬೀದರ್, ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರವಾಸ ಮಾಡಿದಂಥ ಕಾಲದಲ್ಲಿ ಯಾವ ಒಂದು ದಾರುಣ ಸ್ಥಿತಿ ಇದೆ ಎನ್ನುವುದನ್ನು ಕಣ್ಣಾರೆ ನೋಡಿ ಬಂದಿದ್ದೇನೆ. ಪರಿಹಾರ ಕೊಡುವುದರ ಬಗ್ಗೆ ಆಮೇಲೆ ಮಾತನಾಡುತ್ತೇನೆ. ನಾನು ಸರ್ಕಾರಕ್ಕೆ ನೇರವಾಗಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಆ ಬೇಜವಾಬ್ದಾರಿ ಜಿಲ್ಲಾಧಿಕಾರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಸಾವು ರೈತ ಬೆಳೆಯನ್ನು ಹಾಳುಮಾಡಿಕೊಂಡ ಪರಿಣಾಮ ಅಲ್ಲ, ಅದಕ್ಕೆ ಬೇರೆ ಕಾರಣ ಇದೆ ಎಂದು. ಅದೇ ಜಿಲ್ಲೆಯ ಉಸ್ತುವಾರಿ ಸಚಿವರು ಹೇಳುತ್ತಾರೆ; ಜಿಲ್ಲಾಧಿಕಾರಿಗಳು ಹೇಳುವುದು ಮಾರ್ಚ್ 4ನೇ ತಾರೀಖು, ನಿಮ್ಮ ಆ ಜಿಲ್ಲೆಯ ಮಂತ್ರಿಗಳು ಹೇಳುವುದು ಮಾರ್ಚ್ 7ನೇ ತಾರೀಖು. ನಾನು ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ರೈತರ ಆತ್ಮಹತ್ಯೆಯ ಸತ್ಯಸಂಗತಿ ಬೆಳೆನಾಶದಿಂದ ಆಗಿದೆ. ನಿಮ್ಮ ಮುಖ್ಯಮಂತ್ರಿಗಳು ಹೇಳುತ್ತಾರೆ ಫೆಬ್ರವರಿ 17ನೇ ತಾರೀಖು ಚುನಾವಣೆಯ ಗುಂಗಿನಲ್ಲಿ ಹೇಳಿದಾಗ, ಬೆಳೆ ಹಾನಿ ಉಂಟಾದ ರೈತರಿಗೆ ಪರಿಹಾರವನ್ನು ಕೊಡುತ್ತೇವೆ, ಇದಕ್ಕಾಗಿ ಸಾವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅವರೂ ಸಹ ನಾನು ಪರಿಹಾರ ಕೊಡುತ್ತೇನೆಂದು ಹೇಳಿದ್ದಾರೆ, ಈ ಮೂರು ವಿಷಯಗಳು ಪತ್ರಿಕೆಯಲ್ಲಿ ಬಂದಿವೆ. ಇದರಲ್ಲಿ ಯಾವುದು ಸತ್ಯ? ಯಾರ ಜೀವನದ

ಜೊತೆಗೆ ನೀವು ಚೆಲ್ಲಾಟ ನಡೆಸಿದ್ದೀರಿ? ವಾಸ್ತವ ಸತ್ಯಸಂಗತಿಯನ್ನು ಮರೆಮಾಡಿ ಚುನಾವಣೆಯ ಸಮಯದಲ್ಲಿ ನೀವು ಧೂಳಿಪಟ ಆಗುತ್ತೀರಿ ಎನ್ನುವ ಭಯದಿಂದ ಈ ತರಹ ಹೇಳಿಕೆಯನ್ನು ಕೊಡಿಸಿರುತ್ತೀರಿ. ಅಥವಾ ಈ ಒಂದು ಪರಿಸ್ಥಿತಿ ರಾಜ್ಯದಲ್ಲಿ, ಇತಿಹಾಸದಲ್ಲಿ, ಸಾಲ ತೀರಿಸುವುದಕ್ಕಾಗದೆ ತಾವು ಬೆಳೆದಂಥ ಬೆಳೆ ಕೈಗೆ ಸಿಗದೆ ಜೀವನ ಮಾಡುವುದಕ್ಕೆ ಕಷ್ಟವೆಂದು ಹೇಳಿ ಮನವರಿಕೆ ಮಾಡಿಕೊಂಡು ಜಿಗುಪ್ಸೆಗೊಂಡು ಈ ಸಾವಿಗೆ ಈಡಾದರೂ, ನಿಮ್ಮ ಮುಖ್ಯಮಂತ್ರಿಗಳಿಗೆ ಆ ಸ್ಥಳಕ್ಕೆ ಭೇಟಿಕೊಟ್ಟು ವಾಸ್ತವ ಸತ್ಯಸಂಗತಿಯನ್ನು ತಿಳಿದುಕೊಂಡು ಬರುವುದಕ್ಕೆ ಪುರುಸೊತ್ತು ಇತ್ತು ಏನು? ಅದನ್ನು ಬಿಟ್ಟು ಏನು ಮಾಡುತ್ತಾರೆ ಮುಖ್ಯಮಂತ್ರಿಯಾಗಿ. ಹೆಲಿಕ್ಯಾಫರ್ ಕೊಟ್ಟಿರುವುದು ಏತಕ್ಕೆ? ಮೋಜು ಮಾಡುವುದಕ್ಕಾ, ಸ್ವಂತ ಓಡಾಡುವುದಕ್ಕಾ? ಚುನಾವಣೆ ನಡೆಯುತ್ತಾ ಇತ್ತು ಸಂಬಂಧಪಟ್ಟ ಜಿಲ್ಲಾಮಂತ್ರಿಗಳು ತಕ್ಷಣ ಹೋದರಾ? ನನಗೆ ಅನ್ನಿಸುತ್ತದೆ, ನಿಮಗೆ ಏನಾದರೂ ಕಿಂಚಿತ್ತು ಜವಾಬ್ದಾರಿ ಇದ್ದರೆ, ಈ ಸದನಕ್ಕೆ ಬರುವುದಕ್ಕೆ ಬಹುಶಃ ನಾವು ಬರುತ್ತೇವೆಯೋ ಇಲ್ಲವೋ, ಎಲ್ಲಿ ಜಾಗ ಖಾಲಿ ಮಾಡಿಕೊಂಡು ಹೋಗುತ್ತೇವೆಯೋ, ಮುಂದೆ ಬಂದವರು ಉತ್ತರ ಕೊಡುತ್ತಾರೆ. ನಾನೇನು ಮಾಡಲಿ ಎಂದು ಬಿಟ್ಟಿದ್ದೀರಾ? ಇನ್ನು 4-6 ದಿವಸಗಳಲ್ಲಿ ತಾವು ಏನಾಗುತ್ತೀರಿ, ಆಗುತ್ತೀರಾ ಅದು ಬೇರೆ ವಿಷಯ. ನಾನು ನಿಮ್ಮನ್ನು ಕೇಳುತ್ತೇನೆ. ಚುನಾವಣೆಯ ಸಂದರ್ಭಧಲ್ಲಿ ಇವತ್ತಿನವರೆಗೆ ನೀವು ಮಂತ್ರಿಮಂಡಲದಲ್ಲಿ ಮೊದಲನೇ ತೀರ್ಮಾನ, ನಿಮಗೆ ಮನವರಿಕೆಯಾಗಿದ್ದರೆ, ಸತ್ಯವಾಗಿದ್ದರೆ, ಆ ಸತ್ತಂಥ ರೈತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರ ಕೊಟ್ಟಿದ್ದೀರೊ? ಬೀದರ್, ಗುಲ್ಬರ್ಗಾ ಈ ರೀತಿ ಬೆಳೆ ಸಂಪೂರ್ಣ ನಾಶವಾಗುವುದಕ್ಕೆ ಏನು ಕಾರಣವಾಗಿದೆ, ಆ ಕಾರಣಕ್ಕಾಗಿ ಒಂದು ಪರಿಹಾರವನ್ನು ಘೋಷಣೆ ಮಾಡುವುದು ಅಲ್ಲ, ಹಣವನ್ನು ಕೊಟ್ಟು ಬಂದಿದ್ದೇವೆ ಇದನ್ನು ಹೇಳಿ ಸದನಕ್ಕೆ ಬಂದಿದ್ದರೆ, ಯಾವ ಜನಾದೇಶ ನಿಮ್ಮ ವಿರುದ್ಧ ನಿಮ್ಮನ್ನು ನೆಲ ಕಚ್ಚುವಂತೆ ಮಾಡಿತ್ತು ಸ್ವಲ್ಪ ಚೇತರಿಸಿಕೊಂಡು, ಹೋಗುವ ಕಾಲಕ್ಕೆ ಆ ಸದ್ಬುದ್ಧಿ ಬಂದು ನಿಮ್ಮ ಕಾರ್ಯವನ್ನು ನಿರ್ವಹಿಸುವುದಕ್ಕೆ ಹೊರಟಿದ್ದೀರಿ ಎನ್ನುವಂತಹ ಭಾವನೆ ಆದರೂ ನಮಗೆ ಮೂಡುತ್ತಾ ಇತ್ತು. ಬಹುಶಃ ಇದು ರೈತರ ಮಕ್ಕಳ ಜೊತೆಗೆ ಚೆಲ್ಲಾಟ ನಡೆಸುವಂಥ ಮಣ್ಣಿನ ಮಕ್ಕಳ ಸರಕಾರ ಇದು ಎಂದು ಹೇಳಬೇಕಾಗುತ್ತದೆ. ಮಣ್ಣಿನ ಮಕ್ಕಳ ಸರಕಾರವೇ ಇವೊತ್ತು ಇರುವಾಗ ರೈತರು ವಿಷ ಕುಡಿದು ಸಾಯುವಂಥ, ನೇಣು ಹಾಕಿಕೊಂಡು ಸಾಯುವಂಥ ಸ್ಥಿತಿಗೆ ಅವರನ್ನು ದೂಡಿರುವ ನಿಮಗೆ ಅಧಿಕಾರದಲ್ಲಿ ಮುಂದವರಿಯತಕ್ಕಂಥ ಹಕ್ಕು ಇಲ್ಲ. ಒಂದು ಕಡೆ ಜನಾದೇಶ, ಇನ್ನೊಂದು ಕಡೆ ರೈತರ ಹೆಸರು ಹೇಳಿಕೊಳ್ಳುತ್ತೀರಿ. ನಮ್ಮ ಪ್ರಧಾನಿಯವರು ದೆಹಲಿಯಲ್ಲಿ ಮಾತನಾಡಿದರು. ಅವರು ಪ್ರಧಾನಿಯಾಗಿ ಅಧಿಕಾರವನ್ನು ಸ್ವೀಕಾರ ಮಾಡಿ ಭಾಷಣ ಮಾಡತಕ್ಕಂಥ ಕಾಲದಲ್ಲಿ ಮೊದಲು ಹೇಳಿದಂತಹ ಮಾತು ಏನು? ನಾನು ಮುಖ್ಯಮಂತ್ರಿಯಾಗಿ ಕರ್ನಾಟಕದಿಂದ ಬಂದಿದ್ದೇನೆ. ನಾನು ರೈತರ ಸಂಕಷ್ಟಗಳಿಗೆ ಸ್ಪಂದಿಸಿ ಬಂದಿದ್ದೇನೆ. ಕರ್ನಾಟಕದಲ್ಲಿ ಮಾಡಿದ ಸಾಧನೆಗಳನ್ನು ಇಡೀ ದೇಶಕ್ಕೆ ಕಾರ್ಯರೂಪಕ್ಕೆ ತರುವುದಕ್ಕೋಸ್ಕರ ನಾನು ಮಣ್ಣಿನಿಂದ ಎದ್ದು ಬಂದಿದ್ದೇನೆ ಎಂದು

ಹೇಳಿದ್ದರಲ್ಲಾ, ಹೀಗೆ ಹೇಳಿ ಈ ಜನತೆಗೆ ನೀವು ದ್ರೋಹ ಮಾಡಿಲ್ಲವೇ? ನಾವು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹಲವು ಸಾರಿ ಮಾನ್ಯ ಭೈರೇಗೌಡರ ಬಗ್ಗೆ ಮಾತನಾಡುತ್ತಾ ಅವರು ರೈತರ ಬಗ್ಗೆ ಕಳಕಳಿಯುಳ್ಳವರು ಎಂದು ಹೇಳುತ್ತಿದ್ದೆವು. ಆ ಕಳಕಳಿ ನಿಮಗೆ ಎಲ್ಲಿದೆ? ನೀವು ಮೊಸಳೆ ಕಣ್ಣೀರು ಸುರಿಸುತ್ತಿದ್ದೀರಿ? ನೀವು ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದ್ದೀರಿ ಎಂದು ರಾಜೀನಾಮೆ ಕೊಟ್ಟ ಪ್ರಯತ್ನ ಮಾಡಿದರೇ ಹೊರತು, ನೀವು ರಾಜೀನಾಮೆ ಕೊಡಬೇಕಾದುದು ರೈತರ ರಕ್ಷಣೆಯಲ್ಲಿ ನೀವು ವಿಫಲರಾದ ಬಗ್ಗೆ. ಚುನಾವಣೆಯ ಗಡಿಬಿಡಿಯಲ್ಲಿ ನಿಮಗೆ ರಕ್ಷಣೆಯನ್ನು ರೈತರ ಕುರಿತಾಗಿ ಮಾಡುವುದು ಈ ಗೊಂದಲದಲ್ಲಿ ಸಿಕ್ಕಿಕೊಂಡು ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗಲಿಲ್ಲ ಎಂಬುದನ್ನು ನಿಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಒಪ್ಪಿಕೊಂಡು ರಾಜೀನಾಮೆಯನ್ನು ಕೊಟ್ಟಿದ್ದರೆ ಅದನ್ನು ನಾವು ಒಪ್ಪುತ್ತಾ ಇದ್ದೆವು; ನಿಮಗೆ ಶಹಭಾಶ್‌ಗಿರಿಯನ್ನು ಕೊಡುತ್ತಾ ಇದ್ದೆವು. ನೀವು ಏತಕ್ಕಾಗಿ ವಾಸ್ತವಾಂಶಗಳನ್ನು ಮುಚ್ಚಿಹಾಕುವ ಕೆಲಸವನ್ನು ಮಾಡುತ್ತಾ ಇದ್ದೀರಿ ಎಂಬುದನ್ನು ಕೇಳಬಯಸುತ್ತೇನೆ. ಈ ಕಳಪೆ ಕೀಟನಾಶಕಗಳ ಮಾರಾಟದ ತಡೆಗೆ ಒಂದು ಕಾನೂನನ್ನು ಜಾರಿಗೆ ತರಬೇಕಾಗಿದೆ. ಅವುಗಳ ಗುಣಮಟ್ಟವನ್ನು ನಿಯಂತ್ರಣ ಮಾಡುವಂಥ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಬಹುಪಾಲು ರೈತರು ಈ ಕಳಪೆ ಕ್ರಿಮಿನಾಶಕಗಳನ್ನು ನಾಲ್ಕಾರು ಬಾರಿ ಸಾಲಸೋಲಗಳನ್ನು ಮಾಡಿ ಖರೀದಿಸಿ ಸಿಂಪಡಿಸಿದ ಮೇಲೂ ಪರಿಣಾಮವಾಗದೆ ಸರ್ವನಾಶವಾದ ಮೇಲೆ ಈ ಒಂದು ದುಸ್ಥಿತಿಗೆ ಬಂದರು, ತಮ್ಮ ಪ್ರಾಣವನ್ನು ತಾವೇ ಕಳೆದುಕೊಳ್ಳುವಂಥ ಸ್ಥಿತಿಗೆ ಬಂದರಲ್ಲಾ ನಿಮ್ಮ ಅಧಿಕಾರಿಗಳು ಯಾರು ಗುಣಮಟ್ಟವನ್ನು ನಿಯಂತ್ರಣ ಮಾಡಲು ಇದ್ದಾರಲ್ಲಾ, ಅವರು ಕಳಪೆ ಕ್ರಿಮಿನಾಶಕಗಳನ್ನು ಮಾರಲು ಬೆಂಬಲವನ್ನು ಕೊಡುತ್ತಿದ್ದಾರಲ್ಲಾ, ನೀವು ಅಂಥವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದೀರೋ? ಅಂಥ ಕಂಪನಿಗಳನ್ನು ಏನಾದರೂ ಮುಚ್ಚಿಸಿದ್ದಿರೋ? ಸರಕಾರ ಅಂದರೆ ಏನು? ಈ ದೇಶಕ್ಕೆ ಅನ್ನ ಕೊಡುವಂಥ ನೂರಕ್ಕೆ 75ರಷ್ಟು ಜನರು ವಾಸ ಮಾತಾಡುತ್ತಿರುವಂಥ ಗ್ರಾಮೀಣ ಜನತೆಯು ಎದುರಿಸತಕ್ಕಂಥ ಸಮಸ್ಯೆಗಳನ್ನು ವ್ಯವಸ್ಥೆಗೊಳಿಸಲು ಇರುವುದು. ಇಂಥ ಗ್ರಾಮೀಣ ಜನತೆಯು ಪ್ರಾಣದೊಂದಿಗೆ ಚೆಲ್ಲಾಟವಾಡುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮೂರು ವರ್ಷಗಳಲ್ಲಿ ಮೂರು ಹೆಜ್ಜೆಗಳಷ್ಟಾದರೂ ನೀವು ಪ್ರಯತ್ನ ಮಾಡಿದ್ದೀರೋ? ಇಲ್ಲ.... ನನಿಗನ್ನಿಸುತ್ತದೆ, ಬೀದರ್ ಗುಲ್ಬರ್ಗಾ ಜಿಲ್ಲೆಗಳಲ್ಲಿ ರೈತರು ನಿಮಗೆ ಹೇಗೆ ಬುದ್ಧಿಕಲಿಸಬೇಕು? ಬಡಿಗೆ ತೆಗೆದುಕೊಂಡು ಅವನು ನಿಮಗೆ ಹೊಡೆಯಲು ಆಗುತ್ತದೆಯೇ ಅಥವಾ ನಿಮ್ಮನ್ನು ನಿಮ್ಮ ಶಾಸಕರನ್ನು ಓಡಿಸಿಕೊಂಡು ಬರಲು ಆಗುತ್ತದೆಯೇ, ಇಲ್ಲ. ಆದರೆ ಅವರು ತಮ್ಮದೇ ಆದ ರೀತಿಯಲ್ಲಿ, ತಮ್ಮ ಮತವನ್ನು ಹಾಕುವುದರ ಮೂಲಕ, ಈ ಅನಿಷ್ಟ ಸರಕಾರ, ಈ ದರಿದ್ರ, ಸರಕಾರ, ರೈತರ ಜೀವನದೊಂದಿಗೆ ಚೆಲ್ಲಾಟ ಮಾಡುತ್ತಿರತಕ್ಕಂಥ ಸರಕಾರ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯಬಾರದು ಎಂದು ಹೇಳಿ, ಮತದಾನದ ಮೂಲಕ ತನ್ನ ತೀರ್ಪನ್ನು ಕೊಟ್ಟಿದ್ದಾನೆ. ನೀವು ಏತಕ್ಕೆ ಈ ತರಹದಲ್ಲಿ ಕೈಕಟ್ಟಿಕೊಂಡು

ಕುಳಿತಿದ್ದೀರಿ? ಕಳೆದ ಮೂರು ತಿಂಗಳುಗಳಿಂದ ಅಭಿವೃದ್ಧಿ ಕಾರ್ಯಗಳು ನೆಗೆದು ಬಿದ್ದು ಹೋಗಿವೆ. ರೈತರ ಕಷ್ಟಗಳನ್ನು ನೀಗಿಸಲು ನಿಮ್ಮಿಂದ ಏನಾದರೂ ಪ್ರಯತ್ನಗಳು ನಡೆದಿದೆಯೇ? ಮಾನ್ಯ ಅಧ್ಯಕ್ಷರೇ, ಒಂದು ಅಂದಾಜಿನ ಪ್ರಕಾರ ಗುಲ್ಬರ್ಗಾ ಜಿಲ್ಲೆ ಒಂದರಲ್ಲೇ ಒಂದು ಅಂಕಿಅಂಶವನ್ನು ನಾನು ಹೇಳುತ್ತೇನೆ. ಮಾನ್ಯ ಭೈರೇಗೌಡರು ಉತ್ತರಿಸುವಾಗ ಉತ್ತರ ಹೇಳಲಿ. ಅಲ್ಲಿ ಸುಮಾರು 250 ರೂಪಾಯಿಗಳನ್ನು ಕೀಟನಾಶಕಕ್ಕಾಗಿ ಬೆಲೆತೆತ್ತು ಬೆಳೆಗಳನ್ನು ಉಳಿಸಲು ರೈತರು ಪ್ರಯತ್ನಿಸಿದ್ದಾರೆ. ತಾನು ಬೆವರು ಸುರಿಸಿ ಸಂಪಾದಿಸಿದ ಹಣವನ್ನು ಕೀಟನಾಶಕಗಳನ್ನು ಖರೀದಿಸಿ ಸಿಂಪಡಿಸಿದ್ದಾನೆ ಎಂಬ ಬಗ್ಗೆ ಅಂಕಿಅಂಶಗಳು ಹೇಳುತ್ತವೆ. ಬೀದರ್ ಜಿಲ್ಲೆ ಒಂದರಲ್ಲೇ ಸುಮಾರು 60 ಕೋಟಿ ರೂಪಾಯಿಗಳಷ್ಟು ಮೌಲ್ಯದ ಬೆಳೆಯು ನಾಶವಾಗಿದೆ. ಗುಲ್ಬರ್ಗಾ ಜಿಲ್ಲೆಯ ಸುಮಾರು 35-40 ಕೋಟಿ ರೂಪಾಯಿಗಳಷ್ಟು ಬೆಳೆಗಳು ನಾಶವಾಗಿವೆ. ನಾವು ಹಿಂದೆ ರೈತರ ಪರವಾಗಿ ಹೋರಾಟ ಮಾಡಿದ್ದೇವೆ. ಸದನದ ಒಳಗೆ ಹೊರಗೆ ಹೋರಾಟ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಗುಲ್ಬರ್ಗಾದಲ್ಲಿ ಒಂದು ತಿಂಗಳು ಧರಣಿ ಮಾಡಿ 10 ಕೋಟಿ ರೂಪಾಯಿಗಳನ್ನು ಹಿಂದೆ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ್ದರು. ಆಗ ಇಂಥಾದ್ದೇ ಒಂದು ಪರಿಸ್ಥಿತಿ ಬಂದಿತ್ತು. ಆದರೆ ಈ ಭಾರಿ ಆ ಒಂದು ಕಷ್ಟಪರಿಸ್ಥಿತಿಯಲ್ಲಿ ಬಿದ್ದಂಥ ರೈತರಿಗೆ ನಿಮಗೆ ನೆರವು ಕೊಡಲಿಕ್ಕೆ ಆಗಲಿಲ್ಲ ಅಂದರೆ, ರೈತರು ಆ ರೀತಿಯಲ್ಲಿ ಸಾಯುವುದಕ್ಕೆ ಬೆಳೆನಾಶ ಕಾರಣವಲ್ಲ ಎಂದು ನೀವು ಹೇಳುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಬೀದರ್‌ನ ಜಿಲ್ಲಾ ಮಂತ್ರಿಗಳೂ ಕೂಡ ಇಲ್ಲಿ ಕುಳಿತಿದ್ದಾರೆ. ತಾವುಗಳು ಏಕೆ ಜಿಲ್ಲಾಮಂತ್ರಿಗಳಾಗಿ ಇದ್ದೀರಿ ಸ್ವಾಮಿ? ಏತಕ್ಕಾಗಿ ನಿಮಗೆಲ್ಲಾ ಗೂಟದ ಕಾರುಗಳನ್ನು ವ್ಯವಸ್ಥೆ ಮಾಡಿರುವಂಥಾದ್ದು? ನಿಮ್ಮ ಜಿಲ್ಲೆಯಲ್ಲಿ ಇಂಥ ಪರಿಸ್ಥಿತಿಯು ಬಂದಾಗ 24 ಗಂಟೆಗಳೊಳಗಾಗಿ ಅಲ್ಲಿಗೆ ಧಾವಿಸಿ ಹೋಗಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ನೋಡಿಕೊಂಡು ಜಿಲ್ಲಾಧಿಕಾರಿಯನ್ನು ಎಳೆದುಕೊಂಡು ಬಂದು ರೈತರಿಗೆ ಏನು ಕೊಡಿಸಬೇಕಾಗಿತ್ತೋ ಅದನ್ನು ಕೊಡಿಸಬೇಕಾಗಿತ್ತು. ನೀವೇನು ಮೋಜು ಮಾಡುತ್ತಾ ಇದ್ದೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಅಲ್ಲಿನ ಪರಿಸ್ಥಿತಿಯನ್ನು ನೋಡಿಬಿಟ್ಟು ಬಂದಿದ್ದೇನೆ....

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಕಾಡು ಎಲ್ಲಾ ಬರಿದಾದ ಮೇಲೆ ಮಾನ್ಯ ನಾಗಮಾರಪಲ್ಲಿಯವರು ಬಿಟ್ಟು ಬಂದರು....

ಶ್ರೀ ವಾಟಾಳ್ ನಾಗರಾಜ್: ನಾವು ಬಹಳ ದಿವಸಗಳಿಂದ ಹರಿಶ್ಚಂದ್ರನ ಇತಿಹಾಸವನ್ನು ಕೇಳಿದ್ದವು. ಅವರ ಬಗ್ಗೆ ತಿಳುವಳಿಕೆಯನ್ನು ಕೇಳಿದ್ದವು. ಇವೊತ್ತು ನಾಗಮಾರಪಲ್ಲಿಯವರು ಹರಿಶ್ಚಂದ್ರನಂತೆ ಸತ್ಯವನ್ನು ಹೇಳಿದರು. ಅವರು ಸರಕಾರದ

ಮುಂದಿನ ಭವಿಷ್ಯವನ್ನು ನೋಡಿಕೊಂಡು ಬಿಟ್ಟುಬಿಟ್ಟು ಬಂದಿದ್ದಾರೆ. ಮುಂದಿನ ಭವಿಷ್ಯವನ್ನು ನೋಡಿ ಬಿಟ್ಟು ಬಂದ ಅವರ ಜಾಣ್ಮೆ ಹೇಗಿದೆ ನೋಡಿ?....

ಅಧ್ಯಕ್ಷರು: ಯಡಿಯೂರಪ್ಪನವರೇ, ನೀವು ಸತ್ಯ ಮಾತನ್ನಾಡುತ್ತೀರಿ ಎಂಬ ನಂಬಿಕೆ. ನೀವು ಒಂದು ವಿಚಾರವನ್ನು ಹೇಳಬೇಕು. ನೀವು ಮೋಜು ಮೋಜು ಎಂಬ ಮಾತನ್ನು ಹೇಳಿದ್ದೀರಿ. ನೀವು ಬೈರೇಗೌಡರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದೀರೋ ಅಥವಾ ಗುರುಪಾದಪ್ಪನವರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದೀರೋ ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಗುರುಪಾದಪ್ಪನವರ ಬಗ್ಗೆ ಹೇಳುವುದಾದರೆ ಡಿಕ್ಷನರಿಯಲ್ಲಿನ ಬೇರೆ ಯಾವುದಾದರೂ ಶಬ್ದವನ್ನು ಉಪಯೋಗಿಸಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ಅವರೂ, ಇವರೂ ಮಿತ್ರರಾಗಿದ್ದಾರೆಯಲ್ಲವೇ?

ಅಧ್ಯಕ್ಷರು: ಈಗ ಏನಾಗಿದೆ ಅಂದರೆ ನಮ್ಮ ಬೈರೇಗೌಡರಿಗೆ ಆ ಮೋಜು ಎಂಬ ಪದದ ಅರ್ಥ ಆಗುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಈಗ ಪರಿಸ್ಥಿತಿಯು ಏನಾಗಿದೆ ಅಂದರೆ ನಾಗಮಾರಪಲ್ಲಿಯವರು ಸರಕಾರದ ಪರಿಸ್ಥಿತಿಯನ್ನು ನೋಡಿ ಬಿಟ್ಟು ಬಿಂದಿದ್ದೇನೆ ಎಂದು ಹೇಳಿದ್ದಾರೆ. ಅವರು ಅದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಂಥ ಪರಿಸ್ಥಿತಿಯಲ್ಲಿ ಬಂದ ಅವರನ್ನು ಇವರು ಅಪ್ಪಿಕೊಂಡರು. ಅದಕ್ಕಾಗಿಯೇ ಮಾನ್ಯ ಯಡಿಯೂರಪ್ಪನವರು ಇನ್ನೂ 3-4 ದಿನಗಳಷ್ಟು ಕಾದು ನೋಡಿ ಎಂದು ಹೇಳಿರಬೇಕು. ಸರಕಾರ ಉಳಿಯುತ್ತದೆಯೋ ಇಲ್ಲವೋ ಎಂದು....

ಅಧ್ಯಕ್ಷರು: ನಿಮ್ಮ ಹೈದ್ರಾಬಾದ್ ಕರ್ನಾಟಕದ ಹಕೀಕತ್ ನನಗೆ ಗೊತ್ತಾಗುವುದಿಲ್ಲ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 3-4 ದಿನಗಳಿಂದ ನಂತರ ನೋಡಿ ಎಂಬ ಮಾತಿನ ಅರ್ಥ ಈಗ ನನಗೆ ಗೊತ್ತಾಗುತ್ತಾ ಇದೆ. ಆದರೆ ಅಂಥ ಎಷ್ಟು ಜನರು ಇನ್ನೂ ಅಲ್ಲಿ ಕುಳಿತು ಕೊಂಡಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಅಂಥ ಪಟ್ಟಿಯನ್ನು ಬೇಗನೆ ಬಹಿರಂಗಗೊಳಿಸಿದರೆ ನಮಗೂ ಗೊತ್ತಾಗುತ್ತದೆ...

ಶ್ರೀ ಮಿರಾಜುದ್ದೀನ್ ಎನ್.ಪಟೇಲ್: ಮಾನ್ಯ ಅಧ್ಯಕ್ಷರೇ, ನಾನು ಜಿಲ್ಲಾಮಂತ್ರಿಯಾಗಿ 7ನೇ ತಾರೀಖು ಹೋಗಿ ಎಲ್ಲರನ್ನೂ ಭೇಟಿ ಮಾಡಿ, ನ್ಯಾಚುರಲ್ ಕೆಲಾಮಿಟೀಸ್ ಫಂಡ್....

ಅಧ್ಯಕ್ಷರು: ಉತ್ತರವನ್ನು ಆಮೇಲೆ ಹೇಳಿ...

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಸರಕಾರದವರು ಅಲ್ಲಿಗೆ ಹೋಗಿ ರೈತರಿಗೆ ಸೂಕ್ತ ಪರಿಹಾರವನ್ನು ನೀಡಬೇಕಾಗಿತ್ತು...

ಶ್ರೀ ಬಿ.ಎಸ್.ಯಡಿಯೂರಪ್ಪ: ಮೋಜು ಎಂಬ ಶಬ್ದವು ಮಾನ್ಯ ಬೈರೇಗೌಡರಿಗೂ ಮಾನ್ಯ ಗುರುಪಾದಪ್ಪನವರಿಗೂ ಅನ್ವಯವಾಗುವುದಿಲ್ಲ. ಮೋಜು ಶಬ್ದವು ಅನ್ವಯ ಆಗುವುದು ನಮ್ಮ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್‌ರವರಿಗೆ. ಒಂದು ವೇಳೆ ಈಗ ಅವರು ಇಲ್ಲಿದ್ದಿದ್ದರೆ ಯಡಿಯೂರಪ್ಪನವರೇ, ನನ್ನ ಅಧಿಕಾರವನ್ನು ಅವರಿಗೆ ಕೊಡುವ, ಸರ್ಟಿಫಿಕೇಟ್ ಕೊಡುವ ನೀವು ಯಾರು ಎಂದು ನನ್ನನ್ನೇ ಕೇಳುತ್ತಿದ್ದರು.... ಆದ್ದರಿಂದ ಮೋಜು ಎಂಬ ಶಬ್ದವು ನಮ್ಮ ಮುಖ್ಯಮಂತ್ರಿಗಳಿಗೆ ಅನ್ವಯವಾಗತಕ್ಕಂಥ ಶಬ್ದ ಎಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ, ತಾವುಗಳು ಜಿಲ್ಲಾ ಮಂತ್ರಿಗಳಾಗಿ ಅಲ್ಲಿ ಇದ್ದಿದ್ದರೆ, ನಿಮ್ಮ ಅಸ್ತಿತ್ವವು ಅಲ್ಲಿ ಇದ್ದಿದ್ದರೆ,... ತಾವುಗಳು ಏನು ಹೇಳಿದ್ದೀರಿ? ''ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ರೈತರು ಬೆಳೆ ಹಾನಿಯಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪೌರಾಡಳಿತ ಸಚಿವ ಶ್ರೀ ಮಿರಾಜುದ್ದೀನ್ ಪಟೇಲ್ ಶನಿವಾರ ಖುದ್ದಾಗಿ, ಸ್ಥಳಗಳಿಗೆ ಭೇಟಿ ನೀಡಿ, ಖಚಿತಪಡಿಸಿಕೊಂಡಿದ್ದಾರೆ. ಜಿಲ್ಲಾಧಿಕಾರಿಗಳು ಸರಕಾರಕ್ಕೆ ಯಾವ ವರದಿಯನ್ನು ಸಲ್ಲಿಸಿದ್ದಾರೆ ಎಂಬ ಬಗ್ಗೆ ತಮಗೆ ತಿಳಿಯದು. ಆ ವರದಿಯನ್ನು ತರಿಸಿಕೊಂಡು ಪರಿಶೀಲಿಸಿ, ನಂತರ ತಮ್ಮ ವರದಿಯನ್ನು ಸರಕಾರಕ್ಕೆ ಸಲ್ಲಿಸುವುದಾಗಿ ಅವರು ತಿಳಿಸಿದ್ದಾರೆ. ಸಚಿವರು ರೈತರ ಆತ್ಮಹತ್ಯೆಯು ಬೆಳೆ ಹಾನಿಯಿಂದಲೇ ಆಗಿರುವುದಾಗಿ ಖಚಿತಪಡಿಸಿಕೊಂಡಿರುವುದಾಗಿ ತಿಳಿಸಿದರು.''- ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನೆಂದರೆ ಜಿಲ್ಲಾಧಿಕಾರಿಗಳು ಹೇಳಿದ ಹಾಗೆ ಕೈಕಟ್ಟಿಕೊಂಡು ಕುಣಿಯುವುದಕ್ಕೆ ನೀವು ಜಿಲ್ಲಾ ಮಂತ್ರಿಗಳು ಇದ್ದೀರೋ ನಿಮ್ಮ ಜಿಲ್ಲಾಧಿಕಾರಿಯು ವಾಸ್ತವಿಕವಾಗಿ ಕೆಲಸವನ್ನು ಮಾಡುತ್ತಾ ಇದ್ದಾರೋ ಎಂಬುದನ್ನು ನೋಡಿಕೊಳ್ಳಲು ನೀವು ಇದ್ದೀರೋ? ಈ ಘಟನೆ ನಡೆದು ಮೂರು ತಿಂಗಳುಗಳಾದರೂ ಒಬ್ಬ ಜಿಲ್ಲಾ ಮಂತ್ರಿಯಾಗಿ ಅಲ್ಲಿದ್ದುಕೊಂಡು, ಸತ್ತವರ ಮನೆಯವರಿಗೆ ನಾಲ್ಕು ಸ್ವಾಂತನದ ಒಳ್ಳೆಯ ಮಾತುಗಳನ್ನು ಹೇಳದೆ, 24 ಗಂಟೆಯೊಳಗೆ ಅವರಿಗೆ ಪರಿಹಾರವನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡದೇನೇ, 7ನೇ ತಾರೀಖು ಎಲ್ಲಾ ಮುಗಿದ ಮೇಲೆ ನೀವು ಪತ್ರಿಕಾ ಹೇಳಿಕೆಯನ್ನು ಕೊಡುತ್ತೀರಿ? ಸ್ಥಳಗಳಿಗೆ ಭೇಟಿ ಕೊಡುತ್ತೀರಿ, ನಿಮ್ಮ ಬೇಜವಾಬ್ದಾರಿ ಜಿಲ್ಲಾಧಿಕಾರಿ ಬೇರೆ ಒಂದು ವರದಿಯನ್ನು ಕಳುಹಿಸಿಕೊಡುತ್ತಾನೆ. ಇದು ನಿಮ್ಮ ಸ್ಥಾನಕ್ಕೆ ಶೋಭೆಯನ್ನು ತರುವಂಥ ಸಂಗತಿಯೇ? ಇದು ನಿಮ್ಮ ಸ್ಥಾನಕ್ಕೆ ಶೋಭೆ ತರುವಂತಹ ಸಂಗತಿ ಅಲ್ಲ. ಅಂದರೆ ಅಲ್ಲಿ ಕುಳಿತಿರುವವರು ಅಧಿಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೇನು, ಅಥವಾ ಅಲ್ಲಿರುವಂತಹ ಜನರು ಹೇಳುವಂತಹ ವರದಿಯ ಆಧಾರದ ಮೇಲೆ ಯಾವ ಅಧಿಕಾರಿಗಳು ವಿಚಾರ ಮಾಡಿದ್ದಾರೆ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಯೇ ಎಂದು ತಾವೇನಾದರೂ ವಿಚಾರ ಮಾಡಿದ್ದೀರೋ? ಕಳಪೆ ಕ್ರಿಮಿನಾಶಕವನ್ನು ಮಾರಾಟ

ಮಾಡುವುದಕ್ಕೆ ಯಾವ ಅಧಿಕಾರಿಗಳು ಅವಕಾಶ ಮಾಡಿಕೊಟ್ಟು ರೈತನ ಮಾರಣ ಹೋಮ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದ್ದಿದ್ದರೆ ನಾನು ಈ ಸದನದಲ್ಲಿ ಕುಳಿತು ತಮಗೆ ಶಹಭಾಸ್‌ಗಿರಿ ಹೇಳುತ್ತಿದ್ದೆ. ಆದರೆ ತಾವು ಕೆಲಸವನ್ನು ಮಾಡಲಿಲ್ಲ. ಮಾನ್ಯ ಬಂಧುಗಳೇ, ಮಾನ್ಯ ಅಧ್ಯಕ್ಷರೇ, ನನಗೆ ಮರೆತು ಹೋಗಿತ್ತು... ಚುನಾವಣೆಯಲ್ಲಿ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಆ ಚುನಾವಣೆಯಲ್ಲಿ ಮಾತನಾಡಿ, ಮಾತನಾಡಿ ಶಾಸನಸಭೆಯನ್ನೇ ಇವರು ಮರೆತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ಕಡೆ ಆ ಕಡೆ ಕುಳಿತಿರುವವರು ಬಂಧುಗಳು ಅಲ್ಲವೇನು? ವೈರಿಗಳು ಎಂದು ಕರೆಯಲೇ?

ಅಧ್ಯಕ್ಷರು: ನನಗೇನೂ ಆಕ್ಷೇಪಣೆ ಇಲ್ಲ. ನಾನು ನಿಮ್ಮ ಬಂಧುವೂ ಹೌದು. ನಾನು ಅದನ್ನು ಸ್ವೀಕಾರ ಮಾಡಿದ್ದೇನೆ. ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅದು ತಪ್ಪೇನೂ ಇಲ್ಲ. ಎಲ್ಲಿಯವರೆಗೆ ನಾವು ಜನತೆಯ ಪ್ರತಿನಿಧಿ ಎನ್ನುವುದು ಮರೆತು ಹೋಗುತ್ತದೆ ಎಲ್ಲಿಯವರೆಗೆ ನಮ್ಮ ಮಾಲೀಕರು ಅಲ್ಲಿದ್ದಾರೆ ಅವರ ಕೆಲಸವನ್ನು ಮಾಡುವುದಕ್ಕೆ ಇಲ್ಲಿ ಪ್ರತಿನಿಧಿಯಾಗಿ ಬಂದಿದ್ದೇವೆ ಎನ್ನುವ ಅರಿವು ಮರೆತು ಹೋದರೆ ಈ ರೀತಿ ಘಟನೆಗಳಾಗುತ್ತವೆ. ಆಡಳಿತ ಪಕ್ಷದಲ್ಲಿ ಕುಳಿತುಕೊಂಡವರು ಇದನ್ನು ಯಾವ ರೀತಿ ಬೇಕಾದರೂ ತೆಗೆದುಕೊಳ್ಳಬಹುದು. ಆದರೆ ಇದೊಂದು ಬೇಜವಾಬ್ದಾರಿ ಪರಮಾವಧಿ ಎಂದು ನನಗನ್ನಿಸುತ್ತದೆ. ಯಾವುದಾದರೂ ಸರಕಾರ ಬದುಕಿದ್ದರೆ ತಕ್ಷಣ ಅಲ್ಲಿಗೆ ಧಾವಿಸಿ ಹೋಗಿ ಅವರ ನೋವಿಗೆ ಸ್ಪಂದಿಸಬೇಕಾಗಿತ್ತು. ಒಬ್ಬೊಬ್ಬ ಜಿಲ್ಲಾಧಿಕಾರಿ, ಮಂತ್ರಿ ಒಂದು ಹೇಳಿಕೆ, ಮುಖ್ಯಮಂತ್ರಿ ಒಂದು ಹೇಳಿಕೆ ಕೊಡುವಂಥಾದ್ದು ನಿಮಗೆ ಶೋಭೆ ತರುವಂತಹ ಸಂಗತಿ ಅಲ್ಲ. ಇದು ಕೇವಲ ಗುಲ್ಬರ್ಗ, ಬೀದರ್‌ನಲ್ಲಿ ಮಾತ್ರವಲ್ಲ. ಮಾನ್ಯ ಕಂದಾಯ ಮಂತ್ರಿಗಳು ಹೊಸದಾಗಿ ಈ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ. ಇಲ್ಲಿ ಕೃಷಿ ಸಚಿವರು ಇದ್ದಾರೆ. ಈ ಸದನದಲ್ಲಿ ಚರ್ಚೆಯಾಯಿತು. ಅತಿವೃಷ್ಟಿಯಿಂದ, ಬರಗಾಲದಿಂದ ಯಾವ ರೀತಿಯಾಗಿ ಈ ರಾಜ್ಯದ ಜನರ ಸ್ಥಿತಿಗತಿಗಳು ಇತ್ತು ಎಂಬ ಬಗ್ಗೆ ಕೂಡ ಇಲ್ಲಿ ಚರ್ಚೆಯಾಯಿತು. ಬೆಳೆ ಯಾವ ರೀತಿಯಾಗಿ ಸಂಪೂರ್ಣವಾಗಿ ನಾಶವಾಗಿದೆ ರೈತ ಯಾವ ರೀತಿ ಬೀದಿಪಾಲಾಗಿದ್ದಾನೆ ಇಂತಹ ದುಸ್ಥಿತಿ ಬಂದಿರುವ ಬಗ್ಗೆ ಸಾಕಷ್ಟು ಸಲ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಆದರೆ ಇದುವರೆಗೆ ಯಾವುದೇ ರೀತಿಯಲ್ಲಿ ರೈತನ ಸಂಕಷ್ಟಕ್ಕೆ ಸ್ಪಂದಿಸಿ ಆ ಸಮಸ್ಯೆಯನ್ನು ಬಗೆಹರಿಸುವುದರ ಬಗ್ಗೆ ಪ್ರಾಮಾಣಿಕವಾದಂತಹ ಪ್ರಯತ್ನದಲ್ಲಿ ಒಂದು ಹೆಜ್ಜೆಯನ್ನು

ಮುಂದೆ ಇಡದಿರುವಂತಹ ರೈತ ವಿರೋಧಿ ಸರಕಾರ ಇಂದು ಅಸ್ತಿತ್ವದಲ್ಲಿದೆ. ಅದು ಮುಂದುವರಿಯುತ್ತಿದೆ. ಹಾಗಾಗಿ ರೈತರು ಇಂದು ಇಂತಹ ದುಸ್ಥಿತಿಯನ್ನು ಎದುರಿಸುವಂತಹ ಪರಿಸ್ಥಿತಿ ಬಂದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜವಾಬ್ದಾರಿ ಇರುವಂತಹ ಸರಕಾರವಾಗಿದ್ದಿದ್ದರೆ ನಾವು ಇಂದು ಇಲ್ಲಿ ನಿಲುವಳಿ ಸೂಚನೆಯನ್ನು ಕಳಿಸಿದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳು ಎದ್ದು ಪ್ರಶ್ನೋತ್ತರವನ್ನು ಫಾರ್ ದಿ ಟೈಮ್ ಬೀಯಿಂಗ್ ಸಸ್ಪೆಂಡ್ ಮಾಡಿ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ ಸದನಕ್ಕೆ ವರದಿಯನ್ನು ಕೊಡುತ್ತೇನೆ ಜಿಲ್ಲಾಧಿಕಾರಿಗಳದ್ದು ತಪ್ಪು ಇದೆ ಇಲ್ಲಿ 10 ಜನರಲ್ಲಿ ಈ ಕಾರಣಕ್ಕಾಗಿ ಸತ್ತಿದ್ದಾರೆ ಎಂದು ಹೇಳಬೇಕಾಗಿತ್ತು. ಬೆಳೆ ನಾಶವಾಗಿ ನೇಣು ಹಾಕಿಕೊಂಡು ವಿಷ ತೆಗೆದುಕೊಂಡು ಸತ್ತಿದ್ದಾರೆ ಇನ್ನು ಕೆಲವು ಜನರು ಈ ಕಾರಣಕ್ಕಾಗಿ ಸತ್ತಿದ್ದಾರೆ ಅವರಿಗೆ ಇಂತಹ ಪರಿಹಾರ ಕೊಡಿಸುತ್ತೇನೆ. ನಾನೇ ಹುಮ್ನಾಬಾದಿನಲ್ಲಿ ಪರಿಹಾರ ಕೊಡುತ್ತೇನೆಂದು ಹೇಳಿಕೆ ಕೊಟ್ಟಿದ್ದೇನೆ. ಇಂತಿಷ್ಟು ಪರಿಹಾರ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ ಎಂಬ ಬಗ್ಗೆ ಎಲ್ಲವನ್ನೂ ಹೇಳಬೇಕಾಗಿತ್ತು. ಇದ್ಯಾವುದೇ ಹೇಳಿಕೆಯನ್ನು ಕೊಡದೇ ಏನೋ ಒಂದು ರೀತಿಯಲ್ಲಿ ರೈತರನ್ನು ತಾತ್ಸಾರವಾಗಿ ಕಾಣುತ್ತಿದ್ದಾರೆಂದು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾವ ರೈತರು ನಿಮ್ಮನ್ನು ಈ ಒಂದು ಅಧಿಕಾರಕ್ಕೆ ತರುವಲ್ಲಿ ಕಾರಣಕರ್ತರಾದರೋ ಅದೇ ರೈತರು ನಿಮ್ಮನ್ನು ಬೇರು ಸಹಿತ ಕಿತ್ತು ಒಗೆಯುವಂತಹ ಸಂಕಲ್ಪ ಮಾಡಿ ನಿಮ್ಮನ್ನು ಬೇರು ಸಹಿತ ಕಿತ್ತೂಗೆಯುವಂತಹ ಸಂಕಲ್ಪ ಮಾಡಿ ಚುನಾವಣೆಯಲ್ಲಿ ಸೋಲಿಸಿದ್ದಾರೋ ಆ ರೈತರ ಮೇಲೆ ಸೇಡು ತೀರಿಸಿಕೊಳ್ಳುವಂತಹ ಭಾವನೆ ನಿಮ್ಮ ಮನಸ್ಸಿನಲ್ಲಿ ಇದೆ. ಅವರಿಗೆ ಯಾವುದೇ ಒಂದು ಪರಿಹಾರ ಕೊಡದೇ ಅವನ ಮೇಲೆ ಸೇಡುತೀರಿಸಿಕೊಳ್ಳುವಂತಹ ಒಂದು ಪ್ರಯತ್ನವನ್ನು ಜನತಾ ದಳ ಸರಕಾರ ಮಾಡುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಇದಕ್ಕೆ ರೈತ ಯಾವುದೇ ಕಾರಣಕ್ಕೆ ಬಗ್ಗುವುದಿಲ್ಲ. ನೀವು ಈಗಲೇ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಅದಕ್ಕೆ ತಕ್ಕ ಶಾಸ್ತಿಯಾಗುತ್ತದೆ. ಬೇಜವಾಬ್ದಾರಿ ಕೃಷಿ ಸಚಿವರು ಇದ್ದೀರಿ, ಇಷ್ಟು ಜನರ ಸಾವಿಗೀಡಾದುದನ್ನು ನೋಡಿದರೂ ಸಹ ನಿಮ್ಮ ಚುನಾವಣೆಯ ಮೋಜಿನಲ್ಲಿ ಮೈ ಮರೆತು ಆ ರೈತರಿಗೆ ಪರಿಹಾರ ಕಲ್ಪಿಸುವಲ್ಲಿ ಮತ್ತು ನಿಮ್ಮ ಕರ್ತವ್ಯ ಮಾಡುವುದರಲ್ಲಿ ವಿಫಲರಾಗಿದ್ದೀರಿ. ತಕ್ಷಣ ರಾಜೀನಾಮೆ ಕೊಡಬೇಕು ಇದು ನನ್ನ ಮೊದಲನೇ ಒತ್ತಾಯ. ಕನಿಷ್ಠ ಸತ್ತವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಯಾದರೂ ಪರಿಹಾರ ಕೊಡಬೇಕು. ಗುಲ್ಬರ್ಗ, ಬೀದರ್‌ನಲ್ಲಿ ಯಾವ ಬೆಳೆ ನಾಶವಾಗಿದೆ ಅಂದರೆ ಜೋಳ ಇರಬಹುದು, ಸೂರ್ಯ ಕಾಂತಿ ಇರಬಹುದು ತೊಗರಿ ಬೆಳೆ ಇರಬಹುದು ಒಂದು ಹೆಕ್ಟೇರ್‌ಗೆ ಕನಿಷ್ಠ 2000 ರೂಪಾಯಿ ಪರಿಹಾರ ಕೊಡಬೇಕು. ನಕಲಿ ಕೀಟನಾಶಕಗಳ ಕಂಪನಿಗಳವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವುಗಳಿಗೆ ಬೀಗ ಹಾಕಿಸಬೇಕು. ಹಿಂದೆ ಇದೇ ರೀತಿಯ ಘಟನೆಗಳು ನಡೆದಾಗ ಅವರ ಮೇಲೆ ಕೇಸ್ ಹಾಕಿದ್ದೇವೆಂದು ಹೇಳಿದಿರಿ. ಅದರ ಫಲಶ್ರುತಿ ಏನು? ಹಿಂದೆ ಇದೇ ಸ್ಥಿತಿ 2-3 ವರ್ಷಗಳ ಹಿಂದೆ

ನಡೆದಾಗ ಇಲ್ಲೇ ಗಂಟೆಗಟ್ಟಲೆ ಚರ್ಚೆ ಮಾಡಿದ್ದೆವು. ನಿಮ್ಮ ಅಧಿಕಾರಿಗಳು ಹಿಂಬಾಗಿಲಿನಿಂದ ಅವರಿಂದ ಬೇಕಾದ ಪರಿಹಾರ ಪಡೆದು ಆ ಕೇಸನ್ನು ಮುಚ್ಚಿಹಾಕಿದರು. ಯಾವ ಕಂಪನಿಗಳ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದರು ಅದನ್ನು ಮುಚ್ಚಿಹಾಕಿದರು. ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಕೆಲಸ ನಿಮ್ಮಿಂದ ಆಗಲಿಲ್ಲ. ಈ ಒಂದು ದಾರುಣ ಪರಿಸ್ಥಿತಿ ರೈತನದ್ದು ಇದೆ. ಅದನ್ನು ನಾವು ನೀವು ಎಲ್ಲರೂ ಕಾಣುತ್ತಿದ್ದೇವೆ. ಯಾವ್ಯಾವ ಕಾರಣಕ್ಕೋಸ್ಕರ ಇವರು ಸತ್ತಿದ್ದಾರೆ ಎಂಬ ಬಗ್ಗೆ ಮುಖ್ಯವಾಗಿ ಪತ್ರಿಕೆಯಲ್ಲೇ ಬಂದಿದೆ. ಪೋಲೀಸ್ ವರದಿಯಲ್ಲಿ ಕನ್‌ಫರ್ಮ್ ಆಗಿರುವಂಥಾದ್ದು, ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಲಕ್ಷ್ಮಿಬಾಯಿ ಏಕನಾಥರಾವ್ ಕೀಟನಾಶಕ ಸೇವಿಸಿ ಈ ರೀತಿ ಬೆಳೆ ನಾಶಗೊಂಡಿದ್ದಕ್ಕಾಗಿ ಜೀವನದಲ್ಲಿ ಜಿಗುಪ್ಸೆಗೊಂಡು ಸತ್ತಿದ್ದಾರೆಂದು ವರದಿ ಇದೆ. ಬೀದರ್ ಸಮೀಪದ ಚೊಂಡಿ ಗ್ರಾಮದ ದಳಪತಿ ಬಸವರಾಜು ಅವರೂ ಕೂಡ ಇದೇ ಕಾರಣಕ್ಕೆ ವಿಷ ಕುಡಿದು ಸತ್ತಿದ್ದಾರೆಂದು ಹೇಳಿದ್ದಾರೆ. ಇದೇ ಕಾರಣಕ್ಕೋಸ್ಕರ ಭಾಲ್ಕಿ ತಾಲ್ಲೂಕಿನಲ್ಲಿ 7ಜನ ಸತ್ತಿರುವಂಥಾದ್ದು ವರದಿಯಾಗಿದೆ. ಮಾನ್ಯ ಖರ್ಗೆಯವರು ಪ್ರಭು ಭರತ್ ಶೇಖರಪ್ಪ ಎಂಬುವವರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆ ಇರಬಹುದು ಇಲ್ಲವೇ ಕರ್ನಾಟಕದ ಯಾವುದೇ ಜಿಲ್ಲೆ ಇರಬಹುದು. ನಾವು ಭತ್ತ ಬೆಳೆದರೆ ಅದನ್ನು ಒಕ್ಕಲು ಮಾಡುವುದಕ್ಕಾಗದೇ ಸಂಪೂರ್ಣ ಬೆಳೆ ಕೊಳೆತು ಹೋಗಿ ನಾಶವಾಗಿ ಒಂದು ರೂಪಾಯಿ ಬೆಳೆ ನಮ್ಮ ಕೈಗೆ ಸಿಕ್ಕದೆ ಒಕ್ಕಲೂ ಮಾಡಲಿಲ್ಲ, ಹುಲ್ಲೂ ಸಿಗಲಿಲ್ಲ ಎನ್ನುವಂತಹ ದಾರುಣ ಸ್ಥಿತಿ ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದಿದೆ. ಇದ್ಯಾವುದನ್ನೂ ತಾವು ಪರಿಗಣಿಸದೇ ಒಂದು ರೀತಿಯಲ್ಲಿ ಮೋಜಿನಲ್ಲಿ ಮೈಮರೆತು ಅಧಿಕಾರದಲ್ಲಿ ಮುಂದುವರಿದುಕೊಂಡು ಬರುತ್ತಿದ್ದೀರಿ. ಈಗಲಾದರೂ ನೀವು ತೊಲಗಿ ಹೋಗುವುದಕ್ಕೆ ಮುಂಚೆ ಜಾಗ ಖಾಲಿ ಮಾಡುವುದಕ್ಕೆ ಮುಂಚೆ, 3 ವರ್ಷ ನಿಮ್ಮನ್ನು ಅಧಿಕಾರದಲ್ಲಿ ಉಳಿಸಿದಂತಹ ಜನರಿಗೆ ಸ್ವಲ್ಪ ಪರಿಹಾರವನ್ನು ಕೊಡುವ ಮೂಲಕ ನಿಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ನಾನು ಹಿಂದೆ ಹೇಳಿದಂತ ಒಂದು ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವುದು, ಒಂದು ಹೆಕ್ಟೇರ್ ಬೆಳೆ ನಾಶವಾದುದಕ್ಕೆ 2000 ರೂಪಾಯಿ ಪರಿಹಾರ ಕೊಡುವುದು ಕಳಪೆ ಕ್ರಿಮಿನಾಶಕವನ್ನು ತಯಾರು ಮಾಡಿದಂತಹ ಕಾರ್ಖಾನೆಗಳಿಗೆ ಬೀಗ ಹಾಕಿಸುವಂತಹ ಕೆಲಸ ಮಾಡಬೇಕು. ಅವರ ಜೊತೆ ಶಾಮೀಲಾಗಿರುವಂತಹ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಕಿತ್ತೊಗೆದು ಕಾನೂನಿನ ಕ್ರಮ ತೆಗೆದುಕೊಂಡು ಇಂತಹ ಪರಿಸ್ಥಿತಿ ಆಗದಂತೆ ಕ್ರಮ ತೆಗೆದುಕೊಳ್ಳಬೇಕು. ನಾವು ಇಲ್ಲಿ ಎಷ್ಟು ಹೊತ್ತು ಮಾತನಾಡುತ್ತೇವೆನ್ನುವುದು ಮುಖ್ಯವಲ್ಲ. ಆ ಭಾಗದಿಂದ ಬಂದಂತಹವರು ಅನೇಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದಿದ್ದಾರೆ, ವಾಸ್ತವ ಸಂಗತಿಯನ್ನು ಹೇಳುವವರಿದ್ದಾರೆ. ಆದಾದ ಮೇಲೆ ತಮಗೆ ಮನವರಿಕೆಯಾದರೆ ನಿಲುವಳಿ ಸೂಚನೆಗೆ ತಾವು ಒಪ್ಪಿಕೊಂಡು ಅದಕ್ಕೆ ಒಂದು ವೋಟಿಂಗ್ ಮಾಡಬೇಕು. ಇವರು ಪರಿಹಾರವನ್ನು ಯಾರ ತೀಟೆಗೆ ಕೊಡುತ್ತಾರೆ. ಪರಿಹಾರ ಕೊಡದಿದ್ದರೆ ನಿಮ್ಮ ಶಾಸಕರು ಆ ಗುಲ್ಬರ್ಗ, ಬೀದರ್‌ನಲ್ಲಿ ಹೇಗೆ

ಓಡಾಡುತ್ತಾರೆ ಬನ್ನಿ ನೋಡೋಣ. ನಿಮಗೆ ಜನ ಕೊಟ್ಟಂತಹ ತೀರ್ಪಿಗೆ ಮನ್ನಣೆ ಕೊಟ್ಟು ಗೌರವದಿಂದ ಅದಕ್ಕೆ ಸ್ಪಂದಿಸುವಂತಹ ಯೋಗ್ಯತೆ ಇಲ್ಲದಿದ್ದರೆ ಜನ ಕೇಳುತ್ತಾರೆ ಏನು ಮಾಡಬೇಕು ಎಂದು. ಮಾಡಿ ತೋರಿಸುತ್ತಾರೆ. ಬೇರೆಯವರೂ ಮಾತನಾಡಿದ ಮೇಲೆ, ತಮಗೆ ತಾಯಿಯ ಹೃದಯದ ಭಾವನೆ ಇದೆ ಎಂದು ನಾನು ತಿಳಿದಿದ್ದೇನೆ. ರೈತರ ಸಂಕಷ್ಟವನ್ನು ತಾವು ಅರ್ಥ ಮಾಡಿಕೊಂಡು ಹೌದು ನಾವು ಹೇಳುತ್ತಿರುವುದು ಸತ್ಯ ಸಂಗತಿ ಇದೆ ಎಂದು ತಿಳಿದು ನಿಲುವಳಿ ಸೂಚನೆಗೆ ಅವಕಾಶ ಮಾಡಕೊಡಬೇಕು. ಇದೇ ಕಾರಣಕ್ಕೆ ಈ ಸರಕಾರ ಹಾಳಾಗಿ ಹೋದರೆ ಬಹುಮತವನ್ನು ಕಳೆದುಕೊಂಡರೆ, ನಮ್ಮ ರಾಜ್ಯದ ಜನರಿಗೆ, ರೈತರಿಗೆ ಒಂದು ದೊಡ್ಡ ಸೇವೆಯನ್ನು ಮಾಡಿದಂತಾಗುತ್ತದೆ. ಮಣ್ಣಿನ ಮಕ್ಕಳ ಸರಕಾರ ವಿಷ ಕುಡಿದಂತಹ ರೈತರ ವಿಷಯದಲ್ಲೇ ಇವರು ಮನೆಗೆ ಹೋದರು ಎನ್ನುವ ಒಂದು ಚರಿತ್ರಾರ್ಹವಾದಂತಹ ದಾಖಲೆ ಇಲ್ಲಿ ಆಗುವಂತಹ ಸಂದರ್ಭ ಇದೆ. ವೋಟಿಂಗ್‌ಗೆ ನಾನು ಪ್ರೆಸ್ ಮಾಡುವವನು ಇದ್ದೇನೆ. ದಯಮಾಡಿ ನಿಲುವಳಿ ಸೂಚನೆಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ವಿಜಯಕುಮಾರ್ ಖಂಡ್ರೆ (ಬೀದರ್): ಅಧ್ಯಕ್ಷರೇ, ಈ ವರ್ಷ ನೈಸರ್ಗಿಕ ಪ್ರಕೋಪದಿಂದ ಭೀಕರ ಬರಗಾಲಕ್ಕೆ ರೈತರು ತುತ್ತಾಗಿದ್ದಾರೆ. ತಮಗೆಲ್ಲಾ ಗೊತ್ತಿದ್ದ ಹಾಗೆ ಸಾಲದ ಹೊರೆಯಿಂದ ತತ್ತರಿಸುತ್ತಿದ್ದು ದಿಕ್ಕು ತೋಚದೆ ಪ್ರಾಣ ಸಂಕಟಕ್ಕೆ ಸಿಲುಕಿದ್ದಾರೆ. ಮತ್ತು ಸುಮಾರು 10 ಜನ ಪ್ರಾಣ ಕಳೆದುಕೊಂಡಿದ್ದಾರೆ.

1.30 ಪಿ.ಎಂ

ಅವರಲ್ಲಿ ಏಳು ಜನ ಭಾಲ್ಕಿ ತಾಲ್ಲೂಕಿಗೆ ಸೇರಿದಂತಹವರು. ಮೊಟ್ಟಮೊದಲನೆಯ ಸಲ ಡಿಸೆಂಬರ್ ತಿಂಗಳಿನಲ್ಲಿ ಸಿದ್ದೇಶ್ವರದ ಶ್ರೀಮಾನ್ ಶಿವರಾಜ್ ರೇವಣಪ್ಪ ಎಂಬುವವರು ಪ್ರಾಣ ಕಳೆದುಕೊಂಡರು. ನಂತರ ಬಸಪ್ಪ ಬಾಳಕೇಶ್ವರ-ಕಲ್ವಾಡಿ, ದಿಲೀಪ್‌ಕುಮಾರ್ ಸಿದ್ದಲಿಂಗ ಬಿರಾದಾರ್ ಕುಂಟೆ ಸಿರ್ಸಿ, ಶ್ರೀಮತಿ ಜೀಜಾಬಾಯಿ ವೈಫ್ ಆಫ್ ಧೀಮಂತರಾವ್, ಮುರಂಬಿ, ಶ್ರೀಮಾನ್ ಪ್ರಭುರಾವ್ ವೀರಭದ್ರಪ್ಪ ಕಾಸರತಂಗಾಂವ್, ಭರತ್ ಶಂಕರಪ್ಪ ಹಾಲಳ್ಳಿ, ಶ್ರೀಮತಿ ಲಕ್ಷ್ಮೀಬಾಯಿ ಏಕನಾಥರಾವ್ ಸೋಲಾದಾಬಕಾ, ಶ್ರೀಮಾನ್ ವಾಮನರಾವ್ ಅಪ್ಪರಾವ್, ಘಾಟಬೋರಾಳ, ಶ್ರೀಮಾನ್ ಭೋಜರಾಜ್ ಧೊಳಪ್ಪ ಭಾತಂಬ್ರ, ಶ್ರೀಮಾನ್ ಬಸವರಾಜ್ ಶ್ಯಾಮರಾವ್ ಪೊಲೀಸ್ ಪಾಟೀಲ್ ಜೊಂಡಿ ತಾಲ್ಲೂಕ್, ಬೀದರ್ ಇಷ್ಟೊಂದು ಜನರೆಲ್ಲರೂ ಪ್ರಾಣ ಕಳೆದುಕೊಳ್ಳುವಂತಹ ಪರಿಸ್ಥಿತಿ ಬೀದರ್ ಜಿಲ್ಲೆಯಲ್ಲಿ ಏಕೆ ಬಂತು ಎಂಬುದು ತಮ್ಮೆಲ್ಲರಿಗೂ ಗೊತ್ತಿದೆ. ಖಾರಿಫ್ ಸೀಜನ್‌ನಲ್ಲಿ ಮಳೆಯ ಅಭಾವದಿಂದಾಗಿ ಆ ಸೀಜನ್‌ನಲ್ಲಿ ಮುಖ್ಯವಾಗಿ ಬೆಳೆಯುವ ಬೆಳೆಗಳಾದ ಉದ್ದು, ಹೆಸರು ಇಂತಹವುಗಳು ಸಂಪೂರ್ಣವಾಗಿ ಹಾಳಾಗಿವೆ. ಅದಾದ ಮೇಲೆ ನವೆಂಬರ್ ತಿಂಗಳಿನಲ್ಲಿ ಹೆಚ್ಚಿನ

ಮಳೆಯಾದ ಕಾರಣ ತೊಗರಿ ಬೆಳೆಗೆ ಹುಳುಗಳು ಹೆಚ್ಚಾಗಿ ಅದೂ ಕೂಡ ಹಾಳಾಗಿದೆ. ರೈತರು ಆ ಬೆಳೆಯನ್ನು ಬದುಕಿಸುವುದಕ್ಕೋಸ್ಕರ ಅನೇಕ ಸಲ ಕೀಟನಾಶಕಗಳನ್ನು ಸಿಂಪಡಣೆ ಮಾಡಿದರೂ ಸಹ ಅವರು ಆ ಬೆಳೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಬಗ್ಗೆ ಇಂಡಿಯಾಟುಡೆ ಪತ್ರಿಕೆಯವರು ತಮ್ಮ ಮ್ಯಾಗಜೈನ್‌ನಲ್ಲಿ ಒಂದು ಆರ್ಟಿಕಲ್ ಬರೆದಿದ್ದಾರೆ. ಅದನ್ನು ನಾನು ತಮ್ಮ ಅನುಮತಿ ಮೇರೆಗೆ ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ. ನವೆಂಬರ್ ತಿಂಗಳಿನಲ್ಲಿ "Because, the district received 68.6 centimeters of rainfall during November, Prof. S.Lingappa, Professor & Head of Entomology, University of Agricultural Sciences, Dharwad said that the heavy rains and high humidity led to the unusual proliferation of the Toor Pod boarer pest and that is the reason for the heavy loss of Tur crop." ಹೀಗಾಗಿ ಪ್ರಕೃತಿಯ ಸಿಟ್ಟಿನಿಂದ ಮಳೆ ಹೆಚ್ಚಾಗಿ ತೇವಾಂಶ ಅಧಿಕವಾದುದರಿಂದ ತೊಗರಿ ಬೆಳೆ ಹಾಳಾಗಿದೆ. ಮತ್ತೆ ಕೆಲವು ಕಡೆ ಕಳಪೆ ಗುಣಮಟ್ಟದ ಔಷಧಿಗಳು,ಮತ್ತು ಕೀಟನಾಶಕಗಳನ್ನು ಉಪಯೋಗ ಮಾಡಿದ್ದರಿಂದ ಈ ರೀತಿ ಬೆಳೆ ಹಾನಿ ಆಗಿದೆ ಎಂದು ಕೆಲವರು ಹೇಳಿಕೆ ಕೊಟ್ಟಿದ್ದಾರೆ. ಆದರೆ ಬೀದರ್ ಜಿಲ್ಲೆಯಲ್ಲಿ ಕೃಷಿ ಮಂತ್ರಿಯವರು ಒಂದು ಕಡೆ ''ನೂರಕ್ಕಿಂತ ಹೆಚ್ಚು ಸ್ಯಾಂಪಲ್‌ಗಳನ್ನು ಪ್ರಯೋಗಾಲಯಗಳಿಗೆ ಪರೀಕ್ಷೆಗಾಗಿ ಕಳುಹಿಸಿದಾಗ ಅದರಲ್ಲಿ ಕೇವಲ ಮೂರು ನಾಲ್ಕು ಮಾತ್ರ ಕಳಪೆ ಗುಣಮಟ್ಟದವು ಎಂಬ ವರದಿ ಬಂದಿದೆ'' ಎಂದು ಹೇಳಿಕೆ ಕೊಟ್ಟಿದ್ದಾರೆ. ಆದುದರಿಂದ ನಾನು ಏನು ಹೇಳಬಯಸುತ್ತೇನೆಂದರೆ ಪ್ರಕೃತಿಯಲ್ಲಿನ ಬದಲಾವಣೆಯ ಕಾರಣ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ; ಇದರ ಜೊತೆಗೆ ಇನ್ನೊಂದು ಮುಖ್ಯವಾದ ಒಂದು ವಿಷಯವೆಂದರೆ ಬೀದರ್ ಜಿಲ್ಲೆಯಲ್ಲಿ ಜೋಳ ಮತ್ತು ಕುಸುಬೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇವೆರಡೂ ಬೆಳೆಗಳೂ ಸಹ ಬೆಂಕಿ ರೋಗದಿಂದ ಸಂಪೂರ್ಣವಾಗಿ ಹಾಳಾಗಿವೆ. ಇದರಿಂದಾಗಿ ಇವತ್ತು ಅಲ್ಲಿ ದನಕರುಗಳಿಗೆ ಮೇವು ಸಹ ಸಿಗದಂತಹ ಒಂದು ಪರಿಸ್ಥಿತಿ ಉಂಟಾಗಿದೆ. ಇದರಿಂದಾಗಿ ರೈತರಿಗೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ ಎಂಬುದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬಹುದು. ತೊಗರಿ ಬೆಳೆ ಉಳಿಸುವುದಕ್ಕೋಸ್ಕರ ಪ್ರತಿಯೊಬ್ಬ ರೈತನು ಸುಮಾರು ಮೂರರಿಂದ ಐದು ಸಾವಿರ ರೂಪಾಯಿಯವರೆಗೆ ಸಾಲ ಮಾಡಿ ಅಂಗಡಿಗಳಿಂದ ಕ್ರಿಮಿನಾಶಕ ಮತ್ತು ಕೀಟನಾಶಕಗಳನ್ನು ತಂದು ಪದೇ ಪದೇ ಉಪಯೋಗ ಮಾಡಿದ್ದಾರೆ. ಇದರಿಂದಾಗಿ ಈಗ ರೈತನ ಮೇಲೆ ಸಾಲದ ಹೊರೆ ಕೂಡ ಇದೆ. ಇದಲ್ಲದೆ ಈಗ ಎಲ್ಲ ಬೆಳೆಗಳೂ ಸಹ ಹಾಳಾಗಿರುವುದರಿಂದ ರೈತ ಕಂಗಾಲಾಗಿದ್ದಾನೆ. ಅವನ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ತಮ್ಮೆಲ್ಲರಿಗೂ ಗೊತ್ತಿದ್ದ ಹಾಗೆ ಬೀದರ್ ಜಿಲ್ಲೆಯಲ್ಲಿ ನೀರಾವರಿ ಪ್ರದೇಶ ಇರುವುದು ಕೇವಲ ಶೇಕಡ 7ರಿಂದ 8ರಷ್ಟು ಮಾತ್ರ. ಉಳಿದ ಶೇಕಡ 92ರಷ್ಟು ಭಾಗದಲ್ಲಿ

ಒಣಬೇಸಾಯವನ್ನು ಮಾಡಲಾಗುತ್ತದೆ. ಹೀಗಾಗಿ ಮಳೆ ಪ್ರಮಾಣ ಹೆಚ್ಚು ಕಡಿಮೆ ಆಗಿರುವುದರಿಂದ ಈ ರೀತಿಯ ಹಾನಿ ಆಗಿದೆ. ಇದು ಬಹಳ ಬೇಗನೆ ಸರ್ಕಾರದ ಗಮನಕ್ಕೆ ಬರಬೇಕಾಗಿತ್ತು. ಆದರೆ ಆತ್ಮಹತ್ಯೆ ಮಾಡಿಕೊಂಡಂತಹ ಪರಿವಾರದವರಿಗೆ ಸಾಕಷ್ಟು ಪರಿಹಾರ ಕೊಡಲು ಇದುವರೆಗೂ ಸರ್ಕಾರ ಮುಂದೆ ಬಂದಿಲ್ಲ. ಇದು ಬಹಳ ದೊಡ್ಡ ಅನ್ಯಾಯ ಎಂದು ನಾನು ಒತ್ತಿ ಹೇಳಬೇಕಾಗುತ್ತದೆ. ಸರ್ಕಾರದ ಗಮನವನ್ನು ಈ ಕಡೆಗೆ ಸೆಳೆಯಲು ಬೀದರ್ ಜಿಲ್ಲೆಯ ರೈತರು ಒಂದು ದೊಡ್ಡ ಚಳುವಳಿಯನ್ನೇ ಮಾಡಬೇಕಾಯಿತು. ಕಳೆದ ಡಿಸೆಂಬರ್ 7ನೇ ತಾರೀಖು ಬೀದರ್ ಜಿಲ್ಲೆಯಲ್ಲಿ ಸುಮಾರು 40-50 ಸಾವಿರ ಜನರು ಸೇರಿ ಒಂದು ಪ್ರತಿಭಟನಾ ರ್‍ಯಾಲಿಯನ್ನು ಮಾಡಿದಾಗ ಮಾತ್ರ ಸರ್ಕಾರ ಕಣ್ಣು ತೆರೆಯಿತು. ಅಲ್ಲಿಯವರೆಗೆ ನಮ್ಮ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಅವರೆಲ್ಲಾ ನಿದ್ದೆ ಮಾಡುತ್ತಿದ್ದರು. ಕೆಲವರ ನಿದ್ದೆ ಎಷ್ಟರಮಟ್ಟಿಗಿತ್ತು ಎಂದರೆ ಅವರು ''ಕೋಮಾ'' ಹಂತವನ್ನು ತಲುಪಿದ್ದರು ಎಂದು ನನಗನಿಸುತ್ತದೆ. ಏಕೆಂದರೆ ಮೊಟ್ಟ ಮೊದಲನೆಯದಾಗಿ ಡಿಸೆಂಬರ್ ತಿಂಗಳಿನಲ್ಲಿ ರೈತನೊಬ್ಬನ ಆತ್ಮಹತ್ಯೆ ಆಯಿತು. ಆದರೆ ನಮ್ಮ ಜಿಲ್ಲೆಯ ಮಂತ್ರಿಯವರು ಯಾವತ್ತಿನ ದಿನ ರ್‍ಯಾಲಿ ಇತ್ತು ಅವತ್ತಿನ ದಿನ ಅಲ್ಲಿಗೆಲ್ಲ ಭೇಟಿ ನೀಡಿ ಆ ಬಗ್ಗೆ ವಿಚಾರಣೆ ಮಾಡಲು ಹೋಗಿದ್ದಾರೆ. ಅಲ್ಲಿಯವರೆಗೆ ಮೂರು ತಿಂಗಳ ಕಾಲ ಯಾರೂ ಸಹ ಈ ಹಳ್ಳಿಗಳಿಗೆ ಭೇಟಿ ನೀಡಿ ಆತ್ಮಹತ್ಯೆ ಮಾಡಿಕೊಂಡಂತಹ ಪರಿವಾರದವರನ್ನು ಸಂಪರ್ಕಿಸಿ ಸತ್ಯಸಂಗತಿಯನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ಕೇವಲ ಜಿಲ್ಲಾಧಿಕಾರಿಯವರ ರಿಪೋರ್ಟ್ ಮೇಲೆ ಅವರೆಲ್ಲಾ ಅವಲಂಬಿತರಾಗಿದ್ದರು. ಇದರಿಂದಾಗಿ ಅಲ್ಲಿನ ಜನತೆ ಬಹಳ ದೊಡ್ಡ ರ್‍ಯಾಲಿಯನ್ನೇ ಮಾಡಬೇಕಾಯಿತು. ನಾನು ತಮ್ಮ ಪರವಾನಗಿ ಪಡೆದು ಡೆಕನ್ ಹೆರಾಲ್ಡ್‌ನಲ್ಲಿ ಬಂದಿರುವ ಒಂದು ವರದಿಯನ್ನು ಇಲ್ಲಿ ಓದಲಿಚ್ಛಿಸುತ್ತೇನೆ.

"Bidar Ryots want compensation. At least 40000 farmers took out protest march in Bidar city today demanding that the Government pay compensation to farmers who are hit by monsoon failure and untimely rains and had incurred huge losses. They later staged a symbolic dharna before the deputy commissioner's office for half-an-hour. The protest march was organised by the district Farmers & Farm Workers Association. Earlier a meeting was held under the leadership of former Minister and MLC, Mr.Bheemanna khandre, where the farmers threatened to launch an intense agitation if they were not suitably compensated for their losses." ನಾನು ಇವತ್ತಿನ ದಿನ ಈ

ಸಭೆಯಲ್ಲಿ ಏನು ಹೇಳಬಯಸುತ್ತೇನೆಂದರೆ ಸುಮಾರು 40-50 ಸಾವಿರ ಜನರು ರ್‍ಯಾಲಿಯಲ್ಲಿ ಭಾಗವಹಿಸಿದ ಮೇಲೆ ನೀವು ಕಣ್ಣು ತೆರೆದಿದ್ದೀರಿ. ಅದುವರೆಗೆ ಅದು ನಿಮ್ಮ ಕರ್ತವ್ಯವಾಗಿರಲಿಲ್ಲವೇನು? ಈ ಮೊದಲೇ ರೈತರು ಕಳೆದ ಡಿಸೆಂಬರ್ ಮತ್ತು ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಇರುವಾಗ ಆ ಪರಿಸ್ಥಿತಿ ಬಗ್ಗೆ ನೀವು ಗಮನ ಹರಿಸಿ ರೈತರಿಗಾದ ಬೆಳೆ ಹಾನಿಗೆ ಸ್ವಲ್ಪ ಪ್ರಮಾಣದಲ್ಲಿಯಾದರೂ ಪರಿಹಾರ ಕೊಡುವುದು ತಮ್ಮ ಕರ್ತವ್ಯವಾಗಿತ್ತು. ಆದರೆ ತಾವು ಆ ಕಡೆ ತಮ್ಮ ಗಮನ ಕೊಡಲಿಲ್ಲ. ರ್‍ಯಾಲಿಯ ದಿನ ಮಾತ್ರ ಜಿಲ್ಲೆಯ ಮಾನ್ಯ ಉಸ್ತುವಾರಿ ಮಂತ್ರಿಗಳು ಆ ಪರಿವಾರದವರನ್ನು ಭೇಟಿಯಾಗಿ ಪರಿಹಾರ ಧನವನ್ನು ಕೊಟ್ಟಿದ್ದಾರೆ. ಎಲ್ಲಿಯವರೆಗೆ ರ್‍ಯಾಲಿ ಆಗಿಲ್ಲ ಅಲ್ಲಿಯವರೆಗೆ ಬೆಳೆ ಹಾನಿಯಿಂದ ಆತ್ಮಹತ್ಯೆಗಳಾಗುತ್ತಿವೆ ಎಂಬುದನ್ನು ಅವರು ಒಪ್ಪುವುದಕ್ಕೆ ಕೂಡ ತಯಾರಿರಲಿಲ್ಲ. ಇದೂ ಕೂಡ ಬಹಳ ದುಃಖಕರವಾದ ಒಂದು ಸಂಗತಿ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಇಂತಹ ಒಂದು ವ್ಯವಸ್ಥೆ ಇರಬಾರದು. ಜನರು ಕಷ್ಟದಲ್ಲಿದ್ದಾಗ ಸರ್ಕಾರ ಕೂಡಲೇ ಅವರ ಸಮಸ್ಯೆಗಳನ್ನು ತಿಳಿದು ಅವರಿಗೆ ಪರಿಹಾರದ ಮೊತ್ತವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಜಿಲ್ಲಾಧಿಕಾರಿಗಳ ಪಾತ್ರ ಈ ಸಂದರ್ಭದಲ್ಲಿ ಬಹಳ ಮುಖ್ಯವಾದುದು. ಈ ಬಗ್ಗೆ ಈಗಾಗಲೇ ಅನೇಕ ನಾಯಕರು ಹೇಳಿದ್ದಾರೆ. ಜಿಲ್ಲಾಧಿಕಾರಿಯವರು ಈ ಸಮಸ್ಯೆ ಬಗ್ಗೆ ಸುಳ್ಳು ವರದಿ ಒಂದನ್ನು ಈ ಮೊದಲು ಕೊಟ್ಟಿದ್ದರು. ರೈತರು ಬೆಳೆ ಹಾನಿಯಿಂದ ಆತ್ಮಹತ್ಯೆ ಮಾಡಿಕೊಂಡಿಲ್ಲ, ಬೇರೆ ಬೇರೆ ವೈಯಕ್ತಿಕ ಕಾರಣಗಳಿಂದ ಅವರೆಲ್ಲಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಜಿಲ್ಲಾಧಿಕಾರಿಗಳು ಸುಳ್ಳು ವರದಿ ಕೊಟ್ಟಿದ್ದಾರೆ ಎಂಬುದಾಗಿ ಶ್ರೀಮಾನ್ ಖರ್ಗೆಯವರು ಹೇಳಿದ್ದರಲ್ಲಿ ನೂರಕ್ಕೆ ನೂರರಷ್ಟು ಸತ್ಯಾಂಶವಿದೆ. ಬಹಳಷ್ಟು ಕಡೆ ಅಧಿಕಾರಿಗಳು ಈ ಪರಿಹಾರದ ಜನರನ್ನು ಒತ್ತಾಯಿಸಿ ಬೇರೆ ಬೇರೆ ಕಾರಣದಿಂದ ಈ ರೀತಿ ಆತ್ಮಹತ್ಯೆ ಆಗಿದೆ ಎಂದು ಬರೆದುಕೊಡಿ ಎಂದು ಅವರ ಮೇಲೆ ಒತ್ತಡ ತಂದಿದ್ದಾರೆ. ಈ ತರಹದ ಒಂದು ವ್ಯವಸ್ಥೆ ಸರಿಯಲ್ಲ. ಇದು ಏನನ್ನು ತೋರಿಸುತ್ತದೆ ಎಂದರೆ ಈ ಸರ್ಕಾರದಲ್ಲಿ ಎಷ್ಟು ಕ್ರೌರ್ಯದ ಜನರಿದ್ದಾರೆ ಎಂಬುದನ್ನು ಮತ್ತು ಜಿಲ್ಲಾಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನೂ ಕೂಡ ಅದು ತೋರಿಸಿಕೊಡುತ್ತದೆ. ಅವರಿಗೆ ಜನರ ಬಗ್ಗೆ ಅನುಕಂಪವೇ ಇಲ್ಲ ಮತ್ತು ಅವರು ಸುಳ್ಳು ವರದಿಯನ್ನು ಒಪ್ಪಿಸಲು ಸಹ ಹಿಂದುಮುಂದು ನೋಡುತ್ತಿಲ್ಲ. ಇದರ ಬಗ್ಗೆ ಕೂಡ ಸರ್ಕಾರ ಕೂಡಲೇ ಗಮನ ಹರಿಸಿ ಅಂತಹ ಜಿಲ್ಲಾಧಿಕಾರಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಜಿಲ್ಲಾ ಆಡಳಿತದ ಬಗ್ಗೆ ಬಹಳ ಒತ್ತಿಹೇಳಬೇಕೆಂದು ಇಚ್ಛೆಪಡುತ್ತೇನೆ. ಅವರು ಯಾವ ರೀತಿ ಜನರಿಂದ ದೂರವಾಗಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಂಡು ಸುಳ್ಳು ವರದಿ ಒಪ್ಪಿಸುವ ಪ್ರಯತ್ನ ಮಾಡಿರುವಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಒತ್ತಿಹೇಳಿರುವ ಇನ್ನೊಂದು ಪತ್ರಿಕಾ ವರದಿಯನ್ನು ನಾನು ಓದಲಿಚ್ಛಿಸುತ್ತೇನೆ. ಇದು

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರುವಂತಹ ಒಂದು ವರದಿ. ಅದೇನೆಂದರೆ, "Farmers end their lives due to crop failure, confirms Minister. contrary to the district Administration's report to the State Government, the Minister in charge of Municipal Administration, Mirajuddin Patel, who is the partron Minister of Bidar, confirmed on Saturday that the suicide of the farmers in Bhalki Taluk was due to total failure of kharif and Rabi crops. Patel not only confirmed the suicides but also gave compensation cheques to the next of kin of the farmers who had ended their lives in the last three months." ನಾನು ಸರ್ಕಾರಕ್ಕೆ ಏನು ಕೇಳಬಯಸ್ಥುತ್ತೇನೆಂದರೆ ಒಂದು ವೇಳೆ ನಿಮ್ಮ ಮಂತ್ರಿಗಳು ಅಲ್ಲೆಲ್ಲಾ ಹೋಗಿ ಸತ್ಯಸಂಗತಿಯನ್ನು ಜನರ ಮುಂದೆ ತರಬೇಕಾದ ಒಂದು ಪರಿಸ್ಥಿತಿ ಬಂದಿದೆ ಎಂದರೆ ಇದು ಸರ್ಕಾರ ಇದೆಯೋ ಇಲ್ಲವೋ ಎಂದು ಹೇಳಿ ಜನರಿಗೆ ಅನ್ನಿಸುತ್ತಿದೆ. ಕಾರಣ ಜಿಲ್ಲಾಧಿಕಾರಿ ಒಂದು ರಿಪೋರ್ಟು ಕೊಡುತ್ತಿದ್ದಾರೆ, ಜಿಲ್ಲಾಧಿಕಾರಿ ವರದಿ ಕೊಟ್ಟಿರುವಂಥದ್ದಕ್ಕೆ ಅದಕ್ಕೆ ತದ್ವಿರುದ್ಧವಾಗಿ ಮಂತ್ರಿಗಳು ಅಲ್ಲಿ ಬಂದು ಅವತ್ತಿನ ದಿನ ಆ ಜಿಲ್ಲಾಧಿಕಾರಿಗಳು ಏನು ರಿಪೋರ್ಟು ಕೊಟ್ಟಿದ್ದಾರೆ, ಅದು ಸುಳ್ಳು ಇದೆ, ಮತ್ತೆ ನಾನು ಸ್ವತಃ ನೋಡಿದ್ದೇನೆ, ಆ ಪರಿಹಾರದವರನ್ನೆಲ್ಲಾ ಭೇಟಿಯಾಗಿದ್ದೇನೆ, ಈ ಸಾವುಗಳು ಏನು ಭಾಲ್ಕಿಯಲ್ಲಿ ಮತ್ತು ಬೀದರ್ ಜಿಲ್ಲೆಯಲ್ಲಿ ಆಗಿವೆ, ಇವೆಲ್ಲಾ ಬೆಳೆ ಹಾನಿಯಿಂದಲೇ ಆಗಿದ್ದಾವೆ ಎಂದು ಹೇಳಿ ಅವರೇ ಸರ್ಟಿಫಿಕೇಟ್ ಕೊಡಬೇಕಾದಂಥ ಒಂದು ಪರಿಸ್ಥಿತಿ ಬಂದಿದೆ ಎಂದರೆ ಜಿಲ್ಲಾ ಆಡಳಿತ ಎಷ್ಟು ಕೆಟ್ಟು ಹೋಗಿದೆ ಎಂಬುದನ್ನೂ ಕೂಡ ನೋಡಬೇಕಾಗಿದೆ. ಇದರ ಬಗ್ಗೆಯೂ ಕೂಡ ಸರ್ಕಾರ ಕೂಡಲೇ ಗಮನವನ್ನು ಹರಿಸಬೇಕು. ಮತ್ತು ಈ ರೀತಿಯ ತಪ್ಪುಗಳೆಲ್ಲಾ ಮುಂದೆ ಆಗದ ಹಾಗೆ ತಾವೆಲ್ಲಾ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಹೇಳುವುದಾದರೆ ಅನೇಕ ಸಲ ಏನಾಗುತ್ತದೆ ಎಂದರೆ ಇಂಥವು ಏನಾದರೂ ರೈತರ ಸಮಸ್ಯೆಗಳೆಲ್ಲಾ ಬಂದಾಗ ಬಹಳ ಸಲ ಬೇರೆ ಬೇರೆ ಜಿಲ್ಲೆಯಲ್ಲಿ ಆಗಿರುವ ಕೆಲವು ಬೆಳೆ ಹಾನಿಗಳ ಬಗ್ಗೆ ಕೂಡ ಚರ್ಚೆಯಾಗುತ್ತಿರುತ್ತದೆ. ಅದಕ್ಕೆ ನಾವೆಲ್ಲ ಒಂದು ಸಮಗ್ರವಾದ ನೀತಿ ಮಾಡಬೇಕು ಎಂದು ಸರ್ಕಾರದವರು ಏನೋ ಹೇಳುತ್ತಿರುತ್ತಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಏನು ಹೇಳಬಯಸುತ್ತೇನೆ ಎಂದರೆ ಬೀದರ್ ಜಿಲ್ಲೆಯಲ್ಲಿ ಆಗಿರುವ ಏನೊಂದು ದೊಡ್ಡ ಟ್ರಾಜೆಡಿ ಇದೆ, ಕಳೆದ 50 ವರ್ಷಗಳಲ್ಲಿ ಇಂಥ ದೊಡ್ಡ ಟ್ರಾಜೆಡಿ ಯಾವತ್ತೂ ಆಗಿರಲಿಲ್ಲ. ಇದು ಬೀದರ್ ಜಿಲ್ಲೆಯ ಜನ ಪ್ರತಿ ನಾಲ್ಕೈದಾರು ವರ್ಷಕ್ಕೆ ಒಂದು ಸಲ ಬರಗಾಲವನ್ನು ಎದುರಿಸುತ್ತಾ ಬಂದಿದ್ದಾರೆ. ಅದರ ಹಿಂದೆ ಯಾವತ್ತೂ ಈ ರೀತಿಯ ಆತ್ಮಹತ್ಯೆಗಳನ್ನು ಅಲ್ಲಿ ಅವರುಗಳು ಮಾಡಿಕೊಂಡಿಲ್ಲ.

ಅಂದರೆ ಕಷ್ಟವನ್ನು ಸಾಧ್ಯವಾದಷ್ಟು ಧೈರ್ಯದಿಂದ ಎದುರಿಸುತ್ತಾ ಬಂದರೂ ಸಹ ಈ ವರ್ಷ ಯಾವ ದೊಡ್ಡ ಪ್ರಮಾಣದ ಒಂದೆರಡು ಬೆಳೆ ಹಾನಿಯಾಗಿದೆ ಮತ್ತು ಒಂದು ಸಾಲದ ಹೊರೆ ಅವರ ಮೇಲೆ ಆಗಿದೆ, ಇದು ಬಹಳ ಹೆಚ್ಚಿನದು, ಮತ್ತು ಇನ್ನು ಮುಂದೆ ಖಾರೀಫ್ ಬೆಳೆ ಬೆಳೆದು ನಂತರ ಅದು ಹಾರ್ವೆಸ್ಟ್ ಆದಮೇಲೆ ಅವರಿಗೆ ಹಣ ಬರುತ್ತದೆ. ಅಲ್ಲಿಯವರೆಗೂ ಅವರು ಬಹಳ ಕಷ್ಟದಲ್ಲಿದ್ದಾರೆ. ಅವರ ಕಷ್ಟದ ಪರಿಸ್ಥಿತಿಯನ್ನು ತಾವೆಲ್ಲಾ ತಿಳಿದುಕೊಂಡು, ಅರ್ಥಮಾಡಿಕೊಂಡು ಇವತ್ತು ಇದರ ಬಗ್ಗೆ ತಾವೇನಾದರೂ ಕೂಡಲೇ ಗಮನವನ್ನು ಹರಿಸಿ ಪರಿಹಾರವನ್ನು ಹುಡುಕಬೇಕಾಗಿದೆ. ಅದಕ್ಕೆ ಈಗ ಈ ಒಂದು ಬೆಳೆ ಹಾನಿಯಿಂದ ಯಾರ್‍ಯಾರು ತಮ್ಮ ಪ್ರಾಣವನ್ನೆಲ್ಲಾ ಕಳೆದುಕೊಂಡಿದ್ದಾರೋ ಅಂಥ ಜನರ ಕುಟುಂಬದವರಿಗೆ ಕನಿಷ್ಟ ಒಂದು ಲಕ್ಷ ರೂಪಾಯಿಗಳನ್ನಾದರೂ ತಾವು ಪರಿಹಾರವನ್ನಾಗಿ ಕೂಡಲೇ ಮಂಜೂರು ಮಾಡಬೇಕು. ಮತ್ತು ಪ್ರತಿ ಹೆಕ್ಟೇರ್‌ಗೆ ಮೂರು ಸಾವಿರ ರೂಪಾಯಿಗಳಷ್ಟು ತಾವು ಮಂಜೂರು ಮಾಡಿ ಅವರಿಗೆ ಪರಿಹಾರ ಕೊಟ್ಟರಿ ಎಂದರೆ ಬಹಳ ಧೈರ್ಯದಿಂದ ಅವರು ಮುಂದೆ ಬರುವ ಖಾರೀಫ್ ಬೆಳೆ ಆ ಟೈಮ್‌ನಲ್ಲಿ ಸೋಯಿಂಗ್ ಆಗಿ ಅವರೆಲ್ಲಾ ತಯಾರಿ ಮಾಡಬಹುದು. ಜೀವನವನ್ನು ಧೈರ್ಯದಿಂದ ಎದುರಿಸಬಹುದು, ಅದಕ್ಕೆ ಯಾವ ರೀತಿಯಾಗಿಯೂ ಈ ರೀತಿಯ ಪರಿಹಾರವನ್ನು ಕೊಡಲಿಕ್ಕೆ ತಾವೆಲ್ಲಾ ಆದಷ್ಟು ಬೇಗ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನೊಂದು ಈಗ ಬೀದರ್ ಜಿಲ್ಲೆಯಲ್ಲಿ ಪಲ್ಸ್ ಬೆಳೆ ಹೆಚ್ಚಾಗಿರುವುದರಿಂದ ಅಲ್ಲೊಂದು ಪಲ್ಸಸ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ್ನು ಕೂಡ ತಾವು ಅಲ್ಲಿ ತೆಗೆದು ಪ್ರತಿ ನಾಲ್ಕೈದು ವರ್ಷಕ್ಕೆ ಈ ರೀತಿಯ ಒಂದು ದೊಡ್ಡ ಸಮಸ್ಯೆ ಏನು ಬರುತ್ತಿದೆ ರೈತರಿಗೆ, ಅದರ ಬಗ್ಗೆ ಅವರಿಗೆ ಮಾರ್ಗದರ್ಶನ ಮಾಡಿ ಅವರಿಗೆ ಒಳ್ಳೆಯ ರೀತಿಯಲ್ಲಿ ಬೆಳೆಯನ್ನು ಬೆಳೆಯುವ ಹಾಗೆ ಒಂದು ಅನುಕೂಲ ಮಾಡಿಕೊಡುವುದಕ್ಕಾಗಿ ಇಂಥ ಒಂದು ಸಂಸ್ಥೆಯನ್ನು ತೆಗೆಸಿಕೊಡಬೇಕೆಂದು ಕೂಡ ನಾನು ತಮ್ಮಲ್ಲಿ ಇವತ್ತಿನ ದಿವಸ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರ ಆದಷ್ಟು ಬೇಗ ಇದರ ಬಗ್ಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಂಡು ಸಭಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ (ಬೀದರ್): ಮಾನ್ಯ ಉಪಾಧ್ಯಕ್ಷರೇ, ಈಗ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ನಮ್ಮ ಬೀದರ್ ಭಾಲ್ಕಿ ಶಾಸಕರಾದ ಠಾಕ್ಟರ್ ವಿಜಯಕುಮಾರ್ ಖಂಡ್ರೆಯವರು ರೈತರುಗಳು ನಮ್ಮಲ್ಲಿ ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ರೈತರ ಸಮಸ್ಯೆ ಏನು ಇದೆ, ಎಂಬುದನ್ನೆಲ್ಲ ವಿವರವಾಗಿ ತಮ್ಮ ಮುಂದೆ ಎಲ್ಲಾ ಹೇಳಿದ್ದಾರೆ. ನಾನು ನಿಮ್ಮ ಮೂಲಕ ಸರ್ಕಾರಕ್ಕೆ ಇಷ್ಟು ಹೇಳಬಯಸುತ್ತೇನೆ. ಈಗ ಬೀದರ್‌ನಲ್ಲಿ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಈಗ ಮೂರು ತಿಂಗಳಿಂದ ಇವರ್‍ಯಾರು ಸರ್ಕಾರದವರು ಗಮನವನ್ನು ಹರಿಸಿಲ್ಲ ಮೊನ್ನೆ ಇವರು

7ನೇ ತಾರೀಖಿನಲ್ಲಿ ಆತ್ಮಹತ್ಯೆಯಾಗಿರುವುದು ನಿಜ ಯಾರ‍್ಯಾರ ಮನೆಯಲ್ಲಿ ಸತ್ತಿದ್ದಾರೋ ಅವರಿಗೆ ಐದು ಸಾವಿರ ರೂಪಾಯಿಯನ್ನು ಕೊಡುವುದಕ್ಕೆ ನಮ್ಮ ಜಿಲ್ಲಾ ಮಂತ್ರಿಗಳು ಹೋಗಿದ್ದಾರೆ. ಇಷ್ಟು ದಿವಸವಾದರೂ ಇವರ ಗಮನಕ್ಕೆ ಬಂದಿಲ್ಲ. ಅವತ್ತು 7ನೇ ತಾರೀಖು ನಮ್ಮ ಶಾಸಕರು ಎಲ್ಲಾ ಪಾರ್ಟಿಯವರು ಸೇರಿ ಒಂದು ರ‍್ಯಾಲಿಯನ್ನು ಮಾಡುತ್ತಿದ್ದರು. ಆಗ ನಮ್ಮ ಜಿಲ್ಲಾ ಮಂತ್ರಿಗಳು ಹೋಗಿದ್ದಾರೆ. ಗುರುಪಾದಪ್ಪ ನಾಗಮಾರಪಲ್ಲಿಯವರು ಇರಲಿ, ಮಿರಾಜುದ್ದೀನ್ ಪಟೇಲರು ಇರಲಿ, ಇವರು ಸರ್ಕಾರದಲ್ಲಿ ಮಂತ್ರಿಗಳಿದ್ದಾರೆ. ಒಬ್ಬರು ಮಂತ್ರಿಗಳು ಇದ್ದಾಗ ಡಿಸ್ಟ್ರಿಕ್ಟ್ ಇನ್ ಛಾರ್ಜ್ ಮಿನಿಸ್ಟರ್ ಇರಲಿಕ್ಕೆ ಕಂಡೀಷನ್ ಏನೂ ಇಲ್ಲ. ನೀವು ಸರ್ಕಾರದಲ್ಲಿ ಮಂತ್ರಿಗಳಿದ್ದೀರಿ, ನಿಮ್ಮ ಕರ್ತವ್ಯ ಇದೆ. ಯಾರು ಇರಬೇಕು? ನಮ್ಮ ಬೀದರ್‌ನಲ್ಲಿ ರೈತರ ಪರಿಸ್ಥಿತಿ ಏನಾಗಿದೆ ಎಂದರೆ ಎಷ್ಟೋ ರೈತರ ಮನೆಯಲ್ಲಿ ಮದುವೆ ಇತ್ತು, ನಾನು ಮೊನ್ನೆ ಇಂಥ ಘಟನೆ ನಡೆದಾಗ ಹೋಗಿದ್ದೆ. ಹೆಣ್ಣುಮಕ್ಕಳ ತಂದೆ ಏನು ಹೇಳುತ್ತಿದ್ದಾನೆ, ಅಂದರೆ ಈ ವರ್ಷ ನಮ್ಮಲ್ಲಿ ಬೆಳೆ ಏನೂ ಆಗಿಲ್ಲ, ಮದುವೆಯನ್ನು ಮುಂದೂಡೋಣ ಎಂದು ಆಗ ಗಂಡಿನ ಕಡೆಯವರು ಏನು ಹೇಳುತ್ತಾರೆ ಎಂದರೆ ಮದುವೆಯನ್ನು ಮುಂದೂಡುವುದಕ್ಕಾಗುವುದಿಲ್ಲ, ನಮ್ಮ ನಿಮ್ಮ ನೆಂಟಸ್ಥನ ಏನು ಇದೆ, ಅದನ್ನು ಬಿಟ್ಟುಬಿಡಿ ಎಂದು ಹೇಳುತ್ತಿದ್ದಾರೆ. ಇಂಥ ಒಂದು ಪರಿಸ್ಥಿತಿ ಅಲ್ಲಿ ಇದೆ. ಅದಕ್ಕಿಂತ ಹೆಚ್ಚಾಗಿ ತೊಂದರೆ ರೈತ ಕಾರ್ಮಿಕರಿಗೆ ಆಗಿದೆ. ಸಾವಿರಾರು ಜನ ಹೈದರಾಬಾದ್, ಬಾಂಬೆ ಆ ಕಡೆ ಈ ಕಡೆ ಹೋಗುತ್ತಿದ್ದಾರೆ. ಇನ್ನೂ ಕೂಡ ಸರ್ಕಾರದವರು ಅಲ್ಲಿ ಗಮನ ಹರಿಸಲಿಕ್ಕೆ ರೆಡಿ ಇಲ್ಲ. ಅದರ ಸಲುವಾಗಿ ತಮ್ಮೂಲಕ ನಾನು ಸರ್ಕಾರಕ್ಕೆ ಒಂದು ವಾರ್ನಿಂಗ್ ಕೊಡುತ್ತೇನೆ. ಒಂದು ವಾದಲ್ಲಿ ನಮ್ಮ ರೈತರ ಸಮಸ್ಯೆಯನ್ನು ಬಗೆಹರಿಸಬೇಕು. ಬೀದರ್‌ನಲ್ಲಿ ಏನು ಸಮಸ್ಯೆ ಇದೆ, ಅದನ್ನು ಬಗೆಹರಿಸಬೇಕು, ಇದನ್ನು ನಾನು ಸುಮ್ಮನೆ ಹೇಳುತ್ತಿಲ್ಲ. ನಮ್ಮ ಜನರಲ್ಲಿ ಒಂದು ಮಿಲಿಟೆನ್ಸಿ ಬರುತ್ತಿದೆ. ನಮ್ಮ ಜನರ ಕಡೆಯಿಂದ ಸರ್ಕಾರದ ಮೇಲೆ, ಸರ್ಕಾರದ ಅಧಿಕಾರಿ ಮೇಲೆ ಕರ್ಫ್ಯೂ ನಡೆಸಬಹುದು. ಇಂಥ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಬಂದುಬಿಟ್ಟಿದೆ. ಮತ್ತೆ ರೈತ ಕಾರ್ಮಿಕರ ಸಮಸ್ಯೆ, ಅವರ ಪರಿಸ್ಥಿತಿ ಅದಕ್ಕಿಂತ ಕೆಟ್ಟ ಪರಿಸ್ಥಿತಿ ಬಂದುಬಿಟ್ಟಿದೆ. ಅದರ ಸಲುವಾಗಿ ನಾನು ಹೆಚ್ಚು ಮಾತು ಆಡುವುದಿಲ್ಲ. ಸರ್ಕಾರಕ್ಕೆ ಇಷ್ಟೇ ಹೇಳುತ್ತೇನೆ. ನಮ್ಮ ಬೇಡಿಕೆ ಏನೆಂದರೆ ನಾವು ಒಂದು ಮೆಮೊರಾಂಡಂನ್ನು ಸರ್ಕಾರಕ್ಕೆ ಎಲ್ಲಾ ಜಿಲ್ಲಾ ರೈತ ಕಾರ್ಮಿಕರು ಮತ್ತೆಲ್ಲಾ ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಎಲ್ಲಾ ಪಕ್ಷದ ಶಾಸಕರು, ಎಲ್ಲಾ ಪಕ್ಷದ ಮುಖಂಡರುಗಳು ಸೇರಿ ಸರ್ಕಾರಕ್ಕೆ ಒಂದು ಮೆಮೊರಾಂಡಂನ್ನು ಕೊಟ್ಟಿದ್ದೇವೆ. ಆ ಮೆಮೊರಾಂಡಂ ಸರ್ಕಾರದಲ್ಲಿ ಇದೆ. ಅದರ ಮೇಲೆ ತಾವು ಸೀರಿಯಸ್ ಆಗಿ ಆ್ಯಕ್ಷನ್ ತೆಗೆದುಕೊಂಡು ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು. ಮತ್ತೆ ಈಗ ರೈತ ಕಾರ್ಮಿಕರ ಸಲುವಾಗಿ ನೆಹರು ರೋಜ್‌ಗಾರ್ ಯೋಜನೆಯಾಗಲಿ ಬೇರೆ ಬೇರೆ ಯೋಜನೆಯಲ್ಲಿ ತಾವೇನಾದರೂ ಅವರಿಗೆ ಏನಾದರೂ ಕೆಲಸವನ್ನು ಹಚ್ಚಿಕೊಡುತ್ತೀರಿ ಎಂದು ತಮ್ಮ ಮುಂದೆ ವಿನಂತಿ ಇದೆ.

ಮತ್ತೊಂದು ಈ ಬೀದರ್‌ನಲ್ಲಿ ಇರಿಗೇಷನ್ ಪ್ರಾಜೆಕ್ಟ್ ಏನೂ ಇಲ್ಲ. 6 ಪರ್ಸೆಂಟ್ ನಮ್ಮಲ್ಲಿ ಇರಿಗೇಟೆಡ್ ಲ್ಯಾಂಡ್ ಇದೆ. ನಮ್ಮಲ್ಲಿ ಒಂದು ದೊಡ್ಡ ಕಾರಂಜಾ ಪ್ರಾಜೆಕ್ಟ್ ಆಗುತ್ತಿದೆ ಎಂದು ನಮ್ಮ ಕನಸು ಇತ್ತು. ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಏತಕ್ಕಾಗಿ ಅದನ್ನು ನಿಲ್ಲಿಸಿದ್ದಾರೆ, ಅದು ಇಮ್ಮೀಡಿಯೇಟ್ ಆಗಿ ಕಂಪ್ಲೀಟ್ ಆಗಬೇಕು. ಮತ್ತು ಎರಡು ಮೂರು ವರ್ಷದಿಂದ ರೈತರಿಗೆ ಕಬ್ಬಿನ ಹಣವನ್ನು ಬಿಎಸ್‌ಎಫ್‌ಕೆ ಲಿಮಿಟೆಡ್‌ನವರಾಗಲೀ, ಸರ್ಕಾರದವರಾಗಲೀ ಕೊಡುತ್ತಿಲ್ಲ. ಮ್ಯಾನೇಜ್‌ಮೆಂಟ್ ಅಡ್ವೈಸರಿ ಕಮಿಟಿ ಛೇರ್ಮನ್ ಆಗಿ ನಮ್ಮ ಡಿಸ್ಟ್ರಿಕ್ಟ್ ಮಿನಿಸ್ಟರ್ ಅಲ್ಲಿದ್ದಾರೆ, ಏತಕ್ಕೆ ಅವರು ಕೊಡುತ್ತಿಲ್ಲ, ಇಮ್ಮಿಡಿಯೇಟ್ ಆಗಿ ಅದನ್ನು ಕೊಡಬೇಕು. ನಿಮ್ಮಲ್ಲಿ ಅವರದೇನು ಬ್ಯಾಲೆನ್ಸ್ ಅಮೌಂಟ್ ಇದೆ, ಆ ರೈತರಿಗೆ ತಾವು ಇಮ್ಮೀಡಿಯೇಟ್ ಆಗಿ ಕೊಡಿಸಬೇಕು ಮತ್ತು ನಿಮ್ಮ ಮೂಲಕ ಇನ್ನೊಂದು ಸಾರಿ ಸರ್ಕಾರಕ್ಕೆ ಇದು ಅವರ ಕರ್ತವ್ಯ ಇತ್ತು, ಅವರು ಮಾಡಬೇಕಾಗಿತ್ತು, ಅವರು ಮಾಡಿಲ್ಲ. ನಾವು ನಮ್ಮ ಕರ್ತವ್ಯವನ್ನು ನಿಭಾಯಿಸಿದ್ದೇವೆ. ಒಂದು ವಾರದಲ್ಲಿ ಕೆಲಸವಾಗಲಿಲ್ಲ ಎಂದರೂ ನಿಮ್ಮ ಮೂಲಕ ಸರ್ಕಾರಕ್ಕೆ ಇದು ಒಂದು ವಾರ್ನಿಂಗ್ ಇದೆ, ಯಾರು ಮಂತ್ರಿಗಳಾಗಲಿ, ಯಾರು ಸರ್ಕಾರಿ ಅಧಿಕಾರಿಯಾಗಲಿ ನಮ್ಮ ಬೀದರ್ ಜಿಲ್ಲೆಗೆ ಬರುವುದಕ್ಕಾಗುವುದಿಲ್ಲ. ಏನಾದರೂ ಘಟನೆಯಾದರೂ, ಏನಾದರೂ ಅಲ್ಲಿ ವಯಲೆನ್ಸ್ ಆದರೂ ಇದಕ್ಕೆ ಸರ್ಕಾರ ಕಾರಣ ಎಂದು ತಮ್ಮಮೂಲಕ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೇ, ಇದು ಒಂದು ಬಹಳ ದುರಂತವಾದ ಘಟನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇದುವರೆಗೂ ಕೂಡ ಇಂಥ ದುರಂತ ನಡೆದಿರಲಿಲ್ಲ. ಅಂಥ ದುರಂತ ಕರ್ನಾಟಕ ರಾಜ್ಯದಲ್ಲಿ ನಡೆದಿದೆ. ಬೀದರ್ ಜಿಲ್ಲೆಯಲ್ಲಿ ಹತ್ತು ಜನ ರೈತರು ಬೆಳೆಗಳು ನಾಶವಾಗಿದೆ ಎಂಬ ಕಾರಣಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದೇ ಮೊದಲನೇ ಬಾರಿಗೆ ಇಂಥ ದುರ್ಘಟನೆ ನಡೆದಿದೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಒಟ್ಟು 320 ಕೋಟಿ ರೂಪಾಯಿಗಳಷ್ಟು ಬೆಳೆ ನಾಶವಾಗಿದೆ ಬೀದರ್ ಜಿಲ್ಲೆ ಒಂದೇ ಕಡೆ. ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು 2 ತಿಂಗಳಿಂದ ಬರುತ್ತಿದೆ. ಬಹುಶಃ ಇದನ್ನು ಸರ್ಕಾರ ಗಮನಿಸಬೇಕಾಗಿತ್ತು. ಆಂಧ್ರದಲ್ಲೂ ಇದೇ ಪರಿಸ್ಥಿತಿ ಬಂದು ಅಲ್ಲೂ ಕೂಡ ಆತ್ಮಹತ್ಯೆ ಪ್ರಕರಣಗಳು ವರದಿಯಾದವು. ಈಗ ಬೀದರ್ ಜಿಲ್ಲೆಯಲ್ಲೂ ಆತ್ಮಹತ್ಯೆ ಪ್ರಕರಣಗಳು ವರದಿಯಾಗುತ್ತಿವೆ. ಸರ್ಕಾರ ಏಕೆ ಇದರ ಬಗ್ಗೆ ಕನಿಷ್ಟ ಕಾಳಜಿ ವಹಿಸುತ್ತಾ ಇಲ್ಲ? ಎಂದು ಹೇಳತಕ್ಕ ಮಾತಿಗೆ ಇವತ್ತು ಸರ್ಕಾರ ಉತ್ತರ ಕೊಡಬೇಕಾಗಿದೆ. ಏಕೆಂದರೆ ಹೇಳಿದರೆ ರೈತರ ಪರವಾಗಿ ಇರತಕ್ಕ ಸರ್ಕಾರ ಇದು ಎಂದು ಪದೇ ಪದೇ ಹೇಳತಕ್ಕವರು ಇವರು. ಹತ್ತು ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದರ ಸತ್ಯಾಂಶ ಏನು? ಸತ್ಯಾಸತ್ಯಗಳನ್ನು ಕನಿಷ್ಟ ಪರಿಶೀಲನೆ ಮಾಡಲಿಕ್ಕೆ ಆಗಲಿಲ್ಲ ಎಂದರೆ ಹೇಗೆ? ಇವರು ಯಾರೋ ಒಬ್ಬ ಜಿಲ್ಲಾಧಿಕಾರಿ ಕೊಡುವ

ವರದಿ ಮೇಲೆ ನಂಬಿಕೆ ಇಟ್ಟಿದ್ದಾರೆ. ಕರ್ನಾಟಕದಲ್ಲಿರತಕ್ಕ ಅಧಿಕಾರಿಗಳು ಇವತ್ತು ಏನಾಗಿದ್ದಾರೆ ಎಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ಮಾತನ್ನು ನಂಬಲಿಕ್ಕೆ ಸರ್ಕಾರ ತಯಾರು ಇಲ್ಲ. ಅದರ ಬದಲು ಒಬ್ಬ ಅಧಿಕಾರಿ ಮಾತನ್ನು ಮಾತ್ರ ಸರ್ಕಾರ ನಂಬುತ್ತದೆ. ಅಧಿಕಾರಿ ವರ್ಗ ವರದಿ ಕಳುಹಿಸುತ್ತಾನೆ, ಇದಕ್ಕೂ ಆತ್ಮಹತ್ಯೆಗೂ ಸಂಬಂಧ ಇಲ್ಲ. ಬೆಳೆ ನಾಶಕ್ಕೆ ಸಂಬಂಧ ಇಲ್ಲ ಎಂದು ವರದಿ ಕಳುಹಿಸುತ್ತಾನೆ. ಅದರ ಸತ್ಯಾಸತ್ಯತೆಗಳನ್ನಾದರೂ ಪರಿಶೀಲನೆ ಮಾಡತಕ್ಕಂಥ ಕನಿಷ್ಟ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕಾಗಿತ್ತು. ಸರ್ಕಾರ ವಹಿಸಲಿಲ್ಲ. ಹಾಗಾಗಿ ಇವತ್ತು ಹತ್ತು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಕಿ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯ ಇದೆ. ಕೆಲವರು ಎಂಟು ಜನ ವಾಸ್ತವವಾಗಿ ಸತ್ತಿದ್ದಾರೆ ಎಂದು ಹೇಳುತ್ತಾರೆ, ಕೆಲವರು ಹತ್ತು ಎಂದು ಹೇಳುತ್ತಾರೆ. ಅದು ಅಂಕಿ ಅಂಶಗಳ ಬಗ್ಗೆ ತಕರಾರು ಮಾಡಿಕೊಳ್ಳತಕ್ಕ ಅವಶ್ಯಕತೆ ಏನೂ ಇಲ್ಲ. ಒಬ್ಬರು ಸತ್ತರೂ ಕೂಡ, ಒಬ್ಬ ಮನುಷ್ಯನ ಪ್ರಾಣಕ್ಕೆ ಈ ದೇಶದಲ್ಲಿ ಬಹಳ ಬೆಲೆ ಇದೆ. ಹತ್ತು ಜನರು ಸತ್ತರೂ ಒಂದೇ, ಒಬ್ಬರೇ ಒಬ್ಬರು ಆತ್ಮಹತ್ಯೆ ಮಾಡಿಕೊಂಡರೂ ಸಹ ಮನುಷ್ಯನ ಜೀವನಕ್ಕೆ ಬೆಲೆ ಇದ್ದಂತಹ ಈ ದೇಶದಲ್ಲಿ ಇಂತಹ ಒಂದು ದುರಂತ ನಡೆಯಲಿಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿರತಕ್ಕದ್ದು, ಇದು ಸಂಪೂರ್ಣವಾದಂತಹ ತನ್ನ ಜವಾಬ್ದಾರಿಯನ್ನು ಮತ್ತು ಬೇಜವಾಬ್ದಾರಿತನವನ್ನು ಪ್ರದರ್ಶನ ಮಾಡಿದೆ. ಅದಕ್ಕೆ ಸರ್ಕಾರ ಇವತ್ತು ಉತ್ತರ ಹೇಳಬೇಕಾಗಿದೆ. ಒಬ್ಬ ಅಧಿಕಾರಿ ಅದೂ ಜಿಲ್ಲಾಧಿಕಾರಿಗೆ ಎಷ್ಟು ಉದ್ಧಟತನ ಇದೆ ಎಂದು ಹೇಳಿದರೆ ಆ ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು, ಮುಖಂಡರುಗಳು ಹೇಳುತ್ತಿದ್ದಾರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಿಲ್ಲಾಧಿಕಾರಿ ಹೇಳುತ್ತಾನೆ, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ಹೇಳುತ್ತಾನೆ. ಉದ್ಧಟತನವನ್ನು ತೋರಿಸತಕ್ಕ ಅಧಿಕಾರಿ ಮೇಲೆ ಈ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ನಾನು ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ. ಒಟ್ಟು ಬೀದರ್ ಜಿಲ್ಲೆಯಲ್ಲಿ 320 ಕೋಟಿ ರೂಪಾಯಿಗಳ ಬೆಳೆ ನಾಶವಾಗಿದೆ ಎಂದು ಹೇಳಿ ನಮಗೆ ಬಂದಿರತಕ್ಕ ಒಂದು ವರದಿ. ಅದರಲ್ಲಿ ಜೋಳ, 1300 ಹೆಕ್ಟೇರ್‌ನಲ್ಲಿ ಬೆಳೆದಿರತಕ್ಕದ್ದರಲ್ಲಿ ಒಂದು ಹೆಕ್ಟೇರ್‌ಗೆ 10 ಕ್ವಿಂಟಾಲ್ ಎಂದು ಹೇಳಿ ಸರಾಸರಿ ನೀವು ಲೆಕ್ಕ ಹಾಕಿದರೂ ಕೂಡ 78 ಕೋಟಿ ರೂಪಾಯಿಗಳು ಬರೀ ಜೋಳಕ್ಕೆ ಆಗುತ್ತದೆ. ತೊಗರಿ 6 ಸಾವಿರ ಹೆಕ್ಟೇರ್. ಅದು ಹತ್ತು ಕ್ವಿಂಟಾಲ್ ಸರಾಸರಿ ಹಾಕಿದರೆ 90 ಕೋಟಿ ರೂಪಾಯಿಗಳ ನಷ್ಟ ಆಗಿದೆ. ಕಡಲೆ 6 ಸಾವಿರ ಹೆಕ್ಟೇರ್. 90 ಕೋಟಿ ರೂಪಾಯಿಗಳ ನಷ್ಟ. ಉದ್ದು 6500 ಹೆಕ್ಟೇರ್. 8 ಕ್ವಿಂಟಾಲ್ ಸರಾಸರಿ ಬರುತ್ತದೆ. 47 ಕೋಟಿ ರೂಪಾಯಿಗಳು ನಷ್ಟ ಆಗಿದೆ. ಹೆಸರು 4 ಸಾವಿರ ಹೆಕ್ಟೇರ್, 6 ಕ್ವಿಂಟಾಲ್ ಸರಾಸರಿಯಲ್ಲಿ 24 ಕೋಟಿ ರೂಪಾಯಿ ನಷ್ಟ. ಒಟ್ಟು 320 ಕೋಟಿ ರೂಪಾಯಿಗಳ ಬೆಳೆ ನಾಶ ಆಗಿದೆ. ಇದು ಒಂದು ಕಡೆ ಮನುಷ್ಯರ ಜೀವನವನ್ನು ಬಲಿ ತೆಗೆದುಕೊಂಡಿದೆ. ರೈತರು ಅದಕ್ಕೆ ಸಾಲ ಮಾಡಿ ಅದಕ್ಕೆ ಬಂಡವಾಳ ಹಾಕಿ ಕೃಷಿ ಮಾಡಿ ಕಡೇ ಗಳಿಗೆಯಲ್ಲಿ ನಾಶ ಆದರೆ ರೈತರು ಏನು ಮಾಡಬೇಕು ಎಂದು ಹೇಳತಕ್ಕದ್ದಕ್ಕೆ ಒಂದು ಧೋರಣೆ ಇಲ್ಲ.

ಇವತ್ತು ಯಾವುದೇ ಸರ್ಕಾರ ಇದುವರೆಗೂ ಕೂಡ ಈ ದೇಶದಲ್ಲಿ ಮತ್ತು ರಾಜ್ಯದಲ್ಲಿ ಕೃಷಿ ನೀತಿಯನ್ನು ಸಮರ್ಪಕವಾಗಿ ರೂಪಿಸಲಿಲ್ಲ. ಹೊಸದಾಗಿ ಕೃಷಿ ನೀತಿ ಎಂದು ಹೇಳಿದರು-ಇದೇ ಸರ್ಕಾರ. ಆ ಹೊಸ ಕೃಷಿ ನೀತಿಯ ಒಂದು ಪ್ರತಿಫಲ ಇದು. ಏನು ಕೃಷಿ ನೀತಿಯನ್ನು ನೀವು ಪಾಲಿಸುತ್ತೀರಿ? ರೈತರಿಗೆ ರಕ್ಷಣೆ ಕೊಡುವುದಿಲ್ಲ. ಒಬ್ಬ ಸಣ್ಣ ಕಾರ್ಖಾನೆಯ ಮಾಲೀಕ ಎರಡು ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಕಾರ್ಖಾನೆ ಪ್ರಾರಂಭ ಮಾಡುತ್ತಾನೆ. ಮೂರು ತಿಂಗಳು ಆದ ಮೇಲೆ ಅದು ಪಾಪರ್ ಆಗಿದೆ ಎಂದು ಬೋರ್ಡ್ ತಿರುವಿ ಹಾಕಿದರೆ ಅವನಿಗೆ ಎಲ್ಲಾ ರೀತಿಯಾದಂತಹ ರಕ್ಷಣೆ ಮತ್ತು ಸೌಲಭ್ಯಗಳನ್ನು ಕೊಡುತ್ತೀರಿ. ಆದರೆ ರೈತನಿಗೆ ಮಾತ್ರ ಯಾವುದೇ ರೀತಿಯಾದಂತಹ ರಕ್ಷಣೆಯೂ ಇಲ್ಲ, ಸವಲತ್ತು ಸಹ ಇಲ್ಲ. ಸೌಲಭ್ಯವೂ ಇಲ್ಲ. ಸಣ್ಣ ಕಾರ್ಖಾನೆಯ ಮಾಲೀಕ ಯಾವುದೇ ವಸ್ತುಗಳನ್ನು ಉತ್ಪಾದನೆ ಮಾಡಿದರೆ ಮಾರ್ಕೆಟ್‌ನಲ್ಲಿ ಅವನಿಗೆ ನಷ್ಟವಾದರೆ ನೀವು ಎಲ್ಲಾ ರೀತಿಯಾದಂತಹ ಸಬ್ಸಿಡಿಗಳನ್ನು ರಕ್ಷಣೆಗಳನ್ನು ಕೊಡುತ್ತೀರಿ. ಆದರೆ ನಮ್ಮ ರೈತರು ಉತ್ಪಾದನೆ ಮಾಡಿದಂತಹ ಸರಕುಗಳ ನಷ್ಟ ಆದರೆ, ಅವರ ಜೀವ ಹೋದರೆ ಇದಕ್ಕೆ ನಿಮ್ಮಲ್ಲಿ 76 ಕಾನೂನುಗಳನ್ನು ಹೇಳುತ್ತೀರಿ. ರೆವಿನ್ಯೂ ಡಿಪಾರ್ಟ್‌ಮೆಂಟ್ ವಿಚಾರ. ಕಳೆದ ವರ್ಷ ಮತ್ತು ಈ ವರ್ಷ ನಮ್ಮ ಕೋಲಾರ ಜಿಲ್ಲೆಯಲ್ಲಿ ಕಡಲೆಕಾಯಿ ಸಂಪೂರ್ಣ ನಾಶ ಆಯಿತು. ರೈತರು ಸಂಪೂರ್ಣ ದಿವಾಳಿ ಆದರು. ಹೋದ ವರ್ಷ ಆಲಿಕಲ್ಲು ಮಳೆ ಬಿತ್ತು. ಭತ್ತ ನಾಶವಾಯಿತು. ಸರ್ಕಾರಕ್ಕೆ ವರದಿ ಕೊಟ್ಟೆವು, ಮೆಮೊರ್‍ಯಾಂಡಮ್ ಕೊಟ್ಟೆವು. ಇದೇ ಸದನದಲ್ಲಿ ಪ್ರಸ್ತಾಪ ಮಾಡಿದೆವು. ಕಾನೂನು ಹೇಳಿಕೊಂಡು ಕುಳಿತಿದ್ದಾರೆ. ಕಾನೂನಿನಲ್ಲಿ ಅವಕಾಶ ಇಲ್ಲ. ಒಂದು ಎಕರೆಗೆ ಐದು ನೂರು ರೂಪಾಯಿಗೆ ಅವಕಾಶ ಇದೆ ಎಂದು ಸನ್ಮಾನ್ಯ ಹಿಂದಿನ ಕಂದಾಯ ಸಚಿವರು ಹೇಳಿದರು. ಕನಿಷ್ಟ ಅದನ್ನಾದರೂ ಇದುವರೆಗೂ ಒಂದೂವರೆ ವರ್ಷ ಆಯಿತು, ಕೊಡಲಿಲ್ಲ. ಕಡಲೆಕಾಯಿ ಬೆಳೆ ನಾಶವಾಗಿರುವುದು ಸನ್ಮಾನ್ಯ ಬೈರೇಗೌಡರಿಗೆ ಗೊತ್ತಿದೆ. ನಮ್ಮ ಜಿಲ್ಲೆಯ ವಿಚಾರ ಅವರಿಗೆ ಗೊತ್ತಿದೆ. ಏನೂ ಕೊಡಲಿಲ್ಲ. ಬೀದರ್ ಜಿಲ್ಲೆಯಲ್ಲಿ ರೈತರು ಸತ್ತರು. ವಿಚಾರಿಸಲಿಲ್ಲ. ಇದು ಇವರ ಕೃಷಿ ನೀತಿ. ಏನು ಕೃಷಿ ನೀತಿ ಎಂದು ಹೇಳಿದರೆ ರೈತರು ಸತ್ತರೂ ವಿಚಾರಿಸಬಾರದು ಎಂದು ಹೇಳಿ ಇವರ ಕೃಷಿ ನೀತಿ. ರೈತರ ಬೆಳೆ ನಾಶವಾದರೆ ಅವರಿಗೆ ಯಾವುದೇ ರಕ್ಷಣೆ ಇಲ್ಲ, ಪರಿಹಾರ ಇಲ್ಲ, ಇದು ಇವರ ಕೃಷಿ ನೀತಿ. ಬರಗಾಲ ಬಂತು, ಅತಿವೃಷ್ಟಿ ಆಯಿತು, ಅನಾವೃಷ್ಟಿ ಆಯಿತು. ರೈತರಿಗೆ ಪರಿಹಾರ ಇಲ್ಲ. ಇದು ಕೃಷಿ ನೀತಿ. ಈ ಕೃಷಿ ನೀತಿಯನ್ನೇ ಇವರು ಕರೆಯತಕ್ಕದ್ದು ಹೊಸ ಕೃಷಿ ನೀತಿ ಎಂದು. ಸನ್ಮಾನ್ಯ ಕೃಷಿ ಸಚಿವರು ಒಂದು ವರ್ಷದ ಹಿಂದೆ ಗುಲ್ಬರ್ಗಾಕ್ಕೆ ಹೋದರು. ಎಲ್ಲಾ ಅಂಗಡಿಗಳ ಬೀಗ ಹಾಕಿಸಿದರು. ಪ್ರತಿಭಟನೆಯನ್ನು ಕೃಷಿ ಸಚಿವರ ವಿರುದ್ಧವಾಗಿ ಮಾಡಿದರು. ಏಕೆಂದರೆ ಹೇಳಿದರೆ ಕಲಬೆರಕೆ ಪೆಸ್ಟಿಸೈಡ್ಸ್ ಸಪ್ಲೈ ಮಾಡಿದಂತಹ ಅಂಗಡಿಗಳ ಬಗ್ಗೆ ಕ್ರಮ ತೆಗೆದುಕೊಂಡರು ಎಂದು ಹೇಳಿ ಪ್ರತಿಭಟನೆ ಮಾಡಿದರು. ಅವರು ಪ್ರತಿಭಟನೆ ಮಾಡಿದ ತಕ್ಷಣ ಇಡೀ ರಾಜ್ಯದಲ್ಲಿ ಯಾರು ಇವತ್ತು ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ,

ಆ ಕಳಪೆ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ, ಕಳಪೆ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇವತ್ತು ಬೀದರ್ ಜಿಲ್ಲೆಯಲ್ಲಿ ಪೆಸ್ಟಿಸೈಡ್ಸ್‌ನ್ನು ಉಪಯೋಗಿಸಿ ಅದು ನಿಷ್ಪ್ರಯೋಜಕವಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಪೆಸ್ಟಿಸೈಡ್ಸ್ ಉಪಯೋಗಿಸಿ ಅದು ನಿಷ್ಪ್ರಯೋಜಕವಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆದರೆ ಸರ್ಕಾರ ಇದರ ಬಗ್ಗೆ ಗಮನ ಹರಿಸುವುದಿಲ್ಲ. ಇವತ್ತು ಔಷಧಿಗಳನ್ನು ತಯಾರು ಮಾಡತಕ್ಕ ಕಂಪನಿಗಳ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಮಾನ್ಯ ಬೈರೇಗೌಡರಿಗೆ ಗೊತ್ತಿದೆ ಒಂದು ಉದಾಹರಣೆ ಹೇಳುತ್ತೇನೆ. ಕುರಿಗಳಿಗೆ ಔಷಧಿ ಸಪ್ಲೈ ಮಾಡಿದರು. ಕುರಿ ಅಭಿವೃದ್ಧಿ ನಿಗಮ ಕರ್ನಾಟಕ ರಾಜ್ಯದಲ್ಲಿದೆ. ಆ ಕುರಿಗೆ ಒಂದು ಖಾಯಿಲೆ ಬಂತು. ಔಷಧಿ ಸಪ್ಲೈ ಮಾಡಿದರೆ ಅದರಿಂದ ಏನೂ ಪರಿಣಾಮ ಬೀಳದೇ ಆ ಕುರಿ ಸತ್ತು ಹೋಯಿತು. ಆ ರೈತ ತೆಗೆದುಕೊಂಡು ಹೋಗಿ ಪೋಸ್ಟ್ ಮಾರ್ಟ್‌ಮ್ ಮಾಡಿ ಲ್ಯಾಬರ್‌ಟರಿಯಲ್ಲಿ ಅದನ್ನು ಚೆಕ್ ಮಾಡಿಸಿದ. ಅವರು ಲ್ಯಾಬರಟರಿಯಲ್ಲಿ ಹೇಳಿದರು. ವೆಟರಿನರಿ ಇನ್ಸ್‌ಸ್ಟಿಟ್ಯೂಟ್‌ನಲ್ಲಿ ಹೇಳಿದರು ಈ ಔಷಧಿ ಏನೂ ಪರಿಣಾಮ ಆಗಿಲ್ಲ ಎಂದು ಇದುವರೆಗೂ ಯಾರ ಮೇಲೂ ಕ್ರಮ ಇಲ್ಲ. ಅಂದರೆ ಸತ್ತು ಹೋಗಿದ್ದರೆ ಅದರ ಬಗ್ಗೆ ಏನೂ ಕ್ರಮ ಇಲ್ಲ ಇವತ್ತು. ಅಂದರೆ ಅಧಿಕಾರಿಗಳು ಇವತ್ತು ಯಾವ ಸ್ಥಿತಿಗೆ ತಲುಪಿದ್ದಾರೆ ಎಂದರೆ ನಾವು ಏನು ಮಾಡಿದರೂ ಈ ರಾಜ್ಯದಲ್ಲಿ ನಡೆಯುತ್ತದೆ. ನಮ್ಮನ್ನು ಏನೂ ಮಾಡಲಿಕ್ಕೆ ಸಾಧ್ಯ ಇಲ್ಲ ಎನ್ನತಕ್ಕ ಸ್ಥಿತಿಗೆ ತಲುಪಿದ್ದಾರೆ. ಏಕೆಂದರೆ ಆಡಳಿತದಲ್ಲಿ ಬಿಗಿ ಇಲ್ಲ. ಅಧಿಕಾರಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಾ ಇಲ್ಲ. ಹಾಗಾಗಿ ಇವತ್ತು ಬೀದರ್ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಈ ದುರಂತ ಘಟನೆಗೆ ಸರ್ಕಾರ ಹೊಣೆ ಹೊರಬೇಕಾಗುತ್ತದೆ. ಸರ್ಕಾರ ಕರ್ನಾಟಕದ ಜನತೆಗೆ ಜವಾಬನ್ನು ಹೇಳಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 814 ಕೋಟಿ ರೂಪಾಯಿ ಬೆಳೆ ನಾಶವಾಗಿದೆ. ತೊಗರಿ, ಎಳ್ಳು, ಸಜ್ಜು ಇವೆಲ್ಲವೂ ಸೇರಿ. ನಾನು ವಿವರವಾದ ಅಂಕಿ ಅಂಶಗಳನ್ನು ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ. ಅಂದರೆ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟಿಗೆ ಸರಿಸುಮಾರು 1000 ಕೋಟಿಯಷ್ಟು ಬೆಳೆ ನಾಶವಾಗಿದೆ. ರೈತರು ಇವತ್ತು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥಹ, ಧಾರುಣ ಸ್ಥಿತಿಗೆ ಬಂದಿದ್ದರೆ ನಾವೆಲ್ಲರೂ ತಲೆ ತಗ್ಗಿಸಬೇಕಾಗಿದೆ. ಈ ಸದನದಲ್ಲಿರತಕ್ಕ ಎಲ್ಲರೂ ತಲೆ ತಗ್ಗಿಸಬೇಕಾಗಿದೆ. ಅಂತಹ ದುರಂತವನ್ನು ತಡೆಗಟ್ಟಲಿಕ್ಕೆ ಸರ್ಕಾರ ವಿಫಲವಾಗಿದೆ. ಸರ್ಕಾರ ನೈತಿಕವಾದ ಹೊಣೆ ಹೊರಬೇಕಾಗುತ್ತದೆ. ಯಾವ ಅಧಿಕಾರಿ ತಪ್ಪು ಮಾಹಿತಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಕನಿಷ್ಟ ಹತ್ತು ಜನರು ಆತ್ಮಹತ್ಯೆ ಮಾಡಿಕೊಂಡಿರುವಂತಹ ವಿಚಾರ ಬಹಳ ಗಂಭೀರವಾದುದು ಮತ್ತು ಗಹನವಾದುದು. ಈ ಸುದ್ದಿ ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿ

ಬಂದ ನಂತರ, ನಿನ್ನೆ ರಾಜ್ಯಪಾಲರು ಭಾಷಣ ಮಾಡುವಾಗ ಇದರ ಬಗ್ಗೆ ಬೀದರ್ ಜಿಲ್ಲೆಯಲ್ಲಿ ಅನ್ಯಾಯ ನಡೆದಿದೆ ಎಂದು ಹೇಳಿದರು. ಅದಕ್ಕೋಸ್ಕರ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರತಿಭಟನೆಯನ್ನು ವಿರೋಧ ಪಕ್ಷದ ನಾಯಕರೂ ಮಾಡಿದರು, ಬೇರೆ ಬೇರೆ ಶಾಸಕರೂ ಮಾಡಿದರು. ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಮಾಡಿದರು.

ಉಪಾಧ್ಯಕ್ಷರು: ತಾವು ಪ್ರತಿಭಟನೆ ಮಾಡಿದಿರಿ.

ಶ್ರೀ ವಾಟಾಳ್ ನಾಗರಾಜ್: ನಾನೂ ಮಾಡಿದೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಜಾಗಟೆ ಬಾರಿಸಿದೆ. ಅದರ ಅರ್ಥ ಏನು? ಶಿವನಿಗೆ ಬಹಳ ಪ್ರಿಯವಾದುದು ಜಾಗಟೆ. ಆ ಜಾಗಟೆ ಬಡಿದರೆ ಅದು ಪ್ರಾರ್ಥನೆ ಇದ್ದಹಾಗೆ. ಅದು ವಿರೋಧ ಅಲ್ಲ. ಪ್ರಾರ್ಥನೆ ಎಂದರೆ ಏನು? ''ಓಂ ನಮಃ ಶಿವಾಯ'' ಎನ್ನುತ್ತದೆ ಅದನ್ನು ಬಡಿಯುತ್ತಿದ್ದರೆ. ಅಂದರೆ ಶಿವನಿಗೆ ಅರ್ಪಣೆ ಎಂದು ಹೇಳಿ. ಅದನ್ನು ಯಾರೂ ಅರ್ಥ ಮಾಡಿಕೊಳ್ಳಲಿಲ್ಲ. ಜಾಗಟೆ ಬಡಿದದ್ದು ಯಾರಿಗೋ ವಿರೋಧ ಎನ್ನುವ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲಾಯಿತು. ಮಾನ್ಯ ಪ್ರಕಾಶ್ ಅವರು ಸ್ವಲ್ಪ ಗಮನ ಕೊಡಬೇಕು. ನಿನ್ನೆ ನಾನಾ ರೀತಿಯಲ್ಲಿ ಪ್ರತಿಭಟನೆ ನಡೆಯಿತು. ವಿರೋಧ ಪಕ್ಷದ ನಾಯಕರು ಬೀದರ್ ಜಿಲ್ಲೆಯಲ್ಲಿ ನಡೆದಿರತಕ್ಕಂಥ ನೋವನ್ನು ಅವರು ಪ್ರದರ್ಶನ ಮಾಡಿದರು. ಖಂಡ್ರೆ ಮತ್ತು ಇತರೆ ಸ್ನೇಹಿತರೂ ಪ್ರತಿಭಟನೆ ಮಾಡಿದರು. ನಾನು ನನ್ನದೇ ಆದಂತಹ ವಿಧಾನದಲ್ಲಿ ಜಾಗಟೆಯನ್ನು ಬಡಿದೆ. ನಮ್ಮ ಬೇಡಿಕೆಯ ಬಗ್ಗೆ ಜಾಗಟೆ ಬಡಿದೆ. ಶಿವನಿಗೆ ಪ್ರಿಯವಾದುದು ಯಾವುದು? ಜಾಗಟೆ. ಆ ಜಾಗಟೆಯನ್ನು ಬಡಿದಾಗ ಓಂನಮಃ ಶಿವಾಯ ಎಂದು ಬರುತ್ತದೆ. ಅಂದರೆ ಶಿವನ ಒಂದ ಪ್ರೀತಿಗೋಸ್ಕರವಾಗಿ ಒಲಿವಿಗೋಸ್ಕರವಾಗಿ ಹೊರತು ಅದನ್ನು ಯಾರನ್ನೂ ವಿರೋಧ ಮಾಡಬೇಕು ಅಥವಾ ಅಪಚಾರ ಮಾಡಬೇಕು ಎಂಬ ಉದ್ದೇಶವಲ್ಲ ಜಾಗಟೆ ಬಡಿದದ್ದು.

2.00 ಪಿ.ಎಂ.

ಆದರೆ ಈ ಸಂದರ್ಭದಲ್ಲಿ ನಾವು ಮಾಡಿದಂತಹ ಪ್ರತಿಭಟನೆಗಳು ವೈಯಕ್ತಿಕವಾಗಿ ರಾಜ್ಯಪಾಲರ ಮೇಲಾಗಲಿ, ಅವರ ವ್ಯಕ್ತಿತ್ವದ ಮೇಲಾಗಿಲ ಅಲ್ಲ. ನಮಗೆ ಅವರ ಬಗ್ಗೆ ಅಪಾರವಾದಂತಹ ಗೌರವವಿದೆ. ಇನ್ನೂ ಐದು ವರ್ಷ ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿರಲಿ ಎಂಬುದು ನಮ್ಮ ಆಸೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತು ಏನೋ ಶಿವನಿಗೆ ಪ್ರಿಯವಾದುದು ಜಾಗಟೆ ತಂದರು, ನಾಳೆ ಡಮರುಗ ತಂದರೆ ಬಹಳ ಕಷ್ಟವಾಗುತ್ತದೆ. ಅಂತೆಯೇ ವಿಷ್ಣುಗೆ ಪ್ರಿಯವಾದುದು ಶಂಖ, ಅದನ್ನು ತಂದರೆ ಕಷ್ಟವಾಗಬಹುದು.

ಶ್ರೀ ವಾಟಾಳ್ ನಾಗರಾಜ್: ದೇವರಲ್ಲಿ ಶಿವನಿಗೆ ಅಗ್ರಸ್ಥಾನ ಎಂದಾಗ,

ರಾಜ್ಯಪಾಲರು ಈ ದೇಶದ, ಈ ರಾಜ್ಯದ ಉನ್ನತ ಸ್ಥಾನವನ್ನು ಹೊಂದಿರುವಂತಹವರು. ನಾವು ಅವರ ಮುಂದೆ ನಮ್ಮ ಬೇಡಿಕೆಯನ್ನು ಹೇಳಿಕೊಳ್ಳುವಾಗ ಅವರು, ನಿಮ್ಮ ಬೇಡಿಕೆ ಏನು ಎಂದು ಕೇಳಿದ್ದರೆ ನಾವು ಹೇಳುತ್ತಿದ್ದೆವು. ಆದರೆ ಅವರು ಕೇಳುವ ಮಟ್ಟದಲ್ಲಿ ಇರಲಿಲ್ಲ. ನಾನು ಅವರ ಬಗ್ಗೆ ಚಕಾರ ಎತ್ತುವುದಿಲ್ಲ. ಆದರೆ ನಿನ್ನೆ ನಡೆದಂತಹ ಈ ಒಂದು ಪ್ರಕರಣವನ್ನು ಏಷಿಯನ್ ಏಜ್ ಪತ್ರಿಕೆಯು ''ರೌಡಿ ಶಾಸಕರು ಅವರ ಭಾಷಣವನ್ನು ತಡೆದರು'' ಎಂದು ವರದಿ ಮಾಡಿದೆ. ನಾನು ಆ ವರದಿಯನ್ನು ಓದಿದೆ. ಈ ಪ್ರತಿಭಟನೆಯನ್ನು ಮಾಡಿದಂತವರು, ನಾನು, ಶ್ರೀಮಾನ್ ಮಲ್ಲಿಕಾರ್ಜುನನ ಖರ್ಗೆ,, ಮತ್ತು ಮಾನ್ಯ ಅನೇಕ ಸದಸ್ಯರು. ನನಗೆ ತಿಳಿದ ಮಟ್ಟಿಗೆ ನಾವು ಯಾವತ್ತೂ ರೌಡಿ ಕೆಲಸ ಮಾಡಿಲ್ಲ. ನಿನ್ನೆ ನಾನು ರೌಡಿ ಕೆಲಸ ಮಾಡಲಿಲ್ಲ. ಇದರ ಬಗ್ಗೆ ಏಷಿಯನ್ ಏಜ್ ಎಂಬ ಆಂಗ್ಲ ಪತ್ರಿಕೆ ಅವರಿಗೆ ನಮ್ಮ ಪ್ರತಿಭಟನೆ ಅವರಿಗೆ ಅರ್ಥ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆ ರೀತಿ ವರದಿ ಮಾಡಿರುವಂತಹವರು ಕರ್ನಾಟಕದವರೋ ಅಥವಾ ಇತಿಹಾಸ ಗೊತ್ತಿಲ್ಲದೆ ಇರತಕ್ಕಂತವರೋ ನನಗಂತೂ ಗೊತ್ತಿಲ್ಲ. ಆದಕಾರಣ ಈ ವಿಷಯದ ಬಗ್ಗೆ ಅಧ್ಯಕ್ಷರ ಜೊತೆ ಮಾತನಾಡಿ, ಇಲ್ಲಿ ರೌಡಿ ಅನ್ನುವ ಪದ ಅವರು ಏನು ಉಪಯೋಗಿಸಿದ್ದಾರೆ ಅದರ ಮೇಲೆ ಹಕ್ಕುಚ್ಯುತಿ ತರುವುದು ನಮ್ಮ ಸ್ಪಷ್ಟವಾದ ಅಭಿಪ್ರಾಯ ಇದೆ. ಪತ್ರಿಕೆ ಬಗ್ಗೆಯಾಗಲಿ, ಅಥವಾ ಪತ್ರಕರ್ತರ ಬಗ್ಗೆಯಾಗಲಿ ನನಗೆ ಗೌರವ ಇಲ್ಲವೆಂದಲ್ಲ. ಅವರು ಬರೆಯುವಾಗ ರೌಡಿ ಎಂಬ ಪದವನ್ನು ಉಪಯೋಗಿಸಿದ್ದಾರೆ. ನಾವು ಯಾರೂ ರೌಡಿಗಳು ಅಲ್ಲ. ಪ್ರಾಮಾಣಿಕವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಾನು 1967ರಿಂದ ಶಾಸನ ಸಭೆಯಲ್ಲಿ ಇದ್ದೇನೆ. ಶ್ರೀಮಾನ್ ಖರ್ಗೆಯವರು ಸುಮಾರು 25 ವರ್ಷದಿಂದ ಇದ್ದಾರೆ. ಆದಕಾರಣ ಈ ಪದವನ್ನು ಏಕೆ ಉಪಯೋಗಿಸಿದರು ಗೊತ್ತಿಲ್ಲ. ದಯಮಾಡಿ ಈ ಸಭೆಯಲ್ಲಿ ಇದರ ಬಗ್ಗೆ ಸಮಗ್ರವಾದ ಚರ್ಚೆ ಆಗಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಮ್ಮ ಪ್ರತಿಭಟನೆ ನಾನಾ ರೀತಿಯಲ್ಲಿ ಇರುತ್ತದೆ, ಅದು ನಮ್ಮ ಹಕ್ಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ರೀತಿ ತಿರುಚಿ, ರೌಡಿಗಳು ಅನ್ನುವ ಭಾಷೆಯನ್ನು ಉಪಯೋಗಿಸಿ ವರದಿ ಮಾಡಿರುವುದು ನಿಜವಾಗಿಯೂ ಅಕ್ಷಮ್ಯ ಅಪರಾಧವಾಗುತ್ತದೆ. ಇದರಿಂದ ನಮಗೆ ಅತ್ಯಂತ ದುಃಖವಾಗಿದೆ.

ಉಪಾಧ್ಯಕ್ಷರು: ತೊಗರಿ ಬೆಳೆ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ತಮಗೆ ಆ ಮಾತನ್ನು ತಿಳಿಸಿ, ನಾಳೆ ಹಕ್ಕುಚ್ಯುತಿ ತರುವುದಕ್ಕೆ ಮಾನ್ಯ ಅಧ್ಯಕ್ಷರ ಜೊತೆಯಲ್ಲಿ ಮಾತನಾಡುತ್ತೇನೆ. ಬೀದರ್ ಜಿಲ್ಲೆಯಲ್ಲಿ ನಡೆದಿರತಕ್ಕಂತಹದ್ದು ಒಂದು ಅಸಾಧಾರಣವಾದಂತಹ ಮತ್ತು ನಿಜವಾಗಿಯೂ ನಂಬಲಾರದಂತಹ ವಿಷಯ. ಹಿಂದಿನ ದಿವಸದಲ್ಲಿ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಇತ್ತು ಎಂಬುದಾಗಲಿ, ಅಥವಾ ಇತಿಹಾಸದಲ್ಲಿ ನಡೆದಿರುವಂತಹ ಪ್ರಕರಣವಾಗಲಿ ನಾನು ಕೇಳಿರಲಿಲ್ಲ. ನನ್ನ ದೃಷ್ಟಿಯಲ್ಲಿ ರೈತ ಆತ್ಮಹತ್ಯೆ ಮಾಡಿಕೊಳ್ಳುವ

ಮಟ್ಟಿಗೆ ಹೋಗಬೇಕಾದ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗಿದೆ, ಆದಕಾರಣ ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕು. ಬಹಳ ಉನ್ನತ ಮಟ್ಟದ ತನಿಖೆ ಆಗಬೇಕು. ಆತ್ಮಹತ್ಯೆ ಮಾಡಿಕೊಂಡವರು ಸುಮಾರು 10 ಜನ ಎಂದು ಹೇಳಿದ್ದಾರೆ. ಆ ಹತ್ತು ಜನ ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ ಅವರ ನೋವು ಎಷ್ಟಿತ್ತೆಂದು ತಿಳಿದುಬರುತ್ತದೆ. ತಡೆಯಲಾರದಂತಹ ನೋವು ಬಂದರೆ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯ? ಇಂತಹ ಪರಿಸ್ಥಿತಿ ಯಾರ ಕಾಲದಲ್ಲಿ? ಶ್ರೀಮಾನ್ ಬೈರೇಗೌಡರು, ಕೃಷಿ ಸಚಿವರು, ಒಬ್ಬ ಅತ್ಯಂತ ದಕ್ಷ, ಪ್ರಾಮಾಣಿಕವಾದ, ಮತ್ತು ಗಟ್ಟಿಗ ಆದಂತಹ ವ್ಯಕ್ತಿ. ನನಗೆ ಅವರ ಬಗ್ಗೆ ಬಹಳ ಗೌರವವಿದೆ. ಶ್ರೀ ಬೈರೇಗೌಡರು ಕೃಷಿ ಸಚಿವರಾದ ಮೇಲೆ ಇಲಾಖೆಗೆ ಒಂದು ಕಾಯಕಲ್ಪ ಮಾಡಿ ರೈತರಿಗೆ ವಿಧಾನ ಸೌಧದ ಮುಂದೆ ಅವರಿಗೆ ದೊಡ್ಡ ಗೌರವ ಮಾಡಿ, ವಿದೇಶಗಳಿಗೆ ಕಳುಹಿಸತಕ್ಕಂತಹ ವ್ಯವಸ್ಥೆ ಮಾಡಿದಂತಹ ಕೀರ್ತಿ ನಿಮಗೆ ಬರುತ್ತದೆ. ಆದರೆ ಆತ್ಮಹತ್ಯೆ ಇದೆಲ್ಲವನ್ನೂ ಅಳಿಸಿಹಾಕಿ ಹೊಸ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದೆ. ಇದರ ಬಗ್ಗೆ ನೀವು ಪ್ರಾಮಾಣಿಕವಾಗಿ ಮುಚ್ಚು ಮರೆ ಇಲ್ಲದೆ ಉತ್ತರ ಕೊಡುವಾಗ ಸ್ಪಷ್ಟಪಡಿಸಬೇಕು. ಅದರಲ್ಲಿ ಅಧಿಕಾರಿಗಳ ತಪ್ಪಾಗಿದೆಯೇ, ಯಾರ ತಪ್ಪಾಗಿದೆ ಏನಾಗಿದೆ, ಇದರ ಬಗ್ಗೆ ಸರ್ಕಾರ ಏನು ನಿಲುವನ್ನು ಕೈಗೊಳ್ಳುತ್ತದೆ ಎಂದು ಪ್ರಾಮಾಣಿಕವಾಗಿ ಹೇಳಬೇಕು. ಹಾಗೆಯೇ ಬೆಳೆ ನಾಶವಾಗಿರುವ ಪ್ರತಿ ಎಕರೆಗೆ ಕನಿಷ್ಠ ಮೂರು ಸಾವಿರ ರೂಪಾಯಿಯಂತೆ ಪರಿಹಾರವನ್ನು ಕೊಡಬೇಕು. ಸತ್ತವರಿಗೆ ನಾವು ಒಂದು ಲಕ್ಷ ರೂಪಾಯಿ ಕೊಡುವುದು ಎಂದು ಇದೆ. ಸತ್ತವನಿಗೆ ಒಂದು ಲಕ್ಷ ರೂಪಾಯಿ ಬೆಲೆ ಅಲ್ಲ. ಒಂದು ಲಕ್ಷ ರೂಪಾಯಿಗೆ ಒಬ್ಬ ವ್ಯಕ್ತಿಯ ಬೆಲೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆತ್ಮಹತ್ಯೆ ಮಾಡಿಕೊಂಡು ಸಾಯಬೇಕಾದರೆ ಅವರಿಗೆ ಲಕ್ಷ ರೂಪಾಯಿ ಬೆಲೆ ಅಲ್ಲ. ಅದಕ್ಕೆ ಬೆಲೆಯನ್ನೇ ಕಟ್ಟಲಾರದಂತಹ ಅಪಾರವಾದಂತಹ ಸಾಹಸ ಇದೆ. ಆದುದರಿಂದ ನಾನು ತಮಗೆ ಹೇಳುತ್ತಿದ್ದೇನೆ ಅವರನ್ನೇ ನಂಬಿದಂತಹ ಸಂಸಾರಗಳಿಗೆ ಕೂಡಲೇ ತಾವು ಯಾವ ರೀತಿ ಉಪಕಾರ ಮಾಡಬಹುದು ಅದನ್ನು ಮಾಡಬೇಕು ಎಂದು ಅತ್ಯಂತ ಪ್ರಾಮಾಣಿಕವಾಗಿ ಕೇಳಿಕೊಳ್ಳುತ್ತೇನೆ, ಮತ್ತು ಕಾರಂಜ ಮತ್ತು ಚುಳ್ಕಿ ನಾಲೆಗಳಿಗೆ ಸ್ವಾಧೀನ ಪಡಿಸಿಕೊಂಡ ಭೂಮಿ ಏನಿದೆ, ಆ ಭೂಮಿಯನ್ನು ಬಿಡಿಸಿಕೊಂಡಿರುವಂತಹ ರೈತರಿಗೆ ಇದೂವರೆವಿಗೂ ಪರಿಹಾರ ಕೊಟ್ಟಿಲ್ಲ, ಅವರು ಪರಿಹಾರಕ್ಕಾಗಿ ಕಾಡಿದ್ದಾರೆ, ಬೇಡಿದ್ದಾರೆ. ಆದರೂ ಇದೂವರೆವಿಗೂ ಅವರಿಗೆ ಪರಿಹಾರ ಸಿಗದೆ ಇರತಕ್ಕಂತದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೆ ತಾವು ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಈಗ ತಾವು ಮಾಡಬೇಕಾದುದು ಸಹಕಾರ ಸಂಘ ಸಂಸ್ಥೆಗಳಿಂದ ಬ್ಯಾಂಕುಗಳಿಂದ ರೈತರು ಪಡೆದಿರುವಂತಹ ಸಾಲವನ್ನು ರೈತರಿಂದ ವಸೂಲಿ ಮಾಡತಕ್ಕಂತದ್ದನ್ನು ಕನಿಷ್ಠ ಎರಡು ವರ್ಷಗಳ ಕಾಲ ತಾವು ತಡೆ ಹಿಡಿಯಬೇಕು. ಬಾಕಿ ಬಿಲ್ಲನ್ನು ವಸೂಲು ಮಾಡುವಂತಹದ್ದನ್ನು ತಾವು ಕೂಡಲೇ ತಡೆ ಹಿಡಿಯಬೇಕು. ರೈತ ಕಾರ್ಮಿಕರಿಗೆಲ್ಲರಿಗೂ ಕಾಮಗಾರಿ ಕೆಲಸವನ್ನು ರೂಪಿಸುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು. ಈ ಪ್ರದೇಶದಲ್ಲಿ ಬರಗಾಲ ಹೊಸದಾಗಿ ಬಂದಿರುವಂತಹದ್ದಲ್ಲ, ಒಂದು

ರೀತಿ ಇದು ಶಾಶ್ವತವಾಗಿ ಬಂದಿರುವಂತಹದ್ದು. ಏಕೆಂದರ ಪ್ರತೀ ವರ್ಷ ಬರಗಾಲ ಬರುತ್ತದೆ. ಈ ರೀತಿ ಬರಗಾಲ ಇರುವುದರಿಂದ ಶಾಶ್ವತವಾದಂತಹ ಪರಿಹಾರಕ್ಕೆ ಈ ಪ್ರದೇಶದಲ್ಲಿ ಒಂದು ಹೊಸ ಯೋಜನೆಯನ್ನು ತಾವು ತಯಾರು ಮಾಡಬೇಕೆಂದು ಹೇಳಿ, ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಇವತ್ತಿನ ದಿವಸ ಬ್ಯಾಂಕುಗಳಲ್ಲಿ ಕೋಟಿ ಕೋಟಿ ಹಣವನ್ನು ಲೂಟಿ ಮಾಡಿ ಕೆಲವರು ದೊಡ್ಡವರಾಗಿದ್ದಾರೆ ಅದು ತಮಗೂ ತಿಳಿದಿದೆ. ಕಾರ್ಖಾನೆ ಮುಚ್ಚಿ, ಮತ್ತೊಂದು ಕಾರ್ಖಾನೆ ತೆಗೆದು ಅದನ್ನು ರೋಗಗ್ರಸ್ತ ಕಾರ್ಖಾನೆ ಮಾಡಿರತಕ್ಕಂತವರು ಚನ್ನಾಗಿದ್ದಾರೆ. ಅನೇಕರು ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿ ಸಾಲ ಮಾಡಿ ಚನ್ನಾಗಿದ್ದಾರೆ. ಆದರೆ ರೈತರ ಪರಿಸ್ಥಿತಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂತಹ ಸ್ಥಿತಿಗೆ ಹೋಗಿರಬೇಕಾದರೆ, ಅದು ಎಷ್ಟು ಎತ್ತರವಾಗಿ ಬೆಳೆದಿದೆ, ಅವರ ನೋವು ಏನಿದೆ ಎನ್ನುವುದನ್ನು ಅರಿವು ಮಾಡಿಕೊಂಡು ಅದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಪವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ಬಹಳ ಗಂಭೀರವಾದಂತಹ ವಿಷಯ ನಮ್ಮ ಮುಂದೆ ಇದೆ. ಮಾನ್ಯ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಒಂದು ಮಾತು ಹೇಳಿದರು, ''ಇಸ್ ದೇಶ್‌ಕೆ ದೋ ಆಂಖೆ, ಏಕ್ ಜವಾನ್, ಏಕ್ ಕಿಸಾನ್'' ಈಗ ಆ ಫಲಕವನ್ನು ಬದಲಾವಣೆ ಮಾಡಬೇಕಾಗಿದೆ, ''ಯಹ ದೇಶ್ ಕಾ ದೋ ಆಂಖೇಮೆ ಏಕ್ ಜವಾನ್'' ಮರ್‌ಗಯಾ ಕಿಸಾನ್'' ಎಂದು ಬದಲಾಯಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್: ಕನ್ನಡದಲ್ಲಿ ಮಾತನಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಾನು ಹಿಂದಿಯನ್ನು ಸ್ವಲ್ಪ ಪ್ರಾಕ್ಟೀಸ್ ಮಾಡುತ್ತಿದ್ದೇನೆ. ಏಕೆಂದರೆ, ಅಕಸ್ಮಾತ್ ಯಾವಾಗಲಾದರೂ ಪ್ರಧಾನ ಮಂತ್ರಿ ಆದರೆ, ನೀವು ಮುಖ್ಯ ಮಂತ್ರಿ ಆಗಬೇಕು ಎಂದು ಇದ್ದೀರಿ, ನಾನು ಪ್ರಧಾನ ಮಂತ್ರಿ ಆಗಬೇಕು ಎಂದು ಇದ್ದೇನೆ, ಆದಕಾರಣ ಈಗಿನಿಂದಲೇ ಸ್ವಲ್ಪ ಸ್ವಲ್ಪ ಹಿಂದಿಯನ್ನು ಪ್ರಾಕ್ಟೀಸ್ ಮಾಡುತ್ತಿದ್ದೇನೆ. ಒಂದು ಅತೀವೃಷ್ಟಿ, ಒಂದು ಅನಾವೃಷ್ಠಿ ಇದರ ಮಧ್ಯ ಬರಗಾಲ ಬಂದರೆ ಯಾವುದೇ ಹಣವನ್ನು ನಾವು ಭೂಮಿ ಮೇಲೆ ಬಂಡವಾಳ ಹಾಕುವುದಿಲ್ಲ. ಸಾಲದ ರೂಪದಲ್ಲಿ ಬಂಡವಾಳದ ಜೊತೆಗೆ ನಮ್ಮ ವೈಯಕ್ತಿಕ ಬಂಡವಾಳ ಹಾಕಿ ಬೆಳೆಯನ್ನು ಮಾಡುತ್ತೇವೆ, ಆದರಿಂದ ಪೂರ್ಣ ನಷ್ಟವಾಗುತ್ತದೆ. ಖಾಯಂ ಬರಗಾಲ ಆದರೆ ಏನೂ ಇನ್‌ವೆಸ್ಟ್ ಮಾಡದೆ ನಷ್ಟವನ್ನು ಅನುಭವಿಸುತ್ತೇವೆ. ಆದುದರಿಂದ ಅತೀವೃಷ್ಟಿಯಿಂದ ಆಗತಕ್ಕಂತಹ ಅಪಾಯ ಹೆಚ್ಚು. ಇದಕ್ಕೆ ವಿಶೇಷವಾಗಿ ಸರ್ಕಾರ ನಿಯಮವನ್ನು ಮಾಡಬೇಕು. ಸುಮ್ಮನೆ ತಾತ್ಕಾಲಿಕವಾಗಿ ಯಾವುದೋ ಒಂದು ಪರಿಹಾರ ಕೊಡುವುದಾಗಲಿ, ಒಂದು ಹತ್ತು ಜನ ರೈತರಿಗೆ ಒಂದೊಂದು ಲಕ್ಷ ರೂಪಾಯಿ ಕೊಡುವುದಾಗಲಿ, ಇದು ಸರಿಯಾದಂತಹ ವ್ಯವಸ್ಥೆ ಅಲ್ಲ. ಇಡೀ ರಾಜ್ಯದ ಒಟ್ಟಾರೆ ರೈತರ

ಬಗ್ಗೆ ಚಿಂತನೆ ಮಾಡದೆ ಒಟ್ಟಾರೆ ಪ್ರಕೃತಿ ವಿಕೋಪಕ್ಕೆ ಸಿಕ್ಕು ನಷ್ಟವನ್ನು ಅನುಭವಿಸತಕ್ಕಂತಹ ರೈತರಿಗೆ ತಾವು ಒಂದು ನಿಯಮವನ್ನು ಸೃಷ್ಟಿ ಮಾಡಬೇಕು. ತಾವು ಮಂಡ್ಯದಲ್ಲಿ ಸಮೀಕ್ಷೆ ಮಾಡಿ, ಮಂಡ್ಯದಲ್ಲಿ ಇರತಕ್ಕಂತಹ ರೈತರಿಗೆ ಭತ್ತದ ಬೆಳೆಯಿಂದ ನಷ್ಟ ಆಗಿರುವುದು 12 ಕೋಟಿ ರೂಪಾಯಿಗಳು ಎಂದು ತಾವು ಹೇಳಿದ್ದೀರಿ, ಆದರೆ ಬೆಳೆ ನಷ್ಟದ ಬಗ್ಗೆ ಏನೂ ಚಿಂತನೆ ಮಾಡಿಲ್ಲ. ಜೊತೆಗೆ ಕೇಂದ್ರಸರ್ಕಾರ ಪ್ರಕೃತಿ ವಿಕೋಪಕ್ಕೆ ಸಿಕ್ಕಿ, ನಷ್ಟವನ್ನು ಅನುಭವಿಸತಕ್ಕಂತಹ ರೈತರಿಗೆ, ಅದು ತೊಗರಿ ಆಗಿರಬಹುದು, ಭತ್ತ ಆಗಿರಬಹುದು, ಹೆಕ್ಟೇರಿಗೆ ಐದು ನೂರು ರೂಪಾಯಿ ಪರಿಹಾರವನ್ನು ಕೊಡುತ್ತಾರೆ. ಏಕೆಂದರೆ ಕೃಷಿ ಅಧಿಕಾರಿಗಳು ಅತ್ಯಂತ ಗಂಭೀರವಾಗಿ ಕೆಲಸ ಮಾಡಬೇಕಾಗಿತ್ತು. ಕಳಪೆ ಕೀಟನಾಶಕವನ್ನು ಸಿಂಪಡಿಸತಕ್ಕಂತವರಿಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಕೃಷಿ ಅಧಿಕಾರಿಗಳು, ಜಿಲ್ಲಾ ಅಧಿಕಾರಿಗಳು ಕೇವಲ ಪುಸ್ತಕದವರು, ಅವರಿಗೆ ಪ್ರಾಕ್ಟಿಕಲ್ ಆಗಿ ಜೀವನದ ಅನುಭವ ಗೊತ್ತಿಲ್ಲ. ನೇಗಿಲು ಅಂದರೆ ಏನು, ನೊಗ ಅಂದರೇನು, ಪಿಕಾಸಿ ಅಂದರೇನು ಎಂಬುದು ಅವರಿಗೆ ಗೊತ್ತಿಲ್ಲ. ಏಕೆಂದರೆ ರೈತರಿಗೆ ರೋಗ ಹೊಡೆದಂತೆ ಆಗಿದೆ, ಅವರ ಸಂಬಳಕ್ಕೆ ರೋಗ ಹೊಡೆದಿದ್ದರೆ ಸರಿಯಾಗಿ ಗೊತ್ತಾಗುತ್ತಿತ್ತು ಸಂಬಳಕ್ಕೆ ರೋಗ ಹೊಡೆಯದೇ ಇರುವುದರಿಂದ ರೈತರ ರೋಗದ ವಿಷಯ ಅವರಿಗೆ ಗೊತ್ತಿಲ್ಲ. ಅವರು ಸಮರೋಪಾದಿಯಲ್ಲಿ ಕೆಲಸ ಮಾಡಬೆಕಾಗಿತ್ತು. ಯುನಿವರ್ಸಿಟಿಯ ಎಲ್ಲಾ ಅಧಿಕಾರಿಗಳು ತಕ್ಷಣ ಆ ಸ್ಥಳಕ್ಕೆ ಹೋಗಿ ಬಹಳ ಜವಾಬ್ದಾರಿಯುತವಾಗಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇವರು ಯಾವ ರೀತಿಯಾದಂತಹ ಕ್ರಮವನ್ನು ತೆಗೆದುಕೊಂಡಿಲ್ಲ, ಇದರಷ್ಟು ಬೇಜವಾಬ್ದಾರಿತನ ಯಾವುದೂ ಇಲ್ಲ. ಜೊತೆಗೆ ಹೈದರಬಾದ್ ಕರ್ನಾಟಕದಲ್ಲಿ ವಿಶೇಷವಾಗಿ ಬೀದರ್, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಖಾಯಂ ಬರಗಾಲ ಆಗಿರತಕ್ಕಂತಹ ಜಿಲ್ಲೆಗಳನ್ನು ಗುರುತಿಸಿ ಅದಕ್ಕೆ ವಿಶೇಷ ಅನುದಾನ ಕೊಡತಕ್ಕಂತಹ ವಿಶೇಷ ಸವಲತ್ತುಗಳನ್ನು ಸೃಷ್ಟಿ ಮಾಡತಕ್ಕಂತಹ ಕೆಲಸವನ್ನು ಮಾಡಬೇಕು. ಆದರೆ ಆ ಕೆಲಸ ಆಗಿಲ್ಲ. ಅದರ ಆದ್ಯತೆ ಮೇರೆಗೆ ಹಣಕಾಸನ್ನು ಜಾಸ್ತಿ ಒದಗಿಸಿ ಕೊಡಬೇಕು. ಅದರಲ್ಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್, ಜೊತೆಗೆ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಈ ಮೂರು ಡಿಪಾರ್ಟ್‌ಮೆಂಟ್‌ಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಇಲ್ಲದಿದ್ದರೆ ಏನೂ ಪ್ರಯೋಜನ ಆಗುವುದಿಲ್ಲ. ಸುಮ್ಮನೆ ನಾವೇನೋ ತಾತ್ಕಾಲಿಕವಾಗಿ ಒಂದು ಹತ್ತು ಜನರಿಗೆ ಪರಿಹಾರ ಕೊಡುವುದು ಸರಿ ಅಲ್ಲ. ಏಕೆಂದರೆ ರೈತರ ಬಗ್ಗೆ ನಿರ್ಲಕ್ಷ್ಯ ಮಾಡಿದರೆ ನಾವ್ಯಾರೂ ಉಳಿಯುವ ಹಾಗಿಲ್ಲ. ಉದಾಹರಣೆಗೆ ರಷ್ಯಾ, ಪ್ರಪಂಚವನ್ನು ಸುಡುವಷ್ಟು ಬಾಂಬ್ ಮೆಷಿನ್‌ಗನ್ ಇಟ್ಟುಕೊಂಡಿದ್ದಾರೆ. ಆದರೆ ಬ್ರೆಡಿಲ್ಲ. ಹೇಳುವುದಕ್ಕೆ ದುಃಖವಾಗುತ್ತದೆ, ಸತ್ಯ ಹೇಳಬೇಕಾದರೆ ಅವರ ಹೆಣ್ಣುಮಕ್ಕಳೆಲ್ಲಾ ಬಾಂಬೆ, ಕಲ್ಕತ್ತಾಗಳಲ್ಲಿ ವೇಶ್ಯಾವಾಟಿಕೆಯಿಂದ ಜೀವನ ಮಾಡುವಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಆದ್ದರಿಂದ ರೈತರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಇದು ಭೈರೇಗೌಡರ ಪ್ರಶ್ನೆ, ಅಥವಾ ತಾವು ಸರ್ಕಾರ ನಡೆಸುತ್ತಿದ್ದೀರಿ

ಎಂದು ಅಲ್ಲ. ಕೇಂದ್ರ ರಾಜ್ಯಸರ್ಕಾರಗಳು ಸೇರಿ ಇಡೀ ದೇಶವೇ ಒಂದು ಚಿಂತನೆ ಮಾಡದೇ ಇದ್ದರೆ ಖಾಯಂ ಆತ್ಮಹತ್ಯೆ ಆಗುವಂತಹ ವ್ಯವಹಾರವಾಗುತ್ತದೆ. ಇದು ಬಹಳ ಜವಾಬ್ದಾರಿ ಕೆಲಸ, ಇದನ್ನು ತ್ವರಿತವಾಗಿ ಮಾಡಬೇಕು. ಆಮೇಲೆ ವಿಮಾ ಯೋಜನೆ. ಏನೂ ಪ್ರಯೋಜನವಿಲ್ಲ. ವಿಮೆ ಯೋಜನೆ ಇಂಟರ್‌ಡ್ಯೂಸ್ ಮಾಡಿದ್ದೀರಿ, ಅದಕ್ಕೆ ರೈತರ ಸಾಲದ ಹಣದಲ್ಲಿ ನೂರಕ್ಕೆ 15 ಪರ್ಸೆಂಟ್ ಡಿಡಕ್ಟ್ ಮಾಡಿಕೊಂಡು ರೈತರು ಸಾಮೂಹಿಕವಾಗಿ ಬೆಳೆ ನಾಶವಾದರೆ ವಿಮೆ ಕೊಡುವುದು, ಒಬ್ಬ ರೈತನಿಗೆ ತನ್ನ ಬೆಳೆ ನಷ್ಟವಾದಾಗ ವಿಮೆ ಯೋಜನೆ ಏನಾದರೂ ಉಪಯೋಗ ಇದ್ದರೆ ಅದು ಪರವಾಗಿಲ್ಲ. ಒಂದು ಹೋಬಳಿ ಅಥವಾ ತಾಲ್ಲೂಕು ಸಾಮೂಹಿಕವಾಗಿ ನಾಶವಾದರೆ ವಿಮೆ ಯೋಜನೆ. ಅದೂ ವಿಮೆಯವರು ಮಾಡಿರತಕ್ಕ ಖರ್ಚನ್ನು ಕೊಡುತ್ತಾರೆ. ಆದ್ದರಿಂದ ವಿಮೆ ಯೋಜನೆ ಏನೂ ಪ್ರಯೋಜನ ಇಲ್ಲ. ಮಾನ್ಯ ಹಿರಯ ಸದಸ್ಯರೆಲ್ಲಾ ಮಾತನಾಡಿದರು. ವಿಶೇಷವಾಗಿ ರಿಸರ್ವ್‌ಬ್ಯಾಂಕಿನೊಂದಿಗೆ ಮಾತನಾಡಿ ಯಾವ್ಯಾವ ರೈತರು ನಷ್ಟ ಅನುಭವಿಸಿದ್ದಾರೆ ಅವರ ಸಾಲವನ್ನು ಮನ್ನಾ ಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು. ಆಮೇಲೆ ಕಳಪೆ ಕೀಟನಾಶಕ ತಯಾರಿಸಿದವರು. ಈಗೇನೋ ತಾತ್ಕಾಲಿಕವಾಗಿ ಮಾಡಿದ್ದಾರೆ. ಕಳಪೆ ಬಿತ್ತನೆಬೀಜ ಕೀಟನಾಶಕ ಮಾಡುವ ಮೂಲಕ ರೈತರ ನಾಶಮಾಡುವವರಿಗೆ ವಿಶೇಷ ಕಾನೂನು ಮಾಡಬೇಕು. ಅವರ ಮೇಲೇನೋ ತಾತ್ಕಾಲಿವಾಗಿ ಕ್ರಮ ತೆಗೆದುಕೊಳ್ಳುವುದಲ್ಲ. ಅವರನ್ನು ಹ್ಯಾಂಗ್ ಮಾಡುವಂತಹ ಕಾನೂನು ಮಾಡಬೇಕು. ಏಕೆಂದರೆ ಕಳಪೆ ಕೀಟನಾಶಕ ಬೀಜಗಳನ್ನು ಕೊಡುವವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೇ ಹೋದರೆ ಹೇಗೆ? ಉದಾಹರಣೆಗೆ ತಾವೇ ಪತ್ರಿಕೆಯಲ್ಲಿ ಹೇಳಿದ್ದೀರಿ: ಕಳಪೆ ಕೀಟನಾಶಕ ಕಂಪನಿಗಳ ವಿರುದ್ಧ ಕ್ರಮಕ್ಕೆ ನಿರ್ಧಾರ ಎಂದು. ಅದಕ್ಕೆ ವಿಶೇಷ ಕಾನೂನೇ ಮಾಡಬೇಕು. ಬರೀ ನಿರ್ಧಾರವಲ್ಲ. ಮುಖ್ಯಮಂತ್ರಿಗಳು ಹೇಳಿದ್ದಾರೆ: ಕಾಂಗ್ರೆಸ್ ಸರ್ಕಾರ 45 ವರ್ಷಗಳ ಕಾಲ ಈ ದೇಶ ಆಳಿ ಯಾವುದೇ ಕೃಷಿನೀತಿ ಮಾಡಿಲ್ಲ. ಇವರ ಒಂದು ತಪ್ಪು ನೀತಿಯಿಂದಾಗಿ ರೈತರು ನಾಶವಾಗಿದ್ದಾರೆ ಎಂದು. ನೀವೇನು ಮಾಡಿದ್ದೀರಿ? ಏನೂ ಮಾಡಿರಲಿಲ್ಲ ಅಂದರೆ ತಾವೇನಾದರೂ ಹೊಸದಾಗಿ ಮಾಡಬೇಕು. ಆಮೇಲೆ ಕೃಷಿ ಇಲಾಖೆ ಅಧಿಕಾರಿಗಳು ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ಉದಾಹರಣೆಗೆ ಯಾವುದೇ ಕೃಷಿ ಅಧಿಕಾರಿ ಫೀಲ್ಡ್‌ಸರ್ವೆ ಮಾಡಬೇಕು. ಆಫೀಸಿನಲ್ಲಿ ಫ್ಯಾನ್ ಹಾಕಿಕೊಂಡು ಕುಳಿತುಕೊಳ್ಳುವುದಲ್ಲ. ಕೃಷಿ ಅಂದರೆ ಬಯಲಲ್ಲಿರಬೇಕು. ಭೂಮಿಯಲ್ಲಿ ತಿರುಗಿ ರೈತರಿಗೆ ಸಲಹೆ ಕೊಡುವ ಮೂಲಕ ಅದರ ಉಪಯುಕ್ತತೆ ಅದರ ಬೆಳವಣಿಗೆ ಬಗ್ಗೆ ಬಹಳ ಗಂಭೀರವಾಗಿ ಕೆಲಸ ಮಾಡಬೇಕು. ಕಚೇರಿಯಲ್ಲಿ ಕುಳಿತು ಕೆಲಸ ಮಾಡಿಬಿಟ್ಟರೆ ಕೃಷಿ ಆಗುವುದಿಲ್ಲ ಅದು. ಆಮೇಲೆ ಮುಂದಿನ ಬೆಳೆ ಬೆಳೆಯುವ ಬಗ್ಗೆ, ಮುಂದಿನ ಬೆಳೆ ಬೆಳೆಯುವ ರೈತರಿಗೆ ಪುಗಸಟ್ಟೆ ಬೀಜ ಕೊಡಬೇಕು. ಪುಗಸಟ್ಟೆ ಗೊಬ್ಬರ ಕೊಡುವ ಮೂಲಕ ಅವರಿಗೆ ಅನುಕೂಲ ಮಾಡಿಕೊಡಬೇಕು. ಏಕೆ ಈ ಮಾತು ಹೇಳುತ್ತೇನೆಂದರೆ, ನಮ್ಮ ಬಂಡವಾಳವನ್ನು ಈ

ದೇಶದಲ್ಲಿ ಯಾವುದೇ ಆರ್ಥಿಕ ತಜ್ಞ ಬರೆದಿಲ್ಲ. ಕೈಗಾರಿಕಾ ಬಂಡವಾಳ ಬರೆದಿದ್ದಾರೆ, ರೈತರದ್ದು ಒಂದು ಬಂಡವಾಳವೂ ಬರೆದಿಲ್ಲ. ಬರೀ ದನಗಳಿಗೆ ಹಾಕಿರುವ ಬಂಡವಾಳ 20,000 ಕೋಟಿ ಅದನ್ನು ಮೇಯಿಸುವ ಖರ್ಚು ವರ್ಷಕ್ಕೆ 36,000 ಕೋಟಿ, ಬರೀ ಲಾಳ ಕಟ್ಟಿಸುವುದಕ್ಕೆ ಕೊಟ್ಟಿರುವುದು 20 ಸಾವಿರ ಕೋಟಿ. ಇದ್ಯಾವ ಬಂಡವಾಳವನ್ನೂ ಇಲ್ಲಿ ಬರೆದಿಲ್ಲ. ದೇಶದ ರಾಜ್ಯದ ಆರ್ಥಿಕ ರಾಜಕೀಯ ತಜ್ಞರೆಲ್ಲಾ ಸೇರಿ ಬಂಡವಾಳವನ್ನೇ ಬರೆಯಲಿಲ್ಲ ರೈತರದ್ದು. ನಮ್ಮ ರೈತರು ಬಂಡವಾಳವೇ ಇಲ್ಲವೇನೋ ಎಂದು ತಿಳಿದುಕೊಂಡುಬಿಟ್ಟಿದ್ದಾರೆ. ಈ ವಲಯದಲ್ಲಿ ವರ್ಷಕ್ಕೆ ನಾವು 80,000 ಕೋಟಿ ರೂ. ತೊಡಗಿಸುವುದು. ಆದ್ದರಿಂದ ಬಹಳ ಗಂಭೀರವಾಗಿ ಭೈರೇಗೌಡರು ಕೃಷಿ ಅಧಿಕಾರಿಗಳ ಮೇಲೆ ಬರೀ ಕ್ರಮ ತೆಗೆದುಕೊಳ್ಳುವುದಲ್ಲ, ಕ್ರಾಂತಿಯುತವಾದ ಮಹತ್ತರ ಬದಲಾವಣೆ ಮಾಡಿದಿರಿ, ಪರವಾಗಿಲ್ಲ, ಏಕೆಂದರೆ ಭೈರವೇಶ್ವರ ಅಂದರೆ ಬಹಳ ರುದ್ರಾವತಾರ ತಾಳುತ್ತಾನೆ, ಆದರೆ ಏಕೆ ಇಷ್ಟು ಶಾಂತಿ ಅವತಾರ ತಾಳಿದ್ದೀರಿ ಎಂಬುದು ನಮಗೆ ಗೊತ್ತಾಗುವುದಿಲ್ಲ, ಯಾಕೆ ಚುನಾವಣೇಲಿ ಸೋತು ಮಂಕಾಗಿಹೋದಿರಿ, ಸೋಲುಗೆಲುವು ಜೀವನದಲ್ಲಿ ಇರುತ್ತವೆ, ಇರುವ ತನಕ ಒಳ್ಳೆಯ ಕೆಲಸ ಮಾಡಿ, ಕ್ರಮ ತೆಗೆದುಕೊಳ್ಳಿ. ಸುಮ್ಮನೆ ಕೂತುಕೊಂಡರೆ ಆಗುವುದಿಲ್ಲ. ಆತ್ಮಹತ್ಯೆ ಶುರುವಾಗಿದೆ. ಇನ್ನು ಮುಂದೆ ಇದು ನಿರಂತರ ನಡೆಯುತ್ತಿರುತ್ತದೆ. ಮಂಡ್ಯದಲ್ಲೂ 6 ಎಕರೆ ಭತ್ತ ಬಡಿಯುತ್ತಿದ್ದ ಹಾಗೇನೇ ಒಬ್ಬ ರೈತ ನೇಣು ಹಾಕಿಕೊಂಡುಬಿಟ್ಟ. ಏಕೆಂದರೆ ಕೂಲಿ ಮಾಡುವವರಿಗೆ ಕೂಲಿ ಕೊಡುವುದಕ್ಕಾಗುವುದಿಲ್ಲ, ನನ್ನ ಮಾನ ಹೋಗುತ್ತದೆ ಎಂದು ಪತ್ರಿಕೆಯಲ್ಲಿ ಬಂದಿತ್ತು. ಈ ಸ್ಥಿತಿಗೆ ತಲುಪುತ್ತಾ ಇದೆ. ರೈತರ ಜೊತೆ ಹುಡುಗಾಟ ಆಡಿದರೆ ಈ ಸಂಸತ್ತು ವಿಧಾನಸಭೆ ಸರ್ಕಾರ ಅಧಿಕಾರಿಗಳು ಯಾರೂ ಬದುಕುವುದಕ್ಕೆ ಆಗುವುದಿಲ್ಲ., ನೇಗಿಲ ಮೇಲೇ ಈ ದೇಶ ಬದುಕಿರುವುದು. ಇಲ್ಲದಿದ್ದರೆ ಎಲ್ಲ ಅಲ್ಲಲ್ಲೇ ಸಾಯುವಂತಹ ಪರಿಸ್ಥಿತಿ ಸೃಷ್ಟಿಯಾಗುತ್ತದೆ. ಬಹಳ ಗಂಭೀರವಾಗಿ ಚಿಂತನೆ ಮಾಡಿ, ಬೀದರ್ ಮತ್ತು ಗುಲ್ಬರ್ಗಗಳಲ್ಲಿ ಕಾರ್ಯಕ್ರಮ ರೂಪಿಸಿಬೇಕು. ಮತ್ತು ಕೃಷಿ ಕಾರ್ಮಿಕರಿಗೆ ರೋಜಗಾರ್ ಯೋಜನೆ ಆಗಬಹುದು, ಉದ್ಯೋಗ ಭರವಸೆ ಯೋಜನೆ ಆಗಬಹುದು, ವಿಶೇಷ ಹಣವನ್ನು ಬಿಡುಗಡೆ ಮಾಡುವ ಮೂಲಕ ಕೃಷಿಕಾರ್ಮಿಕರ ಬಗ್ಗೆ ಚಿಂತನೆ ಮಾಡಬೇಕು ಮತ್ತು ಸಾವನ್ನು ಅನುಭವಿಸಿರುವ ರೈತರಿಗೆ ತಕ್ಷಣ ಪರಿಹಾರ ಕೊಡುವ ಮೂಲಕ ಆ ಎರಡು ಜಿಲ್ಲೆಗಳಲ್ಲಿ ಹೆಚ್ಚು ಕ್ರಾಯಕ್ರಮ ಹಾಕಿಕೊಳ್ಳಬೇಕೆಂದು ಅಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತಾ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ): ಅಧ್ಯಕ್ಷರೇ, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿ ಬೆಳೆ ನಾಶವಾದದ್ದರ ಬಗ್ಗೆ ಸವಿಸ್ತಾರವಾಗಿ ನಮ್ಮ ನಾಯಕರು ಹೇಳಿದ್ದಾರೆ. ನಾನೇನೂ ಹೆಚ್ಚಿಗೆ ಹೇಳಲಾರೆ, ಏಕೆಂದರೆ ತೊಗರಿಯಾಗಲೀ ಜೋಳ ಆಗಲಿ ಕುಸುಬಿ ಆಗಲಿ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವುದು ಅಂದರೆ ತೊಗರಿ ಬೆಳೆ. ಇದು ರೈತರ ಬೆನ್ನಲ್ಲೇ ಇದ್ದ ಬೆಳೆ ಆದರೆ ಇವತ್ತು ನೈಸರ್ಗಿಕ

ಎಂದು ನಾನು ಅನ್ನುವುದಿಲ್ಲ. ಏಕೆಂದರೆ ಕಳಪೆದರ್ಜೆ ಔಷಧದಿಂದ ತೊಗರಿ ಬೆಳೆ ಬೆಳೆಯಬೇಕಾದರೆ ಅದಕ್ಕೆ ಬಿತ್ತಲಿಕ್ಕೆ ಚೆನ್ನಾಗಿ ಬೀಜ ಸಿಕ್ಕಬೇಕು. ನಾವು ಮಾರುವಾಗ 12 ರೂ. ಕೆ.ಜಿ.ಗೆ ಸರ್ಕಾರ ಕೊಂಡುಕೊಳ್ಳುತ್ತದೆ ಅವರು ಕೊಡುವಾಗ 32 ರೂ.ಕೆ.ಜಿ ಹಾಗೆ ಕೊಡುತ್ತಿದ್ದಾರೆ. ಒಂದೆಕರೆಗೆ ಐದು ಕೆ.ಜಿ. ತೊಗರಿ ಬಿತ್ತಿದರೆ 160 ರೂ ಆಗುತ್ತದೆ, ಮೊದಲು ತೊಗರಿ ಉಳಿಸಿಕೊಳ್ಳಬೇಕಾದರೆ ಅದಕ್ಕೆ ನಾಲ್ಕು ಸಲ ಔಷಧ ಹೊಡೆಯಬೇಕಾಗುತ್ತದೆ. ಒಂದೆಕರೆಗೆ ಬೀಜ ಬಿತ್ತಲು 160 ಆದರೆ ಒಂದು ಚೀಲ ಗೊಬ್ಬರ ಸಾರಜನಕ, ಎಚ್ಇ- ಅದಕ್ಕೆ 415 ರೂ ಆಗುತ್ತದೆ ಅದರ ಜೊತೆಯಲ್ಲಿ ತೊಗರಿ ಬೆಳೆ ಹೂವ ಬಿಡಬೇಕಾದರೆ ಮಿಲಾತೀನ್ ಆಗಲಿ ಎಂಡೋಸಲ್ಫ್ ಆಗಲಿ ಹೊಡೆಯಬೇಕಾಗುತ್ತದೆ. ಆಗ ಅದು ಹೂವ ಬಿಡುವುದಕ್ಕೆ ಶುರು ಮಾಡುತ್ತದೆ. ಆಗ 220 ರೂ, ಅದಕ್ಕಿಂತ ಚಲೋ ಬೆಳೆಯಬೇಕಾದರೆ ಹೆಚ್ಚಿನ ಬೇರೆ ಔಷಧಿ ಉಪಯೋಗ ಮಾಡಬೇಕಾಗುತ್ತದೆ ಆದರೆ ಈ ವರ್ಷ ಏನಾಗಿದೆ ಅಂದರೆ ಹೂವ ಬಿಡುವಾಗ ಡೂಪ್ಲಿಕೇಟ್ ಔಷಧ ಉಪಯೋಗವಾಗಿದೆ. ನಾಲ್ಕೈದು ಸಲ ಉಪಯೋಗ ಮಾಡಿದರೂ ಕೂಡ ಉಪಯೋಗವಾಗಲಿಲ್ಲ. ಈ ಕಳಪೆ ಔಷಧದಿಂದಾನೇ ತೊಗರಿ ಬೆಳೆ ನಾಶವಾದದ್ದು ಎಂದು ಇಲ್ಲಿ ನಾನು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದೇನೆ. ಅಧ್ಯಕ್ಷರೇ, ಬಹಳ ದುಃಖದಿಂದ ನೊಂದು ಹೇಳುತ್ತಿದ್ದೇನೆ: ಆತ್ಮಹತ್ಯೆ ಮಾಡಿಕೊಳ್ಳಲು ಒಂದು ಕಾರಣವಿದೆ. ಹೋದ ಸಲ ಚೆನ್ನಾಗಿ ತೊಗರಿಬೆಳೆ ಬಂತು. ಅದಕ್ಕೆ ಬೆಂಬಲ ಧಾರಣೆ ಸಿಗಲಿಲ್ಲ. ಆಗಲೂ ಕೂಡ ರೈತರು ನೊಂದರು. ಈ ವರ್ಷ ಅನೇಕ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡಿದ್ದಾರೆ, ಔಷಧಿ ತೆಗೆದುಕೊಂಡಿದ್ದಾರೆ, ಆ ಮಾಲೀಕರು ಸಾಲಗಾರರ ಬೆನ್ನತ್ತಿದ್ದಾರೆ, ಯಾವರೀತಿ ನಾವು ಉಳಿದುಕೊಂಡು ಜೀವನಮಾಡಬೇಕೆಂದು ತಿಳಿಯದೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನೇಕರು ಸತ್ತಾಗ ಬಾಕಿ ಸಲುವಾಗಿ ಸತ್ತರು ಎಂದು ಅಂದುಕೊಳ್ಳಬಾರದು ಎಂದು ಮರ್ಯಾದೆಯನ್ನು ಮುಚ್ಚಿಕೊಳ್ಳಬೇಕೆಂದು ಹಾಗೆಯೇ ಮಣ್ಣು ಮಾಡಿದ್ದಾರೆ. ನನಗೆ ಗೊತ್ತಿದೆ ರೋಣ ಗ್ರಾಮದಲ್ಲಿ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚಿಗೆ ಏನೂ ಹೇಳಲಾರೆ, ರೈತರುಗಳು ತಳಮಳದ ಪರಿಸ್ಥಿತಿಯಿಂದ ಉಳಿದು ಗೌರವದಿಂದ ಬದುಕಬೇಕಾದರೆ ಸರ್ಕಾರ ಈ ದಿಸೆಯಲ್ಲಿ ಏನಾದರೂ ಪರಿಹಾರ ಕೊಟ್ಟರೆ ಮಾತ್ರ ಸಾಧ್ಯವಿದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾವು ಶಾಸಕರಾಗಲಿ, ಸಚಿವರಾಗಲೀ ಸರ್ಕಾರಿ ನೌಕರರುಗಳಾಗಲೀ ತಿಂಗಳಿಗೊಮ್ಮೆ ಪಗಾರ ತೆಗೆದುಕೊಂಡು ಒಳ್ಳೆಯ ರೀತಿಯಿಂದ ಬದುಕಲು ನಮಗೆ ದಾರಿಯಿದೆ. ಆದರೆ, ವರ್ಷದಲ್ಲಿ ರೈತರಿಗೆ ಒಂದು ಬೆಳೆ ಬರಲಿಲ್ಲವೆಂದರೆ ಅವರು ಮುಂದೆ ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ. ನಾನು ಇನ್ನೊಂದು ಮಾತನ್ನು ಹೇಳಬಯಸುವುದೇನೆಂದರೆ, ಸರ್ಕಾರಕ್ಕೆ ನಾವು ಎಚ್ಚರಿಕೆ ಕೊಟ್ಟಿದ್ದೆವು. ಕಳಪೆ ಗುಣಮಟ್ಟದ ಔಷಧಿಯಿಂದ ತೊಗರಿ ಬೆಳೆಯಲ್ಲದೆ ಅನೇಕ ರೀತಿಯ ಬೆಳೆಗಳು ನಾಶವಾಗುತ್ತಿರುವುದರಿಂದ ನಾವು ಸತ್ಯಾಗ್ರಹವನ್ನೂ ಕೂಡ ಮಾಡಿ ಸರ್ಕಾರವನ್ನು ಎಚ್ಚರಿಸಿದ್ದೆವು. ಆದರೆ, ಸರ್ಕಾರ ಈ ದಿಕ್ಕಿನಲ್ಲಿ ಗಮನಹರಿಸಲಿಲ್ಲ.

ಜನತಾ ದಳ ಸರ್ಕಾರ ರೈತರ ಪರ ಸರ್ಕಾರವೆಂದು ಹೇಳಿಕೊಳ್ಳುತ್ತಿದ್ದೀರಿ, ಆದರೆ, ನಾವು ರೈತರ ವಿರೋಧಿ ಸರ್ಕಾರವೆಂದು ಹೇಳುತ್ತಿದ್ದೇವೆ. ರೈತರುಗಳನ್ನು ಇಂತಹ ಪರಿಸ್ಥಿತಿಯಿಂದ ಉಳಿಸಬೇಕೆನ್ನುವ ಕಳಕಳಿ ಸರ್ಕಾರಕ್ಕಿದ್ದರೆ ನೀವು ರೈತರಿಗೆ ಪರಿಹಾರ ಧನ ಕೊಡಬೇಕು ಹಾಗೂ ಸತ್ತ ರೈತರ ಕುಟುಂಬಕ್ಕೆ ಪರಿಹಾರವಾಗಿ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಏನು ಕೇಳುತ್ತಿದ್ದೇವೆ, ಅದೆಷ್ಟು ಕೊಡುತ್ತೀರೋ ಬಿಡುತ್ತೀರೋ ಅದು ನಿಮಗೆ ಬಿಟ್ಟ ವಿಚಾರ. ಆದರೆ, ಬೆಳೆ ನಾಶದಿಂದಾಗಿ ಯಾರು ಸತ್ತಿದ್ದಾರೆ, ಸತ್ತ ಪ್ರತಿಯೊಂದು ರೈತರ ಕುಟುಂಬದವರಿಗೆ ಒಂದು ಚಿಕ್ಕ ನೌಕರಿ ಕೊಡಬೇಕೆಂದು ನಾನು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಬೀದರ್ ಜಿಲ್ಲೆಯಲ್ಲಿ ಯಾವ ರೀತಿ ಬೆಳೆ ಸರ್ವನಾಶವಾಗಿದೆಯೋ, ಅದೇ ರೀತಿ ಗುಲ್ಬರ್ಗ ಜಿಲ್ಲೆಯಲ್ಲೂ ಕೂಡ ಜೋಳ, ಕಡಲೆ ಮತ್ತು ತೊಗರಿ ಕೂಡ ಬಹಳಷ್ಟು ಪ್ರಮಾಣದಲ್ಲಿ ಸರ್ವನಾಶವಾಗಿದೆ. ನಾನು ಹೇಳಿದ ಪ್ರಕಾರ ಒಂದು ಎಕರೆಗೆ ರೈತ ಮೂರು ಸಾವಿರ ರೂಪಾಯಿಗಳನ್ನು ತೊಗರಿ ಬೆಳೆಯಲು ಖರ್ಚು ಮಾಡಿದರೆ ಮಾತ್ರ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ರೈತರುಗಳು ಪ್ರತಿ ಎಕರೆಗೆ ಮೂರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ನಷ್ಟಕ್ಕೀಡಾಗಿದ್ದಾರೆ. ಆದುದರಿಂದ, ನಾನು ಸರ್ಕಾರದಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ, ಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ನಷ್ಟ ಹೊಂದಿದ ರೈತರುಗಳಿಗೆ ಪ್ರತಿ ಎಕರೆಗೆ ಎರಡು ಸಾವಿರ ರೂಪಾಯಿಗಳಂತೆ ಪರಿಹಾರ ಕೊಡಬೇಕು. ಅಲ್ಲದೆ, ಈ ಸಂದರ್ಭದಲ್ಲಿ ರೈತರುಗಳು ಸತ್ಯಾಗ್ರಹ ನಡೆಸುತ್ತಿದ್ದು ಸರ್ಕಾರದಿಂದ ಏನಾದರೂ ಪರಿಹಾರ ಸಿಗುತ್ತದೋ ಏನೋ ಎಂದು ಕಾಯುತ್ತಿದ್ದಾರೆ. ಒಂದು ವೇಳೆ ಸರ್ಕಾರ ಪರಿಹಾರ ಕೊಟ್ಟಿಲ್ಲವೆಂದರೆ ಅನೇಕ ಮಂದಿ ರೈತರು ಸಾಯುವ ವಿಷಯ ನನಗೆ ಈಗಾಗಲೇ ಗೊತ್ತಾಗಿದೆ. ಅದಕ್ಕೋಸ್ಕರ ನಾನು ಈ ಸದನದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ, ಸಾಧ್ಯವಾದಷ್ಟು ಕನಿಷ್ಠ ಒಂದು ಎಕರೆಗೆ ಎರಡು ಸಾವಿರ ರೂಪಾಯಿಗಳಂತೆ ಪರಿಹಾರ ಕೊಡಬೇಕೆಂದು ಮನವಿ ಮಾಡುತ್ತಾ ಇದರ ಜೊತೆಗೆ ಈಗಾಗಲೇ ರೈತರುಗಳು ಬ್ಯಾಂಕುಗಳಿಂದ ಮತ್ತು ಸಹಕಾರ ಸಂಘಗಳಿಂದ ಏನು ಸಾಲ ತೆಗೆದುಕೊಂಡಿದ್ದರು, ಅದನ್ನೂ ಕೂಡ ಮನ್ನಾ ಮಾಡಬೇಕು. ಅವರು ಮುಂದೆ ನೆಮ್ಮದಿಯಿಂದ ಬದುಕಬೇಕಾದರೆ ಬೀಜ, ಗೊಬ್ಬರ ಸಾಲದ ವಿಸ್ತರಣೆಯನ್ನೂ ಕೂಡ ಮಾಡಲೇಬೇಕೆಂದು ನಾನು ಕಳಕಳಿಯಿಂದ ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

\+ ಶ್ರೀ ಎಲ್.ಕೆ.ಚವ್ಹಾಣ್ (ಹುಲಸೂರು): ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ನಾಯಕರು ಹೇಳಿರುವಂತೆ ಕಳೆದ ವರ್ಷದ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಖಾರಿಫ್ ಬೆಳೆಗಳು ಪೂರ್ತಿಯಾಗಿ ನಾಶವಾಗಿವೆ. ಖಾರಿಫ್ ಬೆಳೆ ಆಗಲಿಲ್ಲವೆಂದು ರೈತರು

ತಮ್ಮಲ್ಲಿದ್ದ ಹಣವನ್ನೆಲ್ಲಾ ಖರ್ಚು ಮಾಡಿ ಅಥವಾ ಬೇರೆಡೆಯಿಂದ ಸಾಲ ತೆಗೆದುಕೊಂಡು ಬಂದು ರಾಬಿ ಬೆಳೆಗಳಾದ ತೊಗರಿ, ಕಡಲೆ, ಕುಸುಬಿ, ಬಿಳಿ ಜೋಳ ಬೆಳೆಯಲು ಬಿತ್ತಿದ್ದರೆ ಅವೂ ಕೂಡ ನಾಶವಾಗಿವೆ. ಇನ್ನು ಬೆಳೆಗಳನ್ನು ಸಂರಕ್ಷಿಸಲು ರಸಗೊಬ್ಬರ, ಕೀಟನಾಶಕ ಔಷಧಿಗಳನ್ನು ಖರೀದಿಸಲು ರೈತರು ತಮ್ಮಲ್ಲಿದ್ದ ಹಣವನ್ನೆಲ್ಲವನ್ನೂ ಖರ್ಚು ಮಾಡಿದ ನಂತರ ಮಾರುಕಟ್ಟೆಯಲ್ಲಿ ಅಥವಾ ಕಮೀಷನ್ ಏಜೆಂಟ್ ಮುಖಾಂತರ ಎಷ್ಟೆಷ್ಟು ಸಾಲ ಸಿಕ್ಕುತ್ತದೆಯೋ ಅಷ್ಟು ಸಾಲ ತಂದು ಪ್ರಯತ್ನಿಸಿದರೂ ಕೊನೆಗೆ ಅವರು ಬಿತ್ತಿದ್ದ ಬೆಳೆಯೂ ಕೈ ಸೇರಲಿಲ್ಲ. ಅಲ್ಲದೆ, ಯಾರ ಹತ್ತಿರ ಸಾಲ ತೆಗೆದುಕೊಂಡಿದ್ದರೋ, ಅವರಿಗೆ ಸಾಲ ಮರುಪಾವತಿ ಮಾಡುವುದಕ್ಕೆ ದಿಕ್ಕು ತೋಚದೆ ನಮ್ಮ ಜಿಲ್ಲೆಯಲ್ಲಿ ರೈತರುಗಳು ಆತ್ಮಹತ್ಯೆಗೆ ಬಲಿಯಾಗುತ್ತಿದ್ದಾರೆ. ಇಲ್ಲಿಯವರೆಗೆ ಸುಮಾರು ಹತ್ತು ಜನರು ಆತ್ಮಹತ್ಯೆ ಮಾಡಿಕೊಂಡಿದ್ದು ಅವರ ಕುಟುಂಬದ ಪರಿಸ್ಥಿತಿ ಬಹಳ ಗಂಭೀರವಾಗಿದೆ. 1972-73ರಲ್ಲಿ ಏನು ಬರಗಾಲ ಬಂದಿತ್ತು, ಅದಕ್ಕಿಂತಲೂ ಕಳೆದ ವರ್ಷದ ಬರ ಪರಿಸ್ಥಿತಿ ತೀವ್ರವಾಗಿರದೆ ಬಹಳ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಆಗ ಬರಗಾಲ ಬಂದಿದ್ದಂಥ ಸಂದರ್ಭದಲ್ಲಿ ರೈತರು ಬದುಕಲು ತಮ್ಮ ಬಳಿ ಇದ್ದ ಸ್ವಂತ ಹಣ ಖರ್ಚು ಮಾಡಿ ಹಾಗೂ ತಮ್ಮಲ್ಲಿದ್ದ ವಸ್ತುಗಳನ್ನು ಮಾರಾಟ ಮಾಡಿ ಒಂದು ವರ್ಷ ಜೀವನ ನಡೆಸಿದರು. ಆದರೆ, ಈಗ ಅವರ ಹತ್ತಿರ ಏನೂ ಉಳಿದಿಲ್ಲ. ಚಹಾ ಕುಡಿಯಲೂ ಅಸಮರ್ಥರಾಗಿದ್ದಾರೆ, ಬೀಡಿ ಖರೀದಿಸಲೂ ಅವರಲ್ಲಿ ಶಕ್ತಿ ಉಳಿದಿಲ್ಲ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರುಗಳ ಅಂತ್ಯಸಂಸ್ಕಾರಕ್ಕೂ ಹಣವಿಲ್ಲದಂತಾಗಿದೆ. ಮೊನ್ನೆ ಯಾರೋ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದು ಆತನ ಅಂತ್ಯ ಸಂಸ್ಕಾರಕ್ಕೆ ಹಣವಿಲ್ಲದೆ ರೈತರುಗಳೆಲ್ಲರೂ ಸಾಮೂಹಿಕವಾಗಿ ಹಣ ಸಂಗ್ರಹಿಸಿ ಅಂತ್ಯ ಸಂಸ್ಕಾರ ಮಾಡಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಜಿಲ್ಲೆಯ ರೈತರುಗಳಿದ್ದಾರೆ. ಏಕೆಂದರೆ ನಮ್ಮ ಜಿಲ್ಲೆ ಪೂರ್ತಿ ಒಣ ಪ್ರದೇಶವಾಗಿದ್ದು, ಅಲ್ಲಿ ನೀರಾವರಿ ಸೌಲಭ್ಯವಿಲ್ಲದಿರುವುದರಿಂದ ರೈತರುಗಳ ಆರ್ಥಿಕ ಪರಿಸ್ಥಿತಿ ಬಹಳ ಬಿಕ್ಕಟ್ಟಿನದಾಗಿದೆ. ಈ ದಿಸೆಯಲ್ಲಿ ಒಂದೆರಡು ತಿಂಗಳುಗಳ ಹಿಂದೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದೆ. ಆನಂತರ, ಕಳೆದ ಒಂದು ತಿಂಗಳಿನಿಂದ ಸತತವಾಗಿ ತಾಲ್ಲೂಕು ಮಟ್ಟದಲ್ಲಿ ಔರಾದ್, ಬಸವಕಲ್ಯಾಣ ಮತ್ತು ಬಾಲ್ಕಿ ರೈತರುಗಳ ರ್‍ಯಾಲಿಯನ್ನೂ ನಿರ್ವಹಿಸಿದ್ದೇನೆ. ಅಲ್ಲದೆ, ಈಗಾಗಲೇ ನನ್ನ ಎಲ್ಲಾ ಸದಸ್ಯ ಮಿತ್ರರುಗಳು ಹೇಳಿದಂತೆ ಏಳನೆಯ ತಾರೀಖಿನಂದು ಎಲ್ಲಾ ಪಕ್ಷದವರೂ ಸೇರಿಕೊಂಡು ನಾನ್-ಪೊಲಿಟಿಕಲ್ ರ್‍ಯಾಲಿ ಮಾಡಿದಾಗ ಆ ರ್‍ಯಾಲಿಯಲ್ಲಿ ಸುಮಾರು ಐವತ್ತು ಸಾವಿರದಷ್ಟು ಜನರು ಬಂದಿದ್ದಾಗ ನಾವು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರದ ಗಮನಕ್ಕೆ ತಂದು ಆ ಕುರಿತು ಮಾಹಿತಿ ಕಳುಹಿಸಿಕೊಟ್ಟಿದ್ದೇವೆ. ಆದಕಾರಣ, ಈ ಸಂದರ್ಭದಲ್ಲಿ ನಮ್ಮ ರೈತರ ಪರಿಸ್ಥಿತಿ ಮತ್ತು ಮುಂಬರುವ ವರ್ಷಗಳಲ್ಲಿ ಈ ಒಂದು ಕೃಷಿ ಬೆಳೆಯನ್ನು ಉಳಿಸಿಕೊಳ್ಳಬೇಕು. ಈ ವರ್ಷ ನಮ್ಮ ರೈತರುಗಳನ್ನು ಉಳಿಸಿಕೊಳ್ಳಬೇಕು

ಮತ್ತು ಬರುವ ವರ್ಷಗಳಲ್ಲಿ ಕೃಷಿ ಉಳಿಸಿಕೊಳ್ಳಬೇಕು. ಕಾರಣ, ಬರು ವರ್ಷಗಳಲ್ಲಿ ರೈತರು ಕೃಷಿ ಮಾಡಲು ಅಸಮರ್ಥರಾಗಿದ್ದಾರೆ. ಆದುದರಿಂದ ನಷ್ಟಕ್ಕೀಡಾದ ರೈತರುಗಳಿಗೆ ಸರ್ಕಾರ ಪ್ರತಿ ಎಕರೆಗೆ ಕನಿಷ್ಠ ಪಕ್ಷ ಎರಡು ಸಾವಿರ ರೂಪಾಯಿಗಳಂತೆ ಪರಿಹಾರ ಧನ ಕೊಡಬೇಕು. ಅಲ್ಲದೆ, ಬೆಳೆ ನಷ್ಟವಾಗಿ ಯಾವ ರೈತರು ಆತ್ಮಹತ್ಯೆಗೊಳಗಾಗಿದ್ದಾರೆ, ಅವರ ಕುಟುಂಬಕ್ಕೆ ಕನಿಷ್ಠ ಒಂದು ಲಕ್ಷ ರೂಪಾಯಿಯಷ್ಟು ಹಣವನ್ನು ತಕ್ಷಣ ಮಂಜೂರು ಮಾಡಿದರೆ ಅವರಿಗೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಮತ್ತು ಈ ವರ್ಷ ರೈತರುಗಳು ಸಹಕಾರಿ ಬ್ಯಾಂಕ್, ಸಂಸ್ಥೆಗಳಿಂದ ಏನು ಸಾಲ ಪಡೆದಿದ್ದರು, ಅದನ್ನು ವಾಪಸ್ ಮಾಡುವುದಕ್ಕೆ ಅವರಲ್ಲಿ ಶಕ್ತಿಯಿಲ್ಲ. ಆದಕಾರಣ, ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿ, ಸಾಲವನ್ನು ಈ ವರ್ಷ ವಸೂಲು ಮಾಡಬಾರದು. ಅದೇ ರೀತಿ ರೈತರು ಕೊಡುವ ವಿದ್ಯುತ್ ಶುಲ್ಕವನ್ನು ಈ ವರ್ಷ ಸರ್ಕಾರ ತೆಗೆದುಕೊಳ್ಳದೆ ಎರಡು ವರ್ಷಗಳ ನಂತರ ಅದನ್ನು ವಸೂಲು ಮಾಡಬೇಕು. ಮಾನ್ಯ ಉಪಾಧ್ಯಕ್ಷರೇ, ಈ ಸಂದರ್ಭದಲ್ಲಿ ಸದನದ ಹೊರಗಡೆ ಸುಮಾರು ಎರಡು ತಿಂಗಳುಗಳಿಂದ ನಾವು ಚಳವಳಿ ಮಾಡುತ್ತಿದ್ದೇವೆ, ಈ ದಿಸೆಯಲ್ಲಿ ಜಿಲ್ಲಾ ಮಂತ್ರಿಗಳೊಂದಿಗೆ ಹಾಗೂ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ್ದೇನೆ. ನಾವು ಜನಪ್ರತಿನಿಧಿಗಳಾಗಿ ಬೆಂಗಳೂರಿಗೆ ಬಂದಾಗ ಜನರಿಂದ ರ್‍ಯಾಲಿ ಮಾಡಿಸಿದ್ದಕ್ಕೆ ನಿಮಗೇನು ಸಿಕ್ಕಿತು ಹೇಳಿ ಎಂದು ಅವರು ಕೇಳಿದಾಗ, ಹೊರಗಡೆ ಚಳವಳಿ ಮಾಡುತ್ತಿರುವುದರಿಂದ ಏನೂ ಆಗುತ್ತಿಲ್ಲದಿರುವುದರಿಂದ ಒಂಭತ್ತನೇ ತಾರೀಖಿನಿಂದ ಅಧಿವೇಶನ ಪ್ರಾರಂಭವಾಗುವುದರಿಂದ ಸದನದ ಒಳಗಡೆ ನಾವು ಜನಪ್ರತಿನಿಧಿಯಾಗಿ ನಮ್ಮ ಕರ್ತವ್ಯವೇನಿದೆ, ಅದನ್ನು ನಿರ್ವಹಿಸುತ್ತೇವೆಂದು ಹೇಳಿದ್ದೇವೆ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರ ಆದಷ್ಟು ಬೇಗ ನಷ್ಟಕ್ಕೀಡಾದ ರೈತರುಗಳಿಗೆ ಪರಿಹಾರ ಕೊಡಲಿಲ್ಲವೆಂದರೆ ಈ ಅಧಿವೇಶನ ಮುಗಿಯುವುದರೊಳಗೆ ರೈತರ ಆತ್ಮಹತ್ಯೆ ಸಂಖ್ಯೆ ಹತ್ತರಿಂದ ನೂರಕ್ಕೆ ಹೋಗಬಹುದಾದ್ದರಿಂದ ಈ ದಿಸೆಯಲ್ಲಿ ಸರ್ಕಾರ ತಕ್ಷಣ ತನ್ನ ನಿರ್ಧಾರ ಘೋಷಿಸಬೇಕೆಂದು ತಮ್ಮ ಮೂಲಕ ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಉಪಾಧ್ಯಕ್ಷರೇ, ...

ಉಪಾಧ್ಯಕ್ಷರು: ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರೆ, ಈಗ ಸದನದಲ್ಲಿ ನೀವು ಹೊಸ ಪದ್ಧತಿ ತರುವುದು ಬೇಡ, ತಾವು ಆಡಳಿತ ಪಕ್ಷದ ಸದಸ್ಯರಾಗಿದ್ದು, ತಾವು ಮುಂಚಿತವಾಗಿ ನೋಟಿಸ್ ಕಳುಹಿಸದಿರುವುದರಿಂದ ನೀವು ಮಾತನಾಡಲು ಸಾಧ್ಯವಿಲ್ಲ, ಬೇಕಾದರೆ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ನನಗೆ ಮಾತನಾಡಲು ಎರಡು ನಿಮಿಷ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು: ನೀವು ನೋಟೀಸ್ ಕೊಟ್ಟಿಲ್ಲದಿರುವುದರಿಂದ ಮಾತನಾಡಲು ಸಾಧ್ಯವಿಲ್ಲ. ತಾವೇನೂ ಹೊಸಬರಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರು ಸಭಾತ್ಯಾಗ ಮಾಡಿದರು)

2.30 ಪಿ.ಎಂ

+ ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಸಭಾಪತಿಗಳೇ, ಈ ದಿವಸ ಬಹಳ ಗಂಭೀರವಾದಂಥ ವಿಚಾರದ ಮೇಲೆ ಬಹಳ ಗಂಭೀರವಾದಂಥ ಚರ್ಚೆ ನಡೆದಿದೆ. ಈ ಪ್ರಸಂಗ ದುರದೃಷ್ಟಕರ ಆದರೂ ಸಹ ಈ ರೀತಿಯಾದಂಥ ಒಂದು ಚರ್ಚೆ ನಡೆದಿದ್ದು ಉಪಯುಕ್ತ. ಅನ್ನ, ಬಟ್ಟೆ ಕೊಡುವ ನಮ್ಮ ರೈತನ ಬಗ್ಗೆ ಇಷ್ಟೊಂದು ಕಳಕಳಿಯನ್ನು ನಮ್ಮ ವಿರೋಧ ಪಕ್ಷದ ನಾಯಕರು, ಭಾರತೀಯ ಜನತಾ ಪಕ್ಷದ ನಾಯಕರು ಮತ್ತು ಒಟ್ಟು ಸುಮಾರು 9 ಜನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಗಂಭೀರವಾದಂಥ ಚರ್ಚೆಯನ್ನು ನಡೆಸಿದ್ದಾರೆ. ಈ ವಿಷಯ ದುರಾದೃಷ್ಟಕರ ಆದರೂ ಸಹಿತ ಇಂತಹ ವಿಚಾರದಲ್ಲಿ ಚರ್ಚೆ ಆಯಿತಲ್ಲಾ ಎನ್ನತಕ್ಕಂಥದ್ದರ ಬಗ್ಗೆ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ನಮ್ಮ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿಗೆ ಅವರು ನಂಬಿಕೊಂಡಿರತಕ್ಕ ಬೆಳೆ ಎಂದರೆ ಬೇಳೆಕಾಳುಗಳು ಅದು ಕಣಜ. ಹಿಂಗಾರಿನಲ್ಲಿಯಾಗಲೀ, ಮುಂಗಾರಿನಲ್ಲಿ ಆಗಲಿ ಯಾವುದೇ ಹಂಗಾಮಿನಲ್ಲಾದರೂ ಅವರು ಹೆಚ್ಚಾಗಿ ಬೆಳೆಯತಕ್ಕಂಥದ್ದು ಬೇಳೆ. ಬೇಳೆಕಾಳು ಅತ್ಯಂತ ಮುಖ್ಯವಾಗಿರುವ ಬೆಳೆ. ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಬೆಳೆಗಳು ಯಾವ ರೀತಿ ಹಣವನ್ನು ಕೊಡತಕ್ಕ ಬೆಳೆಗಳಾಗಿವೆಯೋ ಅದೇರೀತಿ ಗುಲ್ಬರ್ಗಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬೇಳೆಕಾಳು ಬಹಳ ಮುಖ್ಯವಾಗಿರತಕ್ಕ ಬೆಳೆ. ಸರ್ವೇಸಾಮಾನ್ಯವಾಗಿ ಪ್ರತಿವರ್ಷವೂ ಸಹ ಅವರು ಬೇಳೆಯನ್ನು ಬೆಳೆಯುತ್ತಾ ಬಂದಿದ್ದಾರೆ. ಕಳೆದ ವರ್ಷ ಬಹಳ ಉತ್ತಮವಾದ ಬೆಳೆಯನ್ನು ಬೆಳೆದಿದ್ದಾರೆ, ಮತ್ತೆ ಅದರ ಹಿಂದಿನ ವರ್ಷದಲ್ಲೂ ಕೂಡ ಉತ್ತಮವಾದಂಥ ಬೆಳೆಯನ್ನು ಬೆಳೆದಿದ್ದಾರೆ. ಈ ವರ್ಷ ದುರಾದೃಷ್ಟವಶಾತ್ ಈ ಹಿಂಗಾರು ಮತ್ತು ಮುಂಗಾರು ಎರಡರಲ್ಲೂ ಸಹ ಯಾವ ಸಮಯಕ್ಕೆ ಮಳೆ ಆಗಬೇಕಾಗಿತ್ತೋ, ಆ ಸಮಯಕ್ಕೆ ಮಳೆ ಆಗಲಿಲ್ಲ, ಯಾವಾಗ ಮಳೆ ಅವಶ್ಯಕತೆ ಇರಲಿಲ್ಲವೋ ಆ ಸಮಯದಲ್ಲಿ ಮಳೆ ಹೆಚ್ಚಾಗಿ ಆಯಿತು. ಇದರ ಜೊತೆಗೆ ವಾತಾವರಣದಲ್ಲೂ ಸಹ ಮೋಡ ಕವಿದಂಥ ವಾತಾವರಣ ಇದ್ದರೆ, ವಾತಾವರಣದಲ್ಲಿ ತೇವಾಂಶ ಹೆಚ್ಚಿಗೆ ಇದ್ದರೆ, ಹುಳುಗಳಿಗೆ ಮತ್ತು ಕೀಟಬಾಧೆಗಳಿಗೆ ಯಾರೇ ಏನೇ ಮಾಡಿದರೂ ಸಹ ಅದನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ. ಏಕೆಂದರೆ ನಾವು ಜಡವಸ್ತುಗಳ ಮೇಲೆ ಔಷಧ ಪ್ರಯೋಗ ಮಾಡುವುದಿಲ್ಲ. ಬದುಕಿರುವಂಥ ಪ್ರಾಣಿ ಕೀಟಗಳು ವಾತಾವರಣಕ್ಕೆ ಹೊಂದಿಕೊಳ್ಳುವಂಥ ಶಕ್ತಿಯನ್ನು ಅವು ತನ್ನಷ್ಟಕ್ಕೆ ತಾನೇ

ಪಡೆಯುತ್ತವೆ. ಎಷ್ಟೋ ವರ್ಷಗಳ ಮೊದಲು ಬಂದ ಔಷಧಿಯನ್ನು ಸಿಂಪಡಿಸುವುದರಿಂದ ಯಾವುದೇ ಉಪಯೋಗವಾಗಲಿ, ಪ್ರಯೋಜನವಾಗಲಿ ಆಗುವುದಿಲ್ಲ. ಕಾರಣ ಏನೆಂದರೆ ಕೀಟಗಳು ಸಹ ಔಷಧಿಗೆ ನಿರೋಧ ಶಕ್ತಿಯನ್ನು ಪಡೆದುಕೊಳ್ಳತಕ್ಕಂಥದ್ದು ವೈಜ್ಞಾನಿಕವಾಗಿ ಸಾಬೀತಾಗಿರತಕ್ಕ ವಿಚಾರ. ಇಂತಹ ಒಂದು ಸಂದರ್ಭದಲ್ಲಿ ಈ ವರ್ಷದಲ್ಲಿ ವಾತಾವರಣದ ಏರುಪೇರಿನಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ಇರಬಹುದು, ಬೀದರ್‌ನಲ್ಲಿ, ರಾಯಚೂರಿನಲ್ಲಿ ಅಥವಾ ಬಳ್ಳಾರಿಯ ಸ್ವಲ್ಪ ಭಾಗದಲ್ಲೇ ಇರಬಹುದು, ಈ ಏರುಪೇರಿನಿಂದ ಕೀಟಬಾಧೆಗಳು ಹೆಚ್ಚಾಗಿರುವುದು ಹೌದು. ಮಳೆಯ ಏರುಪೇರಿನಿಂದ ನಷ್ಟ ಆಗಿರತಕ್ಕಂಥದ್ದು ಉಂಟು. ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳ ಜಿಲ್ಲಾಧಿಕಾರಿಗಳ ವರದಿಯನ್ನು ಉಲ್ಲೇಖಿಸಿದ್ದಾರೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ.

(ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಬೀದರ್ ಜಿಲ್ಲೆಯಲ್ಲಿ ಸಾಮಾನ್ಯವಾಗಿ ನೈರುತ್ಯ ಮಾರುತದ ಬೆಳೆ ಪ್ರಾರಂಭವಾದ ಮೇಲೆಯೇ ಮುಂಗಾರು ಬಿತ್ತನೆ ಪ್ರಾರಂಭವಾಗುತ್ತದೆ. ಜಿಲ್ಲೆಯ ಮುಂಗಾರಿನ ವಾಡಿಕೆ ವಿಸ್ತೀರ್ಣ 3.16 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಮುಂಗಾರಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಜೋಳ, ಸಜ್ಜೆ, ತೊಗರಿ, ಉದ್ದು, ಹೆಸರು, ಎಳ್ಳು, ನೆಲಗಡಲೆ ಮತ್ತು ಸೂರ್ಯ ಕಾಂತಿ ಈ ಸದರಿ ಬೆಳೆಗಳಲ್ಲಿ ಬಹುತೇಕ ಮಳೆಯಾಶ್ರಯದಲ್ಲಿಯೇ ಬೆಳೆಯಲಾಗುತ್ತಿದೆ. ಜೂನ್ ಮಾಹೆಯಲ್ಲಿ ಜಿಲ್ಲೆಯ ವಾಡಿಕೆ ಮಳೆ 131 ಮಿ.ಮಿ.ಗಳಷ್ಟಿದ್ದು ವಾಸ್ತವಿಕ 89 ಮಿ.ಮಿ. ಮಾತ್ರ ಮಳೆಯಾಗಿರುತ್ತದೆ. ಈ ಮಳೆಯಿಂದ ಜಿಲ್ಲೆಯಲ್ಲಿ ಭೂಮಿಯ ಸಿದ್ಧತೆಗೆ ಬಹಳ ಅನುಕೂಲವಾಗಿ ಬಿತ್ತನೆ ಕಾರ್ಯ ಪ್ರಾರಂಭವಾಯಿತು. ಜುಲೈ ಮಾಹೆಯಲ್ಲಿ, 190 ಮಿ.ಮಿ.ಗೆ. ಬದಲಾಗಿ 158 ಮಿ.ಮಿ. ಸಾಮಾನ್ಯ ಮಳೆಯಾಗಿದ್ದರೂ ಸಮಯಕ್ಕೆ ಸಮನಾಗಿರಲಿಲ್ಲ. ಅಂದರೆ ಬೀದರ್ ಮತ್ತು ಭಾಲ್ಕಿ ತಾಲ್ಲೂಕುಗಳಲ್ಲಿ ಬಹಳ ಕಡಿಮೆ ಮಳೆಯಾಗಿರುತ್ತದೆ. ಒಳ್ಳೆಯ ಮಳೆ ಬರುವ ನಂಬಿಕೆಯಿಂದ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಚುರುಕಾಗಿ ಬಿತ್ತನೆ ಕಾರ್ಯವನ್ನು 2.84 ಲಕ್ಷ ಹೆಕ್ಟೇರ್‌ಗಳಲ್ಲಿ (ಶೇ.90) ಕೈಗೊಳ್ಳಲಾಯಿತು. ಮುಂಗಾರು ಹಂಗಾಮಿನಲ್ಲಿ ಒಟ್ಟಾರೆ 2.95 ಲಕ್ಷ ಹೆಕ್ಟೇರ್‌ಗಳಷ್ಟು (ಶೇ.95) ವಿಸ್ತೀರ್ಣವು ವಿವಿಧ ಬೆಳೆಗಳಿಂದ ಆವೃತವಾಗಿತ್ತು. ಬಿತ್ತನೆಯಾದ ಕೆಲವು ದಿನಗಳು ಬೆಳೆಗಳ ಪರಿಸ್ಥಿತಿ ಸುಧಾರಣೆವಾಗಿತ್ತು. ಜುಲೈ ಕೊನೆಯ ವಾರದಿಂದ ಆಗಸ್ಟ್, ಸೆಪ್ಟೆಂಬರ್ ಮಾಹೆಗಳಲ್ಲೂ ಮಳೆ ಬಾರದೆ ದೀರ್ಘವಾದ ಒಣ ಹವೆಯಿಂದಾಗಿ ಅಲ್ಪ ಬೆಳೆಗಳಾದ ಉದ್ದು, ಹೆಸರು, ಎಳ್ಳು ಇತ್ಯಾದಿಗಳ ಬೆಳವಣಿಗೆ ಕುಂಟಿತಗೊಂಡಿತು. ಇದರಿಂದಾಗಿ 1,87,961 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆದ ಬೆಳೆಗಳಿಗೆ ಹಾನಿಯುಂಟಾಗಿದೆ. ಅಕ್ಟೋಬರ್ ಮಾಹೆಯಲ್ಲಿ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಆದ ಒಳ್ಳೆಯ ಮಳೆಯಿಂದಾಗಿ, ಹಿಂಗಾರು ಬಿತ್ತನೆ

ಕಾರ್ಯ ಸಮಯಕ್ಕೆ ಸರಿಯಾಗಿ ಕೈಗೊಂಡು, 1,09,100 ಹೆಕ್ಟೇರ್ ವಿಸ್ತೀರ್ಣದ ಗುರಿಯಲ್ಲಿ ಸುಮಾರು 106753 ಹೆಕ್ಟೇರ್ ವಿಸ್ತೀರ್ಣದಲ್ಲಿ ಹಿಂಗಾರಿ ಜೋಳ ಗೋಧಿ, ಕಡಲೆ, ಕುಸುಬೆ ಮತ್ತು ಸೂರ್ಯಕಾಂತಿ ಬೆಳೆಗಳನ್ನು ಬೆಳೆಯಲಾಯಿತು. ಆದರೆ ನವೆಂಬರ್ ಮತ್ತು ಡಿಸೆಂಬರ್ ಮಾಹೆಯಲ್ಲಿ ಅಕಾಲಿಕ ಹೆಚ್ಚಿನ ಮಳೆಯಿಂದ ಅದರೊಂದಿಗೆ ಮೋಡ ಮುಸುಕಿನ ವಾತಾವರಣದಿಂದಾಗಿ ನಿಂತ ತೊಗರಿ ಮತ್ತು ಕಡಲೆ ಬೆಳೆಗಳಿಗೆ ಹೆಲಿಕೋವೆರ್ಪ (ಕಾಯಿ ಕೊರಕ) ಕೀಟದ ಹಾವಳಿ ಅತ್ಯಧಿಕವಾಗಿ ಅತೀ ಹಾನಿಯುಂಟಾಯಿತು. ಇಳುವರಿ ಮಟ್ಟ ಕ್ರಮವಾಗಿ ಶೇಕಡ 80 ಮತ್ತು ಶೇ.60ರಷ್ಟು ರಷ್ಟಾಗಿರುತ್ತದೆ.

ಭಾಲ್ಕಿ ತಾಲ್ಲೋಕಿನ ಸಿದ್ದೇಶ್ವರ ಗ್ರಾಮದ ಶ್ರೀ ಶಿವರಾಜ್, ಭಾಲ್ಕಿ ತಾಲೋಕಿನ ಕಲ್ವಾಡಿ ಗ್ರಾಮದ ಶ್ರೀ ಬಸವರಾಜ್, ಭಾಲ್ಕಿ ತಾಲೋಕಿನ ಕುಂಟೆ ಶಿರಸಿ ಗ್ರಾಮದ ಶ್ರೀ ದಿಲೀಪ್‌ಕುಮಾರ್, ಭಾಲ್ಕಿ ತಾಲೋಕೀನ ಮೊರಾಂಬಿ ಗ್ರಾಮದ ಶ್ರೀಮತಿ ಜಲಜಾಬಾಯಿ, ಭಾಲ್ಕಿ ತಾಲೋಕಿನ ಕಾಸರ್‌ತುಗಾನ್‌ನ ಶ್ರೀ ಪ್ರಭು, ಬಸವಕಲ್ಯಾಣ ತಾಲೂಕಿನ ಸೊಲ್ದಾಬ್ಕದ ಶ್ರೀಮತಿ ಲಕ್ಷ್ಮೀಬಾಯಿ, ಹುಮ್ನಾಬಾದ್ ತಾಲೊಕಿನ ಗಾಟ್‌ಬೋರಲ್ ಗ್ರಾಮದ ಶ್ರೀ ವಾಮನ್ ರಾವ್, ಭಾಲ್ಕಿ ತಾಲೋಕಿನ ಹಾಲಹಳ್ಳಿಯ ಶ್ರೀ ಭರತ್ ಮತ್ತು ಭಾಲ್ಕಿ ತಾಲೋಕಿನ ಭಟಾಂಭರದ ಶ್ರೀ ಭೋಜರಾಜ್ ಈ 9 ಮಂದಿಯ ಸಾವಿನ ಪೈಕಿ ಯಾವುದೇ ಸಾವಿಗೆ ಬೆಳೆಗಳ ವಿಫಲತೆ ಮಾತ್ರವೇ ಕಾರಣವೆಂದು ನಿರ್ಣಯಾತ್ಮಕವಾಗಿ ಸಿದ್ಧಪಡಿಸಲು ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಆದಾಗ್ಯೂ ಶ್ರೀ ಶಿವರಾಜ್, ಶ್ರೀ ಪ್ರಭು ಮತ್ತು ಶ್ರೀಮತಿ ಲಕ್ಷ್ಮೀಬಾಯಿ ಇವರುಗಳ ಸಾವಿಗೆ ಬೆಳೆಗಳ ವಿಫಲತೆಯು ಒಂದು ಮುಖ್ಯವಾದ ಕಾರಣವೆಂಬ ಸಂದೇಹಲಾಭವನ್ನು ನೀಡಬಹುದು. ಶ್ರೀ ಶಿವರಾಜ್‌ರವರ ಪ್ರಕರಣದಲ್ಲಿ, ಸಾವು ಸಂಭವಿಸಿದ 45 ದಿನಗಳ ನಂತರ ವಿವಾದವನ್ನು ಎತ್ತಲಾಗಿದೆ. ಶ್ರೀ ಶಿವರಾಜ್, ಶ್ರೀ ಬಸವರಾಜ್, ಶ್ರೀ ಭರತ್ ಮತ್ತು ಶ್ರೀ ಭೋಜರಾಜ್ ಈ ನಾಲ್ಕು ಮಂದಿಯ ಸಾವಿನ ಪ್ರಕರಣಗಳಲ್ಲಿ ಮರಣೋತ್ತರ ಪರೀಕ್ಷೆಯನ್ನು ನಡೆಸಿರುವುದಿಲ್ಲ ಹಾಗೂ ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ಈ ಸಾವುಗಳು ಹೇಗೆ ಸಂಭವಿಸಿತು ಎಂಬುದಕ್ಕೆ ವಿವಿಧ ರೀತಿಯ ಆವೃತ್ತಿಗಳು ವ್ಯಕ್ತವಾಗಿವೆ. ಕಲ್ವಾಡಿ ಗ್ರಾಮದ ಶ್ರೀ ಬಸವರಾಜ್‌ರವರು ವಿಷ ಸೇವನೆಯಿಂದ ಸತ್ತಿಲ್ಲವೆಂದು ಅವರ ಮಗನೇ ಹೇಳಿರುತ್ತಾನೆ. ಶ್ರೀಮತಿ ಜೇಜಾಭಾಯಿಯವರ ಸಾವಿಗೆ ಬೆಳೆಗಳ ವಿಫಲತೆಯೇ ಕಾರಣವೆಂಬುದನ್ನು ಅವರ ಕುಟುಂಬದ ಸದಸ್ಯರೇ ಅಲ್ಲಗಳೆದಿರುತ್ತಾರೆ. ಶ್ರೀ ಭೋಜರಾಜ್‌ರವರ ಸಾವು ಹಾವಿನ ಕಡಿತದಿಂದವೆಂದು ಮೊದಲು ವರದಿಯಾಗಿ ನಂತರ ಬದಲಾಯಿಸಲಾಗಿದೆ.

ಕೃಷಿ ಇಲಾಖೆಯ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಕ್ರಮವಾಗಿ 264 ಮತ್ತು 109 ಸಸ್ಯ ಸಂರಕ್ಷಣಾ ರಸಾಯನಿಕಗಳ ಮಾದರಿಗಳನ್ನು ಸಂಗ್ರಹಿಸಲಾಗಿ ಅವುಗಳ ಪೈಕಿ

ಕ್ರಮವಾಗಿ 53 ಮತ್ತು 3 ಮಾದರಿಗಳು ತಪ್ಪು ಛಾಪುಗಳದ್ದೆಂದು ತಿಳಿದು ಬಂದಿದೆ. ಗುಲ್ಬರ್ಗಾದಲ್ಲಿ 17 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನವೆಂಬರ್ ಮತ್ತು ಡಿಸೆಂಬರ್ ಮಾಹೆಯಲ್ಲಿ ಉಂಟಾದ ಅಕಾಲಿಕ ಮಳೆಯ ಕಾರಣ ಹಾಗೂ ಮೋಡ ಮುಸುಕಿದ ವಾತಾವರಣ ಕೀಟಗಳ ಸಂಖ್ಯೆ ಹೆಚ್ಚಲಿಕ್ಕೆ ಪೂರಕವಾಗಿದ್ದುದರಿಂದ ಸಮಯೋಚಿತ ಸಸ್ಯ ಸಂರಕ್ಷಣೆ ಕ್ರಮ ಕೈಗೊಂಡರೂ ಸಹ ನಿಷ್ಫಲವಾಗಿ ಬೆಳೆಗಳಿಗೆ ಹೆಚ್ಚು ಹಾನಿ ಉಂಟಾಯಿತು.

ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿಬೆಳೆ ಹಾನಿಯಿಂದ ಕಷ್ಟಕ್ಕೀಡಾಗಿರುವ ರೈತರುಗಳಿಗೆ ಪರಿಹಾರವನ್ನು ಒದಗಿಸಿಕೊಡುವ ವಿಷಯವು ಪರಿಶೀಲನೆಯಲ್ಲಿದೆ. ನಾನು ಬೀದರ್ ಜಿಲ್ಲೆಯಲ್ಲಿನ ಬೆಳೆ ಪರಿಸ್ಥಿತಿ ಬಗ್ಗೆ ಹೇಳಿದ್ದೇನೆ. ಸ್ವಲ್ಪ ಹೆಚ್ಚು ಕಡಿಮೆ ಅದೇರೀತಿ ಗುಲ್ಬರ್ಗಾ ಜಿಲ್ಲೆಯಲ್ಲೂ ಆಗಿದೆ. ವಾತಾವರಣದ ಏರುಪೇರಿನಿಂದ, ಮಳೆಯ ಏರುಪೇರಿನಿಂದ ಅಲ್ಲಿಯೂ ಸಹ ಬೆಳೆಗೆ ಹಾನಿಯಾಗಿರತಕ್ಕಂಥದ್ದನ್ನು ನೋಡುತ್ತಿದ್ದೇವೆ. ಈ ಎರಡು ಜಿಲ್ಲೆಗಳಲ್ಲಿ ಬೆಳೆ ಹಾಳಾದ ಕಾರಣ ರೈತರು ಮತ್ತು ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ನೀಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ 2,36,888 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ. ಮತ್ತು 1,75,047 ವಿಸ್ತೀರ್ಣದಲ್ಲಿ ಬೆಳೆ ಹಾನಿ ಆಗಿದೆ. ಆದುದರಿಂದ 13,495.29 ಲಕ್ಷ ರೂಪಾಯಿ ನಷ್ಟ ಆಗಿದೆ. ಬೀದರ್ ಜಿಲ್ಲೆಯಲ್ಲೂ ಸಹ 49,980 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದ್ದು, 39,984 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಳಾಗಿದೆ. ಆದುದರಿಂದ, 1,919 ಲಕ್ಷ ರೂಪಾಯಿಗಳಷ್ಟು ಹಣ ನಷ್ಟ ಆಗಿದೆ. ಆದರೆ ಈ ಎರಡು ಜಿಲ್ಲೆಗಳಲ್ಲೂ ಬೆಳೆ ನಷ್ಟ ಆಗಿರತಕ್ಕಂಥದ್ದು ಅಂಕಿಅಂಶಗಳಿಂದ ವ್ಯಕ್ತಪಡಿಸಿದೆ. ಕೆಲವು ಮಾನ್ಯ ಸದಸ್ಯರು ಸರ್ಕಾರ ಇದರ ಬಗ್ಗೆ ಏನೂ ಮಾಡಲಿಲ್ಲ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಆಗಾಗ್ಗೆ ಸಮಯಕ್ಕೆ ಸರಿಯಾಗಿ ಬೆಳೆಯ ಬಗ್ಗೆ ವರದಿಯನ್ನು ತರಿಸಿದೆ ಮತ್ತು ಮುಖ್ಯಮಂತ್ರಿಗಳು ಸ್ವತಃ ಬೀದರ್ ಜಿಲ್ಲೆಗೆ ಹೋಗಿದ್ದಾರೆ. ಅಲ್ಲಿಗೆ ಹೋಗಿದ್ದಾಗ ಅಲ್ಲಿನ ಅಧಿಕಾರಿಗಳನ್ನು ಕರೆದು ಇದರ ಬಗ್ಗೆ ಮಾತನಾಡಿದ್ದಾರೆ, ಬೀದರ್‌ನಿಂದಲೇ ಮುಖ್ಯ ಕಾರ್ಯದರ್ಶಿಗಳಿಗೆ ಅವರ ಕಾರ್ಯದರ್ಶಿಗಳಿಗೆ ಸೂಚನೆಯನ್ನು ಕೊಟ್ಟು ತಕ್ಷಣ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ದೇಶನವನ್ನು ನೀಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮುಖ್ಯಮಂತ್ರಿಗಳು ಯಾವಾಗ ಅಲ್ಲಿಗೆ ಭೇಟಿ ನೀಡಿ ಅಧಿಕಾರಿಗಳನ್ನು ಮೀಟಿಂಗ್‌ಗೆ ಕರೆದಿದ್ದರು? ಅವರು ಅಲ್ಲಿಗೆ ಚುನಾವಣೆ ಸಂಬಂಧದಲ್ಲಿ ಹೋದರು. ನೀವು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡಿದ್ದೇ 4ನೇ ತಾರೀಖು ಸುಮ್ಮನೆ ಏಕೆ ಹೇಳುತ್ತೀರಾ? ಈಗ ನೀವು ಏನು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ ಅದೇ ಜಾಯಿಂಟ್ ಡೈರೆಕ್ಟರ್ ರಿಪೋರ್ಟ್, ಡಿ.ಸಿ. ರಿಪೋರ್ಟ್ ಮತ್ತು ಎಲ್ಲಾ ಅಧಿಕಾರಿಗಳ ರಿಪೋರ್ಟ್. ಹಣಾನೂ ಬಿಡುಗಡೆ ಮಾಡಲಿಲ್ಲ, ಸತ್ತವರಿಗೆ

ಪರಿಹಾರಧನವನ್ನೂ ಕೊಡಲಿಲ್ಲ, ಸುಮ್ಮನೆ ಏಕೆ ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಚುನಾವಣೆಯ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬೀದರ್ ಜಿಲ್ಲೆಗೆ ಹೋಗಿದ್ದು ವಾಸ್ತವ. ಚುನಾವಣೆಯ ಸಮಯದಲ್ಲಿ ಮುಖ್ಯಮಂತ್ರಿಯವರು ಹೋಗಿದ್ದಾರೆಂದು ಅವರು ತಮ್ಮ ಕರ್ತವ್ಯವನ್ನು ನಿರ್ವಾಹಣೆ ಮಾಡಬಾರದೆಂದೇನಿಲ್ಲ. ಅಲ್ಲಿ ಮನವಿಯನ್ನು ಕೇಳಿದಮೇಲೆ ನೇರವಾಗಿ ಮುಖ್ಯಕಾರ್ಯ ದರ್ಶಿಯವರ ಜೊತೆ, ಇತರೇ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಆ ಅಧಿಕಾರಿಗಳೆಲ್ಲಾ ಸಮಾವೇಶಗೊಂಡು ಟಿಪ್ಪಣಿ ಕೊಟ್ಟಿದ್ದಾರೆ. ಮೊನ್ನೆಯ ಸಚಿವ ಸಂಪುಟದ ಸಭೆಯಲ್ಲಿ ಆ ಟಿಪ್ಪಣಿ ಬಂದಿತ್ತು, ಅದರ ಬಗ್ಗೆ ನಿರ್ಧಾರ ಕೂಡ ಆಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮೊನ್ನೆ ನಾಲ್ಕನೇ ತಾರೀಖು ಚುನಾವಣೆಯ ಸಲುವಾಗಿ ಬೀದರ್‌ಗೆ ಹೋಗಿದ್ದಾಗ, ನೋಡಿ ನೀವು ನಮ್ಮ ಪರವಾಗಿ ಕೆಲಸ ಮಾಡಿ, ನಾವು ಏನು ಹಾನಿಯಾಗಿದೆ ಅದನ್ನು ಪರಿಹಾರವಾಗಿ ಕೊಡುತ್ತೇವೆ ಎಂದು ಹೇಳಿದ್ದರೇ ಹೊರತು, ಬೆಳೆ ನಾಶವಾಗಿರುವ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ, ತೊಂದರೆಗೆ ಒಳಪಟ್ಟಿರುವವರನ್ನು ಭೇಟಿ ಮಾಡಿ ವಿಚಾರ ಮಾಡಲೇನೂ ಹೋಗಿರಲಿಲ್ಲ. ತಾವೆಲ್ಲರೂ ಆಗ ಗಡಿಭಾಗದಲ್ಲಿ ಚುನಾವಣೆಯ ಸಮಯದಲ್ಲಿ ಇದ್ದಿರಿ. ತಾವು ಬಾಲ್ಕಿ, ಬಸವಕಲ್ಯಾಣ ಮುಂತಾದ ಗಡಿಭಾಗದ ಕಡೆ ಉಸ್ತುವಾರಿಯಾಗಿ ಚುನಾವಣೆ ಸಲುವಾಗಿ ಇದ್ದಿರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಅದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಕಳೆದ ಒಂದೂವರೆ ತಿಂಗಳಿನಲ್ಲಿ ಎರಡು ಬಾರಿ ಬೀದರ್‌ಗೆ ಹೋಗಿದ್ದರು. ಚುನಾವಣೆಯ ಪ್ರಕ್ರಿಯೆ ಆದಮೇಲೆ ಒಂದು ಸಾರಿ ಆನಂತರ ಚುನಾವಣಾ ಪ್ರಚಾರಕ್ಕಾಗಿ ಒಂದು ಸಾರಿ ಹೋಗಿದ್ದರು. ಮೊದಲಸಾರಿ ಹೋಗಿದ್ದಾಗ ರೈತರು, ರೈತರ ಮುಖಂಡರು ಸಂಬಂಧಪಟ್ಟ ಶಾಸಕರುಗಳು ಮತ್ತು ಅಧಿಕಾರಿಗಳೂ ಸಹ ಏನಾಗಿದೆ ಎಂಬ ಬಗ್ಗೆ ಸೂಚನೆ ಹೇಳಿಕೆಯನ್ನು ಕೊಟ್ಟರು. ಅಷ್ಟೊತ್ತಿಗೆ ಪತ್ರಿಕೆಗಳಲ್ಲಿ ಒಬ್ಬರು ಸತ್ತಿದ್ದಾರೆಂದು ವರದಿಯಾಯಿತು. ಇದು ನಿಜವೇ ಎಂಬ ಬಗ್ಗೆ ವರದಿಯನ್ನು ಕಳುಹಿಸಬೇಕೆಂದು ಜಿಲ್ಲಾಧಿಕಾರಿಯವರಿಗೆ ಕೇಳಿದ್ದೆವು. ಅನಂತರ ಚುನಾವಣಾ ಪ್ರಚಾರಕ್ಕೆ ಹೋದಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಕರೆಸಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನೂ ಆ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಜೊತೆಯಲ್ಲಿದ್ದೆ. ಅದಕ್ಕಾಗಿ ಇದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಹೋಗಿದ್ದು ಬೇರೆ ಕೆಲಸಕ್ಕಾಗಿ. ಈ ಕೆಲಸಕ್ಕಾಗಿ ಹೋಗಿದ್ದಿರಾ? ಗಡಿಭಾಗದ ಮರಾಠಿಯವರ ಓಟುಗಳನ್ನೆಲ್ಲಾ ಒಂದು ಕಡೆ

ಸೇರಿಸಬೇಕು ಎಂದು ಅವರುಗಳು ಅಲ್ಲಿ ಇದ್ದರು. ನಮ್ಮ ಕರ್ನಾಟಕದ ಕಡೆ ಬರಲೇ ಇಲ್ಲ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಯಾವ ಉದ್ದೇಶಕ್ಕಾಗಿ ಎಲ್ಲೆಲ್ಲಿ ಪ್ರವಾಸ ಮಾಡಿದರೋ ಅದೇ ಉದ್ದೇಶಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರೂ ಪ್ರವಾಸ ಮಾಡಿದ್ದಾರೆ. ಬೀದರ್‌ಗೆ ಸಹ ಹೋಗಿದ್ದಾರೆ. ದಿನಾಂಕ: 9-12-97ರಂದು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಾಗಿರುವ ಬೆಳೆ ಹಾನಿಯ ಬಗ್ಗೆ ವರದಿಯನ್ನು ತರಿಸಿರತಕ್ಕದ್ದು ನನ್ನ ಮುಂದಿರುವ ದಾಖಲೆಗಳಿಂದ ವ್ಯಕ್ತವಾಗುತ್ತಿದೆ. ಮುಖ್ಯಮಂತ್ರಿಯವರು ಚುನಾವಣೆಯ ಸಲುವಾಗಿ ಮಾತ್ರ ಆ ಜಿಲ್ಲೆಗಳಿಗೆ ಹೋಗಿದ್ದರು ಎನ್ನತಕ್ಕದ್ದು ಸರಿಯಲ್ಲ. ಬೇರೆ ಸಂದರ್ಭದಲ್ಲೂ ಮುಖ್ಯ ಮಂತ್ರಿಯವರು ಅಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಗಮನಹರಿಸಿದ್ದಾರೆ. ಇದನ್ನೇ ಅನುಸರಿಸಿ ಮುಖ್ಯಕಾರ್ಯದರ್ಶಿಯವರೂ ಸಹ 12-12-97ರಂದು ಅಧಿಕಾರಿಗಳ ಸಭೆಯನ್ನು ಕರೆದು ಚರ್ಚೆ ಮಾಡಿದ್ದಾರೆ. ಅದರ ಎಕ್ಸ್‌ಟ್ರಾಕ್ಟ್ ಅನ್ನು ಇಲ್ಲಿ ಓದುತ್ತಿದ್ದೇನೆ. ಕೃಷಿ ಮತ್ತು ತೋಟಗಾರಿಕಾ ಇಲಾಖಾ ಕಾರ್ಯದರ್ಶಿಯವರು ರಾಜ್ಯದ ಬೆಳೆ ಪರಿಸ್ಥಿತಿಯನ್ನು ವಿವರಿಸುತ್ತಾ, ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆಯು ಶೇಕಡ 75ರಿಂದ 80ರಷ್ಟು ಹಾನಿಯಾಗಿದ್ದು, ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶೇಂಗಾ ಬೆಳೆಯು ಶೇಖಡ 70ರಿಂದ 80ರಷ್ಟು ಹಾನಿಯಾಗಿರುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು. ಅಂದರೆ ಮುಖ್ಯಕಾರ್ಯದರ್ಶಿಯವರು ನಡೆಸಿರುವ ಸಭೆಯಲ್ಲೂ ಸಹ ಇದರ ಬಗ್ಗೆ ಚರ್ಚೆಯಾಗಿ ಅವರೂ ಸಹ ಇದರ ಬಗ್ಗೆ ಪರಿಶೀಲನೆ ನಡೆಸಿದ್ದಾರೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಏಕೆಂದರೆ ಜಿಲ್ಲಾಧಿಕಾರಿಯವರು ಏನೂ ಮಾಡಲಿಲ್ಲ, ಮುಖ್ಯಕಾರ್ಯದರ್ಶಿಯವರು ಏತಕ್ಕಿದ್ದಾರೆ ಎಂದು ಹೇಳಿದ್ದಾರೆ. ಅವರೇನು ಕ್ರಮ ತೆಗೆದುಕೊಂಡಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಮುಖ್ಯಕಾರ್ಯದರ್ಶಿಯಾದಿಯಾಗಿ, ಕಾರ್ಯದರ್ಶಿಗಳಾದಿಯಾಗಿ ಎಲ್ಲರೂ ಸಹ ಅದರ ಬಗ್ಗೆ ಶ್ರದ್ಧೆಯನ್ನು ವಹಿಸಿದ್ದಾರೆ. ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಆಲೋಚನೆ ಮಾಡಿದ್ದಾರೆ. ಕ್ರಮ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನಾ ಖರ್ಗೆ: ಅವರು ಏನೇನು ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಹೇಳಿ? ಪರಿಹಾರ ಎಷ್ಟು ಕೊಟ್ಟಿರಿ? ಸತ್ತವರಿಗೆ ಪರಿಹಾರವೆಷ್ಟು ಕೊಟ್ಟಿರಿ? ಯಾವ್ಯಾವ ಊರಿಗೆ ಭೇಟಿ ನೀಡಿ ಏನೇನು ಪರಿಶೀಲನೆ ಮಾಡಿದ್ದೀರಿ? ಏನು ಕ್ರಮ ಎನ್ನುವುದು ಗೊತ್ತಗಬೇಕಲ್ಲವೇ? ಮಾಡಿದ್ದಾರೆ, ಮಾಡಿದ್ದಾರೆ ಎಂದು ಸುಮ್ಮನೆ ಹೇಳಿದರೆ ಹೇಗೆ? ಎಕರೆವಾರು ಇಷ್ಟು ಪರಿಹಾರ ಕೊಟ್ಟಿದ್ದೇವೆ, ಸತ್ತವರಿಗೆ ಒಂದು ಲಕ್ಷ ಪರಿಹಾರಕೊಟ್ಟಿದ್ದೇವೆ, ನ್ಯಾಚುರಲ್ ಕೆಲಾಮಿಟಿ ಫಂಡ್‌ಗೆ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, ಇಂಥ ದಿನಾಂಕ ಮಾಡಿದ್ದೇವೆ, ಇಂಥ ಸರ್ಕಾರದ ಆದೇಶ ಇದೆ, ಎಂಬ

ಬಗ್ಗೆ ಮಾಹಿತಿ ಕೊಡಿ.

ಶ್ರೀ ಸಿ.ಬೈರೇಗೌಡ: ತಾವು ದಯಮಾಡಿ ಸ್ವಲ್ಪ ಅವಕಾಶ ಕೊಟ್ಟರೆ ಏನೇನು ಮಾಡಿದ್ದೇವೆ ಎಂಬ ಬಗ್ಗೆ ಹೇಳುತ್ತೇನೆ. ಅಧಿಕಾರಿಗಳು ಏನೂ ಮಾಡಿಲ್ಲವೆಂದು ತಾವು ಹೇಳಿದ್ದಕ್ಕೆ ಇದನ್ನು ಹೇಳುತ್ತಿದ್ದೇನೆ. ಸರ್ಕಾರ ಮತ್ತೆ ನಾವು ಏನು ಮಾಡಿದ್ದೇವೆ ಎಂಬ ಬಗ್ಗೆ ಮುಂದೆ ಹೇಳುವವನಿದ್ದೇನೆ. ಸುಮಾರು ಒಂಭತ್ತು ಜನರು ಈ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮುಖ್ಯವಾಗಿ ಇಲ್ಲಿ ಪ್ರಸ್ತಾಪವಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಯವರ ಮತ್ತು ಪೋಲೀಸ್ ವರಿಷ್ಟರ ಮೂಲಕ ವರದಿಯನ್ನು ತರಿಸಿದ್ದೇವೆ. ಅದರ ಪ್ರಕಾರ, ಬಾಲ್ಕಿ ತಾಲ್ಲೂಕಿನ ಸಿದ್ದೇಶ್ವರ ಗ್ರಾಮದ ಶಿವರಾಜ್, ಬಾಲ್ಕಿ ತಾಲ್ಲೂಕಿನ ಕಲುವಾಡಿ ಗ್ರಾಮದ ಬಸವರಾಜ್, ಬಾಲ್ಕಿ ತಾಲ್ಲೂಕಿನ ಗುಂಟೆ ಸಿರಸಿ ಗ್ರಾಮದ ದಿಲೀಪ್‌ಕುಮಾರ್, ಮರೋಬಿ ಗ್ರಾಮದ ಶ್ರೀಮತಿ ಜಲಜಾಬಾಯಿ, ಕಾಸರ ತೂಗನ ಗ್ರಾಮದ ಪ್ರಭು, ಬಸವಕಲ್ಯಾಣ ತಾಲ್ಲೂಕಿನ ಸೋಲ್ದಾ ಗ್ರಾಮದ ಶ್ರೀಮತಿ ಲಕ್ಷ್ಮೀಬಾಯಿ, ಉಮನಾಬಾದ್ ತಾಲ್ಲೂಕಿನ ಗಾಟೇವೋರಲ್ ಗ್ರಾಮದ ವಾಮನ್‌ರಾವ್, ಬಾಲ್ಕಿ ತಾಲ್ಲೂಕಿನ ಆಲಹಳ್ಳಿ ಗ್ರಾಮದ ಭರತ್, ಬಾಲ್ಕಿ ತಾಲ್ಲೂಕಿನ ಭಂಟಾಬರದ ಶ್ರೀ ಭೋಜರಾಜ್, ಈ ಒಂಭತ್ತು ಮಂದಿ ಸಾವಿನ ಪೈಕಿ ಯಾವುದೇ ಸಾವಿಗೆ ಬೆಳೆಗಳ ವಿಫಲತೆ ಮಾತ್ರವೇ ಕಾರಣವೆಂಬುದಾಗಿ ನಿರ್ಣಾಯಕವಾಗಿ ಸಿದ್ಧಪಡಿಸಲು ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಯವರು ವರದಿ ಮಾಡಿರುತ್ತಾರೆ. ಆದಾಗ್ಯೂ ಶ್ರೀ ಶಿವರಾಜ್, ಪ್ರಭು, ಶ್ರೀಮತಿ ಲಕ್ಷ್ಮಿಬಾಯಿ ಇವರುಗಳ ಸಾವಿಗೆ ಬೆಳೆಗಳ ವಿಫಲತೆಯು ಮುಖ್ಯವಾದ ಒಂದು ಕಾರಣವೆಂಬ ಸಂದೇಹ ಲಾಭವನ್ನು ನೀಡಬಹುದು. ಶ್ರೀ ಶಿವರಾಜ್‌ರವರ ಪ್ರಕರಣದಲ್ಲಿ ಸಾವಾದಮೇಲೆ 45 ದಿವಸಗಳ ನಂತರ ವಿವಾದವನ್ನು ಎತ್ತಲಾಗಿದೆ. ಶಿವರಾಜ್, ಬಸವರಾಜ್, ಭರತ್, ಭೋಜರಾಜ್ ಈ ನಾಲ್ಕು ಮಂದಿಯ ಸಾವಿನ ಪ್ರಕರಣದಲ್ಲಿ ಮರಣೋತ್ತರ ಪರೀಕ್ಷೆಯನ್ನು ನಡೆಸಿರುವುದಿಲ್ಲ. ಮತ್ತು ಪೊಲೀಸರಿಗೆ ದೂರನ್ನೂ ಸಹ ನೀಡಿರುವುದಿಲ್ಲ. ಈ ಸಾವುಗಳು ಹೇಗೆ ಸಂಭವಿಸಿತು ಎಂಬ ಬಗ್ಗೆ ವಿವಿಧ ರೀತಿಯ ಆವೃತ್ತಿಗಳು ವ್ಯಕ್ತವಾಗಿದೆ. ಕಲಮಾಡಿ ಗ್ರಾಮದ ಶ್ರೀ ಬಸವರಾಜ್‌ರವರು ವಿಷ ಸೇವನೆಯಿಂದ ಸತ್ತಿಲ್ಲವೆಂದು ಅವರ ಮಗನೇ ಹೇಳಿರುತ್ತಾನೆ. ಶ್ರೀಮತಿ ಜಲಜಬಾಯಿರವರ ಸಾವಿಗೆ ಬೆಳೆಗಳ ವಿಫಲತೆಯೇ ಕಾರಣ ಎಂಬುದನ್ನು ಅವರ ಕುಟುಂಬದ ಸದಸ್ಯರುಗಳೇ ಅಲ್ಲಗಳೆದಿರುತ್ತಾರೆ. ಶ್ರೀ ಭೋಜರಾಜ್‌ರವರ ಸಾವು ಹಾವಿನ ಕಡಿತದಿಂದ ಎಂದು ಮೊದಲು ವರದಿಯಾಗಿ ಆನಂತರ ಬದಲಾವಣೆಯಾಗಿದೆ. ಪ್ರತಿಯೊಂದು ಕೇಸ್‌ನ ವಿವರಣೆ ನನ್ನ ಹತ್ತಿರ ಇದೆ. ಅದನ್ನು ಓದಬೇಕಾಗಿದ್ದರೆ ಸಮಯ ಹೆಚ್ಚು ಬೇಕಾಗುತ್ತದೆ. ತಮಗೆ ಅದರ ಬಗ್ಗೆ ಮಾಹಿತಿ ಬೇಕಾಗಿದ್ದರೆ ಒದಗಿಸಿಕೊಡಲು ತಯಾರಾಗಿದ್ದೇನೆ. ಕೃಷಿ ಇಲಾಖೆ ಏನು ಮಾಡುತ್ತಿತ್ತು ಎಂದು ತಾವು ಕೇಳಿದ್ದೀರಿ? ಎಷ್ಟು ಸ್ಯಾಂಪಲ್ಸ್‌ನ್ನು ಅನಲೈಸ್ ಮಾಡಿದ್ದೀರಿ ಎಂದು ಕೇಳಿದ್ದೀರಿ. ಕೃಷಿ ಇಲಾಖೆ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ 264

ಮತ್ತು 109 ಸಸ್ಯ ಸಂರಕ್ಷಣಾ ರಸಾಯನಿಕ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಅದರ ಪ್ರಕಾರ, ಕ್ರಮವಾಗಿ ಗುಲ್ಬರ್ಗಾದಲ್ಲಿ 53, ಬೀದರ್‌ನಲ್ಲಿ ಕೇವಲ 2 ಮಾದರಿಗಳು ತಪ್ಪು ಛಾಪುಗಳೆಂದು ತಿಳಿದು ಬಂದಿದೆ. ಅಂದರೆ ಅವುಗಳು ಮಿಸ್‌ಬ್ರಾಂಡೆಡ್ ಎಂದು ಆಗುತ್ತದೆ. ಅದು ಸಬ್‌ಸ್ಟ್ಯಾಂಡರ್ಡ್ ಆಗುತ್ತದೆ. ಇದು ಕೆಮಿಕಲ್ ಅನ್ಯಾಲಿಸಿಸ್‌ನ, ಲ್ಯಾಬೊರೇಟರಿಗಳಿಂದ ಬಂದಿರುವ ವರದಿಯ ಪ್ರಕಾರ ವ್ಯಕ್ತವಾಗಿದೆ. ಗುಲ್ಬರ್ಗಾದಲ್ಲಿ 17 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ. ಸರ್ಕಾರ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಕಾನೂನನ್ನು ಅನುಸರಿಸಿ ಈ 17 ಪ್ರಕರಣಗಳಲ್ಲಿ ನಾವು ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಿದ್ದೇವೆ. ಚುನಾವಣೆಯ ಸಂದರ್ಭದಲ್ಲಿ ಇಲಾಖೆಯ ಎಲ್ಲಾ ಮಟ್ಟದ ಅಧಿಕಾರಿಗಳನ್ನೂ ಸಹ ಚುನಾವಣೆಯ ಕೆಲಸದಲ್ಲಿ ತೊಡಗಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಅದರ ಜೊತೆಗೆ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯ ಉಸ್ತುವಾರಿ ನೋಡಿಕೊಳ್ಳತಕ್ಕ ನಮ್ಮ ಜಂಟಿ ನಿರ್ದೇಶಕರೇನಿದ್ದಾರೆ ಅವರನ್ನು ಚುನಾವಣೆಯ ವಿಶೇಷ ಕರ್ತವ್ಯಾಧಿಕಾರಿಯಾಗಿ ಎರಡೂ ಜಿಲ್ಲೆಗೆ ಸಂಬಂಧಪಟ್ಟಂತೆ ಮುಖ್ಯ ಚುನಾವಣಾಧಿಕಾರಿಯಾಗಿ ಕೇಂದ್ರದಿಂದೇನು ಬಂದಿದ್ದರು ಅವರಿಗೆ ಸಹಾಯ ಮಾಡಲು ನೇಮಕ ಮಾಡಲಾಗಿತ್ತು. ಆದ್ದರಿಂದ ನಮ್ಮ ಅಧಿಕಾರಿಗಳು ಪೂರ್ಣ ಸಮಯವನ್ನು ಬೆಳೆ ನಾಶದ ಬಗ್ಗೆ ಕ್ರಮತೆಗೆದುಕೊಳ್ಳಲು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಅವರು ಎಷ್ಟು ಶ್ರದ್ಧೆಯಾಗಿ ಇದರ ಬಗ್ಗೆ ಗಮನ ಹರಿಸಬೇಕಾಗಿತ್ತೋ ಅಷ್ಟನ್ನು ಹರಿಸಲು ಆಗಲಿಲ್ಲ. ಅವರು ವ್ಯವಸ್ಥಿತವಾಗಿ ಇದರ ಬಗ್ಗೆ ಕೆಲಸ ಮಾಡಲು ಆಗಲಿಲ್ಲವೆಂದು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇದರ ಜೊತೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಏನು ಪರಿಹಾರ ಕೊಟ್ಟಿದ್ದೀರಿ, ಏನು ಮಾಡಿದ್ದೀರಿ ಎನ್ನತಕ್ಕಂಥಾದ್ದನ್ನು ಕೇಳಿದ್ದಾರೆ. ಈ ವಿಚಾರದ ಬಗ್ಗೆ ಇಲ್ಲಿ ಮಾತನಾಡಿದಂಥ ಪುಟ್ಟಣ್ಣಯ್ಯನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಕೇವಲ ಗುಲ್ಬರ್ಗಾ ಜಿಲ್ಲೆಯಲ್ಲಿ ಅಥವಾ ಬೀದರ್ ಜಿಲ್ಲೆಗಳಲ್ಲಿ ಮಾತ್ರ ಬೆಳೆ ನಷ್ಟವಾಗಿಲ್ಲ, ಬೇರೆ ಜಿಲ್ಲೆಗಳಲ್ಲೂ ಬೆಳೆ ನಷ್ಟವಾಗಿದೆ ಎಂದು ಹೇಳಿದರು. ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ, ಬೇರೆ ಬೇರೆ ಜಿಲ್ಲೆಗಳಲ್ಲೂ ಸಹ ಇದು ಆಗಿದೆ. ಕೋಲಾರ ಜಿಲ್ಲೆಯಲ್ಲಿ ಆಗಿದೆ, ಧಾರವಾಡ ಜಿಲ್ಲೆಯಲ್ಲಿ ಆಗಿದೆ, ಬಿಜಾಪುರ ಜಿಲ್ಲೆಯಲ್ಲಿ ಆಗಿದೆ, ಚಿತ್ರದುರ್ಗ ಜಿಲ್ಲೆಯಲ್ಲಿ ಕಡಲೆಕಾಯಿ ಬೆಳೆ ನಷ್ಟವಾಗಿದೆ, ತುಮಕೂರು ಜಿಲ್ಲೆಯಲ್ಲೂ ಸಹ ಕಡಲೆಕಾಯಿ ಬೆಳೆ ನಷ್ಟವಾಗಿದೆ. ನಾನೇ ಹೋಗಿ ಕಣ್ಣಾರೆ ನೋಡಿ ಬಂದಿದ್ದೇನೆ, ಮಂಡ್ಯ ಜಿಲ್ಲೆಯಲ್ಲಿ ಭತ್ತದ ಬೆಳೆ ನಷ್ಟವಾಗಿದೆ. ನಾಲ್ಕನೇ ತಾರೀಖಿನ ದಿವಸ ನಡೆದಂಥ ಸಚಿವ ಸಂಪುಟದ ಸಭೆಯ ಮುಂದೆ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಅಲ್ಲಿ ಇದ್ದಂಥ ನಮ್ಮ ಸಚಿವ ಸಂಪುಟದ ಮಾನ್ಯ ಮಂತ್ರಿಗಳು, ಕೇವಲ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಮಾತ್ರ ಬೆಳೆ ಹಾನಿಯಾಗಿರತಕ್ಕಂಥಾದ್ದು ಸೀಮಿತವಾಗಿಲ್ಲ, ಬೇರೆ ಬೇರೆ ಜಿಲ್ಲೆಗಳಲ್ಲೂ ಇದು ಹಾನಿಯಾಗಿರುವ ಕಾರಣದಿಂದ, ಇದರ ಬಗ್ಗೆ ವ್ಯಾಪಕವಾಗಿರತಕ್ಕಂಥ ಸರ್ವೆ ನಡೆಸಿ, ಬೇರೆ ಕಡೆಯೂ ಬೆಳೆ ನಷ್ಟವಾಗಿದ್ದರೆ,

ಅವರಿಗೂ ಸಹ ಪರಿಹಾರವನ್ನು ಕೊಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ ಎನ್ನುವ ಅಭಿಪ್ರಾಯ ಸಚಿವ ಸಂಪುಟದ ಸಭೆಯಲ್ಲಿ ವ್ಯಕ್ತವಾದುದರಿಂದ, ಈಗ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸತಕ್ಕಂಥ ಕೆಲಸ ಆಗುತ್ತಿದೆ. ಕೆಲ್ಲಾಮಿಟಿ ರಿಲೀಫ್ ಫಂಡ್‌ನಿಂದ ಕೊಡಲು ಅವಕಾಶ ಇದೆ, ಇದರಲ್ಲಿ ಕೊಡಬಹುದು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದರು. ಅದನ್ನೇ ನಾನು ಸಚಿವ ಸಂಪುಟದ ಮುಂದೆ ಇಟ್ಟಿದ್ದೇನೆ. ಇದರಿಂದ, ಕನಿಷ್ಟ ಒಂದು ಎಕರೆ ಬೆಳೆ ನಷ್ಟವಾಗಿರತಕ್ಕಂಥಾದ್ದಕ್ಕೆ 500 ರೂಪಾಯಿ ಕೊಡಬಹುದು. ಕೆಲಾಮಿಟಿ ರಿಲೀಫ್ ಫಂಡ್‌ನ ರೂಲ್ಸ್ ಅವರಿಗೂ ಗೊತ್ತಿದೆ. ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ಅದು ಸೇರುತ್ತದೆ. ಆದರೆ ನಾವು ಉಳಿದಂಥ ರೈತರನ್ನೂ ಸೇರಿಸಿ, ಆ ರೈತರು ಸಣ್ಣವರು ಇರಬಹುದು, ದೊಡ್ಡವರಾಗಿರಬಹುದು, ನಷ್ಟ ಆಗಿರತಕ್ಕಂಥವರಿಗೆ ನಾವು ಪರಿಹಾರವನ್ನು ಒದಗಿಸಬೇಕಾಗಿರತಕ್ಕಂಥ ಅವಶ್ಯಕತೆ ಇದೆ ಎನ್ನತಕ್ಕಂಥಾದ್ದರ ಬಗ್ಗೆ ನಮ್ಮ ಕಾರ್ಯದರ್ಶಿಗಳಿಗೆ ಸೂಚನೆಯನ್ನು ನೀಡಿ, ನೀವು ಇವೆಲ್ಲವನ್ನೂ ಸಮಗ್ರವಾಗಿ ಮಂಡಿಸಬೇಕು ಎನ್ನುವಂಥ ಸೂಚನೆಯನ್ನು ನಾನು ಈಗಾಗಲೇ ನೀಡಿದ್ದೇನೆ. ಇಡೀ ರಾಜ್ಯದಲ್ಲಿ ಆಗಿರತಕ್ಕಂಥ ಬೆಳೆಯ ನಷ್ಟ ಏನಿದೆ, ಇದರ ಅಂದಾಜಿನ ಮೇಲೆ ಏನು ಮುಂದಿನ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ಸಚಿವ ಸಂಪುಟ ಸಭೆಯು ನಿರ್ಧಾರ ಮಾಡುತ್ತದೆ ಎನ್ನುವಂಥ ವಿಚಾರವನ್ನು ನಾನು ಈ ಸಭೆಯ ಮುಂದೆ ಇಡುತ್ತೇನೆ. ಇನ್ನು, ಸತ್ತಿರತಕ್ಕಂಥವರಿಗೆ ಇಲ್ಲಿಯವರೆಗೆ ಪರಿಹಾರವನ್ನು ಏಕೆ ನೀಡಲಿಲ್ಲ ಎನ್ನುವ ಮುಖ್ಯವಾದ ಪ್ರಶ್ನೆಯನ್ನು ತಾವು ಕೇಳಿದ್ದೀರಿ. ಸತ್ತಿರತಕ್ಕಂಥವರು ಯಾವಯಾವ ಕಾರಣದಿಂದ ಸತ್ತಿದ್ದಾರೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಅದರ ವಿವರಗಳಿಗೆ ಹೋದರೆ ಈ ವಿಷಯದ ಗಾಂಭೀರ್ಯತೆಯನ್ನು ಡೈಲ್ಯೂಟ್ ಮಾಡಿದ ಹಾಗೆ ಆಗುತ್ತದೆ.

ಶ್ರೀ ವಿಜಯಕುಮಾರ್ ಖಂಡ್ರೆ: ಅಲ್ಲಿ ರೈತರು ಸತ್ತಿದ್ದಾರೆ ಎನ್ನುವುದನ್ನು ತಾವು ಒಪ್ಪುತ್ತೀರೋ, ಇಲ್ಲವೋ?

ಶ್ರೀ ಸಿ.ಬೈರೇಗೌಡ: ಒಂಭತ್ತು ಜನ ಸತ್ತಿದ್ದಾರೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಮತ್ತೆ ಏನು ಹೇಳಬೇಕು?

ಶ್ರೀ ವಿಜಯ್‌ಕುಮಾರ್ ಖಂಡ್ರೆ: ಏನು ವರದಿ ಬಂದಿದೆ, ಅದನ್ನು ತಾವು ಓದಿದ್ದೀರಾ?

ಶ್ರೀ ಸಿ.ಬೈರೇಗೌಡ: ಏನು ವರದಿ ಬಂದಿದೆ, ಅದನ್ನು ನಾನು ಓದಿದ್ದೇನೆ. ಮೂರು ಜನಕ್ಕೆ ಮಾತ್ರ ಬೆನಿಫಿಟ್ ಆಫ್ ಡೌಟ್ ಕೊಡಬಹುದು. ಉಳಿದವರು ಬೆಳೆ ಹಾನಿಯಿಂದ ಸತ್ತಿಲ್ಲ ಎನ್ನುವ ವರದಿ ಇದೆ. ಅದರ ವಿವರಗಳನ್ನು ಹೇಳುವುದಕ್ಕೆ ಹೋದರೆ, ವಿಷಯದ ಗಾಂಭೀರ್ಯತೆ ಹೋಗುತ್ತದೆ. ಕೆಲವರು ಬೇರೆ ಬೇರೆ

ಕಾರಣದಿಂದ ಸತ್ತಿದ್ದಾರೆ. ಅದಕ್ಕೋಸ್ಕರ ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿಲ್ಲ. ಗಂಭೀರವಾದಂಥ ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ದೇಶದಲ್ಲಿ 50 ವರ್ಷಗಳ ಸ್ವಾತಂತ್ರ್ಯದ ನಂತರವೂ ಸಹ, ನಮಗೆ ಅನ್ನ ಕೊಡುತ್ತಿರತಕ್ಕಂಥ ರೈತ, ಬಟ್ಟೆ ಕೊಡುತ್ತಿರತಕ್ಕಂಥ ರೈತನ ಪರಿಸ್ಥಿತಿ ಇವತ್ತಿನ ದಿವಸ ಈ ಮಟ್ಟಕ್ಕೆ ಬಂದಿದೆ. ಯಾವುದೇ ಸರ್ಕಾರ ಆಡಳಿತ ನಡೆಸುತ್ತಿರಲಿ, ಯಾರೇ ಅಧಿಕಾರದಲ್ಲಿ ಕುಳಿತಿರಲಿ, ನಾನು ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಇವತ್ತಿನ ದಿವಸ ಒಬ್ಬ ರೈತನಾಗಿ ನನಗೂ ಕೂಡ ಇದರ ವೇದನೆ ಇದೆ. ಅಂಥ ಪರಿಸ್ಥಿತಿಯಲ್ಲಿ ಇವತ್ತಿನ ದಿವಸ ರೈತ ಇದ್ದಾನೆ. ಆ ಗಂಭೀರತೆಯನ್ನು ಗಮನಿಸಿ ನಾನು ಬೇರೆಯವರು ಯಾವಯಾವ ಕಾರಣದಿಂದ ಸತ್ತಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತಿಲ್ಲ. ಏಕೆಂದರೆ, ಇಂಥ ಗಂಭೀರವಾದಂಥ ವಿಚಾರವನ್ನು ನಾವು ಚರ್ಚೆ ಮಾಡತಕ್ಕ ಕಾಲದಲ್ಲಿ ನಾನು ಅದರ ಸತ್ಯಾಂಶವನ್ನು ಇಲ್ಲಿ ಇಟ್ಟರೆ ಅದರ ಗಾಂಭೀರ್ಯತೆ ಕಡಿಮೆಯಾಗುತ್ತದೆ. ಆ ಕಾರಣಕ್ಕೋಸ್ಕರ ಕೆಲವರು ಯಾವ ಕಾರಣದಿಂದ ಸತ್ತಿದ್ದಾರೆ ಎನ್ನುವ ಸತ್ಯಾಂಶ ವಿವರವನ್ನು ನಾನು ಸಭೆಯ ಮುಂದೆ ಇಡುತ್ತಿಲ್ಲ. ಬೇಕಾದರೆ ತಮಗೆ ಒದಗಿಸಿಕೊಡುತ್ತೇನೆ, ತಾವು ಓದಿಕೊಳ್ಳಿ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಕೇಳಿದರು, ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿ, ಅವರು ಯಾವ ಕಾರಣದಿಂದ ಸತ್ತಿದ್ದಾರೆ ಎನ್ನುವುದು ತಿಳಿಯುತ್ತದೆ ಎಂದು ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ಅದನ್ನು ತನಿಖೆ ನಡೆಸಿ ನೂರಕ್ಕೆ ನೂರರಷ್ಟು ಅಲ್ಲದಿದ್ದರೂ ಸಹ ಅಲ್ಪಸ್ವಲ್ಪವಾದರೂ ಈ ಬೆಳೆಯ ನಷ್ಟದ ಕಾರಣದಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದು ಧೃಡಪಟ್ಟರೆ ಸತ್ತವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಏಕೆಂದರೆ, ಈಗ ಇರತಕ್ಕಂಥ ವರದಿಯ ಪ್ರಕಾರ ಮೂರು ಜನರಿಗೆ ಮಾತ್ರ ಬೆನಿಫಿಟ್ ಆಫ್ ಡೌಟ್ ಕೊಡಬಹುದು ಎಂದು ಹೇಳುತ್ತಿದ್ದೇವೆ. ಈ ಮೂರೂ ಪ್ರಕರಣಗಳಲ್ಲಿ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಉಳಿದಿರುವಂಥ ಪ್ರಕರಣಗಳ ಬಗ್ಗೆ ನಾವು ಇನ್ನೊ ಒಂದು ಸಾರಿ ವಿಚಾರಣೆಯನ್ನು ನಡೆಸಿ, ತನಿಖೆಯನ್ನು ನಡೆಸಿ, ಈ ತನಿಖೆಯಿಂದ, ಬೆಳೆ ನಾಶದಿಂದ ಸತ್ತಿರುವುದು ಸ್ಥಿರಪಟ್ಟರೆ, ಅಲ್ಲೂ ಇದೇ ರೀತಿ ವರದಿ ಬಂದರೆ ಅವರಿಗೂ ಕೂಡ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗಾಗಲೇ ಹೇಳಿದ್ದೇನೆ, ರಾಜ್ಯಾದ್ಯಂತ ವ್ಯಾಪಕವಾಗಿ ಆಗಿರತಕ್ಕಂಥ ಬೆಳೆ ನಷ್ಟದ ಅಂದಾಜನ್ನು ಅನುಸರಿಸಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಸಚಿವ ಸಂಪುಟದ ಸಭೆಯ ಮುಂದೆ ಹೋಗುವವನಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ

ಅಧ್ಯಕ್ಷರೇ, ನಾವು ಕೇಳಿದ್ದಕ್ಕೆ ಅವರಿಂದ ಸ್ಪಷ್ಟವಾದಂಥ ಉತ್ತರ ಬರಲಿಲ್ಲ. ನಾವು ಕೇಳಿದ್ದು ಏನೆಂದರೆ, ಜಿಲ್ಲಾಧಿಕಾರಿಗಳು ಮತ್ತು ಜಾಯಿಂಟ್ ಡೈರೆಕ್ಟರ್, ಅಗ್ರಿಕಲ್ಚರ್, ಇವರು ಏನು ವರದಿ ಕಳುಹಿಸಿದ್ದರು ಅದರ ಕೆಲವು ವಿಷಯಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೆವು, ಅದರ ಬಗ್ಗೆ ನೀವು ಹೇಳಿದಿರಿ. ಅಂದರೆ, ಎಷ್ಟು ಎಕರೆ ತೊಗರಿ ಹೋಯಿತು, ಜೋಳ ಹೋಯಿತು, ಸೂರ್ಯಕಾಂತಿ ಹೋಯಿತು, ಹೀಗೆ ಬೇರೆ ಬೇರೆ ಬೆಳೆಗಳು ಹಾಳಾದುದರ ಬಗ್ಗೆ ತಾವು ವಿವರಗಳನ್ನು ಕೊಟ್ಟಿದ್ದೀರಿ. ಆದರೆ ನಾವು ಕೇಳಿದ್ದು ಏನೆಂದರೆ, ಜುಲೈನಿಂದ ಅಕ್ಟೋಬರ್‌ವರೆಗೆ ಪ್ರತಿ ತಿಂಗಳು ಮಳೆ ಬರದೇ ಇದ್ದ ಕಾರಣ ನಮ್ಮ ರೈತರಿಗೆ ಯಾವ ರೀತಿ ತೊಂದರೆಯಾಯಿತು? ಈ ವ್ಯವಸಾಯದಿಂದ ಯಾವ ರೀತಿಯಾಗಿ ತೊಂದರೆಯಾಯಿತು? ಪೆಸ್ಟಿಸೈಡ್ಸ್ ಉಪಯೋಗ ಮಾಡಿದ್ದರಿಂದ ಏನೂ ಪ್ರಯೋಜನವಾಗಲಿಲ್ಲ. ಆಗ ನಿಮ್ಮ ಅಧಿಕಾರಿಗಳು ಏನು ಮಾಡಿದರು? ಜುಲೈನಿಂದ ಅಕ್ಟೋಬರ್‌ರವರೆಗೆ ಹಂತಹಂತವಾಗಿ ರೈತರು ಏನೇನು ತೊಂದರೆಗಳನ್ನು ಅನುಭವಿಸಿದರು, ಅದರ ಬಗ್ಗೆ ಚಿಂತನೆ ಮಾಡತಕ್ಕಂಥ ಕೆಲಸ ಅಧಿಕಾರಿಗಳದಾದರೂ ಆಗಿತ್ತಲ್ಲಾ. ಆಗ ನೀವು ಏನು ಕ್ರಮ ತೆಗೆದುಕೊಂಡಿರಿ ಎಂದು ನಾವು ಕೇಳಿದೆವು. ಅದಕ್ಕೆ ನೀವು ಉತ್ತರ ಹೇಳಲಿಲ್ಲ. ನಾವು ವರದಿ ತರಿಸಿಕೊಂಡಿದ್ದೇವೆ ಎಂದು ಅವರು ಹೇಳಿದರು. ವರದಿ ತರಿಸಿಕೊಂಡು ಏನು ಮಾಡಿದಿರಿ? ವರದಿ ತರಿಸಿಕೊಂಡು ಏನಾದರೂ ಪರಿಹಾರ ಕೊಟ್ಟಿರೇನು? ವರದಿ ತರಿಸಿಕೊಂಡು ಏನಾದರೂ ಕ್ರಮ ಜರುಗಿಸುತ್ತೀರಾ ಅಥವಾ ವರದಿ ತರಿಸಿಕೊಂಡು ಹಣವನ್ನೇನಾದರೂ ಬಿಡುಗಡೆ ಮಾಡಿದಿರಾ? ಏನೂ ಮಾಡಲಿಲ್ಲ. ಈ ಸಭೆಯಲ್ಲಿ ಚರ್ಚೆಗೆ ಬಂದಾಗ, ನಾವು ಕೇಳಿದಾಗ, ಎಂಟು ಜನ ಈ ರೀತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅದಕ್ಕೆ ದಯವಿಟ್ಟು ತಾವು ಈ ಕಡೆ ಗಮನ ಹರಿಸಬೇಕು ಎಂದು ತಮ್ಮ ಮುಖಾಂತರ ಇಲ್ಲಿ ಕೇಳಿದಾಗ ಈ ಮಾತನ್ನು ಹೇಳುತ್ತಿದ್ದೀರಿ.

ಶ್ರೀ ಸಿ.ಬೈರೇಗೌಡ: ಇದರಲ್ಲಿ ನಮ್ಮ ಪ್ರೆಸ್ಟೀಜ್ ಆಗಲೀ ಅಥವಾ ಬೇರೆ ಯಾವುದೇ ಆಗಲೀ ಇಲ್ಲ. ನೀವಾಗಲೀ, ನಾವಾಗಲೀ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸಬೇಕು. ಯಾರು ನೋವಿನಲ್ಲಿದ್ದಾರೆ, ಯಾರು ನಷ್ಟ ಅನುಭವಿಸಿದ್ದಾರೆ ಅವರ ನೆರವಿಗೆ ಯಾವುದೇ ಲೆಕ್ಕವಿಲ್ಲದೇ, ಯಾವುದೇ ಆಧಾರವಿಲ್ಲದೆ, ಅಂದರೆ ರಾಜಕೀಯದ ಆಧಾರ ಅಥವಾ ಮತ್ತೊಂದು ಹೀಗೆ ಯಾವುದೂ ಇಲ್ಲದೇ ಅವರ ನೆರವಿಗೆ ಬರಬೇಕಾಗಿರತಕ್ಕಂಥಾದ್ದು ಅವಶ್ಯಕ. ಸರ್ಕಾರ ಮುಕ್ತ ಮನಸ್ಸಿನಿಂದ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಒಂಭತ್ತನೇ ತಾರೀಖು ಈ ಸದನ ಸಭೆ ಸೇರಿತು. ನಾಲ್ಕನೇ ತಾರೀಖಿನ ಸಚಿವ ಸಂಪುಟ ಸಭೆಯಲ್ಲಿ ಇದು ಚರ್ಚೆಯಾಗಿತ್ತು. ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರ ಬಂದಿರಲಿಲ್ಲವೇ? ನಾಲ್ಕನೇ ತಾರೀಖಿನ ಸಭೆಯಲ್ಲಿ ಚರ್ಚೆಯಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಉಪಕಾರ ಮಾಡುವುದಕ್ಕೆ ಹೊರಟಿದ್ದೀರಿ. ಅಕಸ್ಮಾತ್ ಬೆಳೆ ನಷ್ಟದ ಕಾರಣಕ್ಕೋಸ್ಕರ ಅವರು ಸತ್ತಿಲ್ಲದಿದ್ದರೆ, ಅವರಿಗೆ ಪರಿಹಾರ

ಕೊಡಿ ಎಂದು ಈ ಕಡೆ ಇರುವವರು ಯಾರೂ ಕೇಳುತ್ತಿಲ್ಲ. ಬೇರೆ ಕಾರಣದಿಂದ ಸತ್ತಿದ್ದರೆ ನಾವು ನಿಮ್ಮನ್ನು ಕೇಳುವುದಿಲ್ಲ. ನಾನು ಹೇಳುತ್ತಿರುವುದು ಏನೆಂದರೆ, ಸ್ವತಃ ನಿಮ್ಮ ಹಾಲಿ ಕ್ಯಾಬಿನೆಟ್ ಸಚಿವರು, ಇನ್‌ಚಾರ್ಜ್ ಇರುವಂಥವರು ಸ್ಥಳಕ್ಕೆ ಹೋಗಿ ಬಂದಂಥವರು ಹೇಳುತ್ತಾರೆ, ಅಲ್ಲಿ ಸತ್ತಿರುವಂಥವರು ಬೆಳೆ ನಷ್ಟವಾಗಿದೆ ಎನ್ನುವ ಕಾರಣಕ್ಕಾಗಿ ಸತ್ತಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಇದು ಮೊದಲನೆಯದು. ಎರಡನೆಯದು, ನಿಮ್ಮ ಜಿಲ್ಲಾಧಿಕಾರಿಗಳು ಏನು ವರದಿಯನ್ನು ಕಳುಹಿಸಿದ್ದಾರೆ, ಅದನ್ನು ದಯಮಾಡಿ ನಮಗೆ ಕಳುಹಿಸಿಕೊಡಿ. ಸತ್ತದ್ದು ಏಕೆ ಎಂದು ನಿಮಗೆ ವರದಿಯನ್ನು ಕೊಟ್ಟಿದ್ದಾರೆ. ಬೀದರ್, ಗುಲ್ಬರ್ಗಾದಲ್ಲಿ ತೊಗರಿ ಬೆಳೆ ಮತ್ತು ಬೇರೆ ಬೆಳೆಗಳ ನಾಶದಿಂದ ಎಷ್ಟು ನಷ್ಟವಾಗಿದೆ, ಅವರು ಏನು ಶಿಫಾರಸ್ಸು ಮಾಡಿ ತಮಗೆ ಕಳುಹಿಸಿ ಕೊಟ್ಟಿದ್ದಾರೆ, ಅದನ್ನು ನಮಗೆ ಕಳುಹಿಸಿಕೊಡಿ. ಇಲ್ಲಿ ಪ್ರಶ್ನೆ ಇರುವುದು ಕೇವಲ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುವುದಷ್ಟೇ ಅಲ್ಲ. ಒಂದು ನಿಮ್ಮ ಸರ್ಕಾರದ ನೆಗ್ಲಿಜೆನ್ಸ್‌ನಿಂದ ಸತ್ತಿದ್ದಾರೆ ಎಂದು ವರದಿಯಾದ ಮೇಲಾದರೂ ನಿಮ್ಮಲ್ಲಿರುವ ಯಾರೇ ಒಬ್ಬ ಜಿಲ್ಲಾ ಮಂತ್ರಿಯಾಗಲೀ, ಮುಖ್ಯ ಮಂತ್ರಿಯಾಗಲೀ, ಸ್ಥಳಕ್ಕೆ ಹೋಗಿ, ಭೇಟಿ ಮಾಡಿ ತಡೆಯುವಂಥ ಪ್ರಯತ್ನ ಮಾಡಿದ್ದರೆ ಉಳಿದ ಜೀವಗಳನ್ನು ಉಳಿಸಬಹುದಾಗಿತ್ತು. ನಿಮ್ಮ ಬೇಜವಾಬ್ದಾರಿತನದಿಂದ ಒಬ್ಬರ ನಂತರ ಒಬ್ಬರಂತೆ ಹತ್ತು ಜನ ಸತ್ತಿದ್ದಾರೆ ಎನ್ನುವ ವರದಿ ಕೈ ಸೇರಿದೆ. ಅದರಲ್ಲಿ ಎಷ್ಟು ಸತ್ಯ, ಆ ವರದಿ ಏನು ಎನ್ನುವುದನ್ನು ನಮ್ಮ ಕಣ್ಣಮುಂದೆ ಇಡಿ. ಕೇವಲ ಚರ್ಚೆ ಮಾಡಿ ಯಾರೋ ಒಬ್ಬರಿಗೆ ಒಂದು ಲಕ್ಷ ರೂಪಾಯಿ ಕೊಡಿಸಿ ಹೋಗುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಅದಕ್ಕಿಂತ ಬಹಳ ಪ್ರಮುಖವಾಗಿರತಕ್ಕಂಥಾದ್ದು ಈ ಎರಡೂ ಜಿಲ್ಲೆಗಳಲ್ಲಿ ನಿರಂತರವಾಗಿ ಈ ರೀತಿ ಸಂಕಷ್ಟಕ್ಕೆ ಸಿಕ್ಕಿಕೊಂಡಿರತಕ್ಕ ರೈತರ ಬಗ್ಗೆ

3.00 ಪಿ.ಎಂ

ಇವರು ಇಷ್ಟು ಸಲಿಸಾಗಿ ಮೂರು ನಿಮಿಷದಲ್ಲಿ ಉತ್ತರ ಕೊಟ್ಟು ಬಿಡುತ್ತಾರೆ ಎಂದು ನಾನು ತಿಳಿದಿರಲಿಲ್ಲ. ಇರಲಿ ಅವರು ಬುದ್ಧಿವಂತರು ಶಾರ್ಟ್ ಆಗಿ ಉತ್ತರ ಕೊಟ್ಟಿದ್ದಾರೆ. ಅದನ್ನು ನಾನು ಕೇಳಲು ಹೋಗುವುದಿಲ್ಲ. ನನಗೆ ಇಷ್ಟು ಮಾತ್ರ ಉತ್ತರ ಕೊಡಲಿ, ನಿಮ್ಮ ಡಿಸಿ ಯವರ ವರದಿ ಬಗ್ಗೆ ನಿಮ್ಮ ಕ್ಯಾಬಿನೆಟ್ ಸಚಿವರು ಏನು ಹೇಳುತ್ತಾರೆ. ಇವರು ಏತಕ್ಕೆ ಸತ್ತಿದ್ದಾರೆ, ಡಿಸಿಯವರ ವರದಿ ನಿಜವೊ ಸುಳ್ಳೋ, ಸಮಗ್ರ ಬೆಳೆ ನಾಶವಾಗಿರುವ ರೈತರನ್ನು ಉಳಿಸಲು ನಿಮ್ಮ ಕ್ರಮಗಳು ಏನು ಎಂಬುದನ್ನು ಹೇಳಿ.

ಶ್ರೀ ವಿಜಯಕುಮಾರ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಭಾಲ್ಕಿ, ಕುಂಟೆ, ಶಿರಸಿ ವಿಷಯದಲ್ಲಿ ಇವರು ಹೇಳುತ್ತಾರೆ, ಸಾವುಗಳು ಸಂಭವಿಸಿ 40 ದಿನಗಳಾದ ಮೇಲೆ ಸರ್ಕಾರದ ಗಮನಕ್ಕೆ ತಂದಿದ್ದಾರೆ ಆದ್ದರಿಂದ ನಾವು ಇದಕ್ಕೆ ಒಪ್ಪಿಕೊಳ್ಳುವುದಿಲ್ಲ ಎಂದು. ತಡವಾಗಿ ಸರ್ಕಾರದ ಗಮನಕ್ಕೆ ತರಲು ಕಾರಣವೇನೆಂದರೆ ಅಲ್ಲಿಯ ಜನರು

ಪೊಲೀಸ್‌ನವರಿಗೆ ಹೆದರುತ್ತಾರೆ, ನಾವು ಹೇಳುವುದರಿಂದ ಪೊಲೀಸ್‌ನವರಿಂದ ನಮಗೆ ಏನಾದರೂ ತೊಂದರೆಗಳು ಉಂಟಾಗಬಹುದು ಎಂದು ಹೆದರಿ ಅವರು ಅಮಾಯಕತೆಯಿಂದ ರಿಪೋರ್ಟ್ ಮಾಡಲಿಲ್ಲ ಅಷ್ಟೆ. ಅಲ್ಲದೆ ಅಲ್ಲಿಗೆ ಪತ್ರಕರ್ತರು, ದೂರದರ್ಶನದ ವರದಿಗಾರರು ಅಲ್ಲಿಗೆ ಹೋಗಿದ್ದಾರೆ, ಇದು ಸಾಲದ ಹೊರೆಯಿಂದ ಆದ ಆತ್ಮಹತ್ಯೆ ಎಂದು ವರದಿ ಮಾಡಿದ್ದಾರೆ. ಇಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ ಯಾವ ಮನೆಯಲ್ಲಿ ಸಾವುಗಳು ಸಂಭವಿಸಿರುತ್ತವೆ ಆ ಕುಟುಂಬದವರನ್ನು ಹೆದರಿಸುತ್ತಾರೆ, ಆ ರೈತರು ಇವರಿಂದ ಏನಾದರೂ ತೊಂದರೆಗಳು ಆಗುತ್ತವೆ ಎಂದು ಹೆದರಿ ರಿಪೋರ್ಟ್ ಮಾಡುವುದೇ ಇಲ್ಲ. ಬೇರೆ ಕೇಸ್‌ನಲ್ಲಿ ಪೊಲೀಸರು ರೈತರನ್ನು ಹೆದರಿಸಿ ಒತ್ತಾಯ ಮಾಡಿ ಆ ಕುಟುಂಬಗಳಿಂದ ಬೇರೆ ಬೇರೆ ತರಹದ ವರದಿಗಳನ್ನು ಬರೆದುಕೊಂಡಿದ್ದಾರೆ. ಈಗ ಸರ್ಕಾರ ಆತ್ಮಹತ್ಯೆಯನ್ನು ಒಪ್ಪಿಕೊಳ್ಳುವುದು ಹೋಗಲಿ, ಅದನ್ನು ಮುಚ್ಚಲು ಪ್ರಯತ್ನಮಾಡುತ್ತಿದ್ದಾರೆ. ಇದು ಆತ್ಮಹತ್ಯೆಗಿಂತ ದೊಡ್ಡ ಕ್ರೈಮ್ ಆಗಿದೆ ಎಂದು ನಾನು ಹೇಳುತ್ತೇನೆ. ತಾವು ಒಂದು ವೇಳೆ ಹೀಗೆ ಏನಾದರೂ ಆತ್ಮಹತ್ಯೆಯ ಪ್ರಕರಣವನ್ನು ಮುಚ್ಚಿಸಲು ಹೊರಟರೆ ಇಡೀ ಬೀದರ್ ಜಿಲ್ಲೆಯ ಕಾನೂನು ವ್ಯವಸ್ಥೆ ಹಾಳಾಗುತ್ತದೆ. ಜನ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಹಿಂದು-ಮುಂದು ನೋಡುವುದಿಲ್ಲ. ಈಗಾಗಲೇ 40,50 ಜನ ಪ್ರತಿಭಟನೆಯಲ್ಲಿ ಭಾಗವಹಿಸಿ ಅರ್ಧ ಗಂಟೆಯವರೆಗೆ ಡಿಸಿ ಯವರ ಆಫೀಸ್‌ನಲ್ಲಿ ಧರಣಿ ಕುಳಿತಿದ್ದಾರೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ದಯವಿಟ್ಟು ತಾವು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಿ. ಅವರಿಗೆ ಪರಿಹಾರಕೊಡಬೇಕೆಂದು ನಾನು ಹೇಳುತ್ತೇನೆ. ಬೇರೆ ಜಿಲ್ಲೆಗಳಲ್ಲಿ ಇಂಥ ಪರಿಸ್ಥಿತಿ ಬಂದಾಗ, ಅಲ್ಲಿ ಹೀಗೆ ಆಗಿದೆ, ಇಲ್ಲಿ ಹೀಗೆ ಆಗಿದೆ ಎಲ್ಲ ಕಡೆ ಕೊಡಲು ಹೇಗೆ ಸಾಧ್ಯ ಎಂದು ತಾವು ಹೇಳುತ್ತಿದ್ದೀರಿ. ಆದರೆ ಈಗ ಬೀದರ್ ಜಿಲ್ಲೆಯಲ್ಲಿ ಮಾತ್ರ ಆತ್ಮಹತ್ಯೆಗಳು ಆಗಿವೆ. ಬೀಧರ್ ಜಿಲ್ಲೆಯ ಜನರು ಬರಗಾಲವನ್ನು ಪದೇ ಪದೇ ಎದುರಿಸುತ್ತಾ ಇರುತ್ತಾರೆ. ನಾಲ್ಕು-ಐದು ವರ್ಷಕ್ಕೊಮ್ಮೆ ಬರಗಾಲವನ್ನು ಎದುರಿಸುತ್ತಾ ಇದ್ದಾರೆ. ಆದರೆ ಇಷ್ಟೊಂದು ಕಠೋರವಾದ ಪರಿಸ್ಥಿತಿ ಯಾವಾಗಲೂ ಇರಲಿಲ್ಲ. ಔಷಧಿಗಳನ್ನು ಹೊಡೆಯಲು ಸಾವಿರಾರು ರೂಪಾಯಿಗಳ ಸಾಲವನ್ನು ಮಾಡಿದ್ದಾರೆ. ಆ ಸಾಲದ ಹೊರೆ ಅತಿ ಹೆಚ್ಚಾಗಿದ್ದರಿಂದ ಇಂಥ ಗಂಭೀರ ಪರಿಸ್ಥಿತಿ ಬಂದಿದೆ. ಇಲ್ಲಿ ಶೇ.92 ಡ್ರೈಲ್ಯಾಂಡ್ ಇದೆ, ಬರಿ ಶೇ.8ರಷ್ಟು ಮಾತ್ರ ಇರಿಗೇಷನ್ ಇದೆ. ಶೇ.42 ಡ್ರೈಲ್ಯಾಂಡ್‌ನಲ್ಲಿ ಶೇ.95ರಷ್ಟು ಬೆಳೆ ನಾಶವಾಗಿ ಹೋಗಿವೆ. ಇಷ್ಟೊಂದು ಕಷ್ಟದ ಪರಿಸ್ಥಿತಿ ಯಾವಾಗಲೂ ಇರಲಿಲ್ಲ. ಆದ್ದರಿಂದ ತಾವು ಬೀದರ್ ಜಿಲ್ಲೆಯ ಬಗ್ಗೆ ವಿಶೇಷ ಗಮನ ಕೊಟ್ಟು ಏನಾದರೂ ಒಂದು ರಿಲೀಫ್ ಮಾಡಬೇಕು ಎಂದು ಸಭಾಧ್ಯಕ್ಷರ ಮುಖಾಂತರ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಕೆಲವು ಮಹತ್ವದ ಪ್ರಶ್ನೆಗಳನ್ನು ಕೇಳಿದ್ದೇನೆ, ಅದಕ್ಕೆ ತಮ್ಮಿಂದ ಸರಿಯಾದ ಉತ್ತರ ಬರಲಿಲ್ಲ. ಈ ಕಳಪೆ ಕ್ರಿಮಿನಾಶಕಗಳನ್ನು ಮಾರಾಟ

ಮಾಡಿದವರ ಬಗ್ಗೆ, ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ನೀವು ಉತ್ತರ ಕೊಡುತ್ತಲೇ ಇಲ್ಲ.

ಶ್ರೀ ಸಿ. ಭೈರೇಗೌಡ: ಮಾನ್ಯ ಖರ್ಗೆಯವರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ ಅದನ್ನು ತಾವು ದಯವಿಟ್ಟು ಕೇಳಿ, ನಂತರ ಉತ್ತರ ಕೊಡುತ್ತೇನೆ.

ಶ್ರೀ ಸೈಯದ್ ಜುಲ್ಫಿಕರ್ ಹಷ್ಮಿ: ಮಾನ್ಯ ಅಧಕ್ಯರೇ, ಇವರ ಡೆಪ್ಯುಟಿ ಕಮಿಷನರ್‌ರವರು, ಇವರ ಮಂತ್ರಿಗಳ ಒತ್ತಾಯದಿಂದ ವರದಿಯನ್ನು ಕೊಟ್ಟಿದ್ದಾರೆ. ಈ ಇಶ್ಯೂವನ್ನು ಮುಗಿಸಬೇಕು ಎಂದು ಮಾಡಿದ್ದಾರೆ. ಈ ಡಿಸಿ ಯವರು ಕೊಟ್ಟ ವರದಿಯೇ ಮೊದಲು ತಪ್ಪಾಗಿದೆ.

ಶ್ರೀ ಸಿ. ಭೈರೇಗೌಡ: ಮಂತ್ರಿಗಳ ಒತ್ತಾಯದಿಂದ ವರದಿಯನ್ನು ಕೊಟ್ಟಿದ್ದಾರೆ ಎನ್ನುವುದನ್ನು ನಾನು ಖಂಡಿತವಾಗಿ ನಿರಾಕರಿಸುತ್ತೇನೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ: ಈ ಡಿಸಿಯವರ ವರದಿಪ್ರಕಾರ ಕೇವಲ ಮೂರು ಜನ ಮಾತ್ರ ಸತ್ತಿದ್ದಾರೆ ಎಂದು ಹೇಳುತ್ತೀರಿ. ನಿಮ್ಮ ಜಿಲ್ಲಾ ಮಂತ್ರಿಗಳು 7ನೇ ಮಾರ್ಚ್‌ಗೆ ಅಲ್ಲಿ ಹೋಗಿ, ಎಲ್ಲರ ಮನೆ ಮನೆಗೆ ಹೋಗಿ 5 ಸಾವಿರ ರೂ.ಗಳ ಪರಿಹಾರ ಕೊಟ್ಟಿದ್ದಾರೆ, ಮತ್ತು ಇದು ಬೆಳೆ ನಾಶದಿಂದ ಆದ ಆತ್ಮಹತ್ಯೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಿಮ್ಮದು ನಿಜವೂ ಅವರದ್ದು ನಿಜವೂ ಮೊದಲು ಹೇಳಿ. ಅಲ್ಲಿಯ ಎಲ್ಲಾ ರೈತರು ಮುಂಬೈಗೆ ಹೈದ್ರಾಬಾದ್‌ಗೆ ಹೋಗುತ್ತಿದ್ದಾರೆ. ಅವರ ಬಗ್ಗೆ ಏನು ಮಾಡುತ್ತೀರಿ ಎಂದು ನಮಗೆ ಉತ್ತರ ಕೊಡಿ. ಅದನ್ನು ಸಮಿತಿಗೆ ಕಳುಹಿಸಿಕೊಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ, ಸತ್ತಿರತಕ್ಕ ಮೂರು ಜನರಿಗೆ ಮಾತ್ರ ಬೆನಿಫಿಟ್ ಆಫ್ ಡೌವಟ್ ಸಿಗುತ್ತದೆ, ಉಳಿದವರು ಬೇರೆ ಕಾರಣದಿಂದ ಸತ್ತಿದ್ದಾರೆ. ಅವರಿಗೆ ಕೊಡಲು ಆಗುವುದಿಲ್ಲ ಎಂದು. ನನಗೆ ಒಂದು ಕ್ಲ್ಯಾರಿಫಿಕೇಷನ್ ಕೊಡಿ, ಸತ್ತಿರತಕ್ಕ ರೈತರ ಬೆಳೆಗಳು ಏನಾದರೂ ಹಾನಯಿಗಿವೆಯೆ ಅಥವಾ ಇಲ್ಲವೇ, ಅದರ ಬಗ್ಗೆ ಮಾಹಿತಿ ಕೊಡಲಿ, ಆ ಕಾರಣದಿಂದ ಸತ್ತಿಲ್ಲ ಎಂದರೆ ಸತ್ತಿರತಕ್ಕ ಕುಟುಂಬಗಳು ವ್ಯವಸಾಯ ಕುಟುಂಬಗಳೇ, ಆ ಕುಟುಂಬಗಳು ಬೆಳೆದಂತಹ ಬೆಳೆ ನಷ್ಟವಾಗಿವೆಯೇ ಇಲ್ಲವೇ ಎಂಬುದನ್ನು ಮೊದಲು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಇವರ ರಿಪೋರ್ಟಿನಲ್ಲಿಯೇ ಇದೆ, ಇವರು ಒಂದು ಓದಿದ್ದಾರೆ, ಇನ್ನೊಂದನ್ನು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. 31-1-98ರಲ್ಲಿ ತಮ್ಮ ಡೆಪ್ಯುಟಿ ಕಮಿಷನರ್‌ರವರು ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸಿದ್ದಾರೆ.

'During the current year, this district has received poor and erratic rainfall. This had caused serious damage to the early-khariff crops. The details of loss have been reported to the State Government from time to time. Those details were also a part of the memorandum submitted to the central team which had visited our district on 1st & 2nd of November 1997 to assess the situation of drought.

After the failure of all the early kharif crops, the farmers had got hopes for Tur, the most important crop in this district, Unfortunately, tur crop has failed miserably. Crop cutting experiments have shown that the productivity has gone down by 75-80% and at many places the yield reported is less than one quintal from one hectare. ಈ ರಿಪೋರ್ಟ್‌ನ್ನು ಅವರು ನಿಮಗೆ ಸಮಯ, ಸಮಯಕ್ಕೆ ಕಳುಹಿಸಿದ್ದಾರೆ. ನವೆಂಬರ್‌ನಲ್ಲಿಯೂ ರಿಪೋರ್ಟ್ ಬಂದಿದ್ದರೂ ಕೂಡ ಮತ್ತು ನಿಮ್ಮ ಮೇಮೊರ್‍ಯಾಂಡಂನಲ್ಲಿ ಬರೆದು ಕಳುಹಿಸಿದರೂ ಕೂಡ ಪರಿಹಾರ ಕೊಡಲು ಏಕೆ ವಿಫಲವಾದಿರಿ? ನಮಗೆ ಅಸೆಸ್‌ಮೆಂಟ್ ಬೇಕು ಎಂದು ಹೇಳುತ್ತೀರಿ. ಅಸೆಸ್‌ಮೆಂಟ್ ಇಲ್ಲದೆನೆ ನೀವು ಕೇಂದ್ರ ಸರ್ಕಾರಕ್ಕೆ ಮೆಮೊರ್‍ಯಾಂಡಂ ಕಳುಹಿಸಿದ್ದೀರಾ? On what basis you have sent the memorandum to the central Government? You have neglected completely in this matter.. ನೀವು ಹೇಳುವಾಗಲಾದರೂ ಸ್ವಲ್ಪ ವೆರಿಫೈ ಮಾಡಿ ಹೇಳಿದ್ದರೆ ಪರವಾಗಿರಲಿಲ್ಲ.

A report has been obtained from the Joint director Agriculture. According to the figures, the estimated loss is about Rs.125 crores.

The reasons, in short, relate to erratic weather conditions. Firstly, the failure of early monsoon diminished the productivity by 30 to 40% and secondly the pests caused heavy damage and the productivity went down by further 30 to 40%. during the time of applying

pesticide, the weather was cloudy, though with little rain, which allowed the pests to develop and survive.

The loss is substantial and since the livelihood of lakhs of farmers is involved, the issue, may take shape of serious law and order problems. Therefore, it is requested that some relief measures must be taken by the Government as early as possible. ಲಾ ಅ್ಯಂಡ್ ಆರ್ಡರ್ ಕ್ರಿಯೇಟ್ ಆಗುತ್ತದೆ ಎನ್ನತಕ್ಕ ವಿಷಯದ ಬಗ್ಗೆ ಸ್ವತಃ ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕೊಟ್ಟರೂ ಕೂಡ, ನೀವು ಅದನ್ನು ಪರಿಶೀಲನೆ ಮಾಡುತ್ತೇವೆ. ಲಾಸ್ ಎಷ್ಟು ಆಗಿದೆ ನೋಡುತ್ತಿದ್ದೇವೆ, ಅದನ್ನು ಒಮ್ಮೆಗೆ ಕೊಡಲು ಸಾಧ್ಯವಾಗುತ್ತದೆಯೇ ಎಂದು ನೋಡುತ್ತೇವೆ ಎಂದು ಹೀಗೆ ಹೇಳುತ್ತಾ ಹೋಗುತ್ತಿದ್ದೀರಿ. ನಿಮ್ಮ ರಿಪೋರ್ಟ್‌ನ ಪ್ರಕಾರ ಡೆಪ್ಯುಟಿ ಕಮಿಷನರ್‌ರವರ ಹೇಳಿಕೆ ಪ್ರಕಾರ ನಾಲ್ಕು ತಿಂಗಳಿನಿಂದ ಕಂಟಿನ್ಯೂಯಸ್ ಆಗಿ ರಿಪೋರ್ಟ್ ಕಳುಹಿಸುತ್ತಿದ್ದಾರೆ. ಇನ್ನು ಯಾವಾಗ ನೀವು ಅಸೆಸ್ ಮಾಡುವುದು? ಅದರ ಆಧಾರದ ಮೇಲೆ ನೀವು ಗವರ್ನಮೆಂಟ್ ಆಫ ಇಂಡಿಯಾದ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಮೆಮೊರಾಂಡಂ ಸಬ್‌ಮಿಟ್ ಮಾಡಿದ್ದೀರಿ. ಇಷ್ಟೆಲ್ಲಾ ಇದ್ದರೂ ಕೂಡ ಮೂರು ನಾಲ್ಕು ತಿಂಗಳಿನಿಂದ ನೀವು ಡಿಲೇ ಮಾಡಿ ಇವತ್ತು ತರಾತುರಿಯಾಗಿ ನಾವು ಕ್ಯಾಬಿನೆಟ್‌ನಲ್ಲಿ ನಾಲ್ಕನೇ ತಾರೀಖು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ ಎಂದರೆ, ಅದಕ್ಕೆ ನೀವು ಪರ್ ಹೆಕ್ಟೇರ್‌ಗೆ ನೀವು ಎಷ್ಟು ಕಾಂಪನ್‌ಸೇಷನ್ ಕೊಡುತ್ತೀರಿ ಎನ್ನುವುದೂ ಕೂಡ ಡಿಕ್ಲೇರ್ ಮಾಡಬೇಕು. ಅದನ್ನು ನಾನು ಐದು ನೂರು ಹೇಳಿದ್ದೇನೆ, ಮುನ್ನೂರು ಹೇಳಿದ್ದೇನೆಂದು ಹೇಳುವುದು ಅಲ್ಲ. ನಿರ್ಣಯವಾಗಿ, ಅವರ ಕೈಗೆ ಹಣ ತಲುಪಿದರೆ that is the decision. ಈವತ್ತು ನಾವು ಕೇಳುತ್ತಿದ್ದೇವೆಂದು ಪರ್ ಹೆಕ್ಟೇರ್‌ಗೆ 500 ರೂಪಾಯಿ ರೆಕಮೆಂಡ್ ಮಾಡಿದ್ದೇನೆಂದು ನೀವು ಹೇಳಿದ್ದೀರಿ.

ಶ್ರೀ ಸಿ.ಬೈರೇಗೌಡ: ಐದು ನೂರು ರೂಪಾಯಿ ಪರ್ ಹೆಕ್ಟೇರ್‌ಗೆ ಕೊಟ್ಟಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಜಿ.ಓ.ಮಾಡುವುದು ನಿಮ್ಮ ಕೈಯಲ್ಲಿದೆ. ಅದಕ್ಕೆ ಗವರ್ನ್‌ಮೆಂಟ್ ಆಫ್ ಇಂಡಿಯಾದ ಅಪ್ರೂವಲ್ ಬೇಕಾಗಿಲ್ಲ. ನೀವು ಎಷ್ಟೇ ಕೊಡಿ ಅವರು ಕೊಡುವ ಹಣ ಅಷ್ಟೇ ಕೊಡುತ್ತಾರೆ. ನೀವು ಅದನ್ನು ಕಾಂಪನ್‌ಸೇಷನ್ ಅನೌನ್ಸ್ ಮಾಡಿದರೆ ಅವರು ಬೇಡವೆಂದು ಹೇಳುವುದಿಲ್ಲ. ಏಕೆಂದರೆ ಅವರು ಕೊಡುವ ಹಣ ಐದುವರ್ಷಗಳಿಗೆ ಏನು ನಿಗದಿ ಮಾಡಿರುತ್ತಾರೆ, ಆ ಹಣ ಮಾತ್ರ ಖಾಯಂ ಆಗಿರುತ್ತದೆ. ಆದರೆ ಅದಕ್ಕಿಂತ ಹೆಚ್ಚಿಗೆ ನೀವು ರೈತರಿಗೆ ಕೊಡುತ್ತೀರೆಂದರೆ ನೀವು ಕೊಡಬೇಡಿ ಎಂದು ಕೂಡ ಹೇಳುವುದಿಲ್ಲ. ಆದ್ದರಿಂದ ಎಷ್ಟೋ ಸಲ ಜಿ.ಓ.ನ್ನು

ಪುನರ್ ಪರಿಶೀಲನೆ ಮಾಡಿ ಹೊಸ ಜಿ.ಓ. ಇಶ್ಯೂ ಮಾಡಿದ್ದಾರೆ. G.Os have been revised according to our needs. ಕಾಂಪೆನ್‌ಸೇಷನ್ ಒಂದು ಲಕ್ಷ ಕೊಡುವುದು ಮೊದಲು ಇರಲಿಲ್ಲ. ಬೇರೆ ಕಡೆ ಎಲ್ಲೂ ಕೂಡ ಇಲ್ಲ. ನಮ್ಮ ಸರ್ಕಾರ ಹಿಂದೆ ಅದನ್ನು ಮಾಡಿತ್ತು. ಅದಕ್ಕೆ ದಯವಿಟ್ಟು ನಿಮ್ಮ ಗವರ್ನಮೆಂಟ್ ಆರ್ಡರ್ ಆಗಿದೆ, ಹಿಂದಕ್ಕೆ ರೂಲ್ಸ್ ಹೀಗೆ ಇದೆ ಅದು ಇಲ್ಲ, ರೂಲ್ಸ್ ನೀವೇ ಮಾಡಿದ್ದು, ನಿಮಗೆ ಅಮೆಂಡ್ ಮಾಡುವುದಕ್ಕೆ ಅಧಿಕಾರ ಇದೆ. ಅದನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ಪುನಃ ನಾವು ರಿವೈಸ್ ಮಾಡತಕ್ಕಂತಹ ಸರ್ವ ಅಧಿಕಾರ ನಿಮಗೆ ಇದೆ. ಯಾವ ಅಡ್ಡಿ ಅಡಚಣೆಗಳು ಕೇಂದ್ರ ಸರ್ಕಾರದಿಂದ ಇಲ್ಲ ಮತ್ತು ಯಾರಿಂದಲೂ ಇಲ್ಲ ಎಂಬ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಅದರಲ್ಲಿ ಕೊಡುವುದರಲ್ಲಿ ತಾವು ವಿಫಲರಾಗಿದ್ದೀರಿ, ಇದರ ಬಗ್ಗೆ ತಾವು ಏನೂ ಮಾಡಲಿಲ್ಲ. ಎರಡನೆಯದು ಸತ್ತಿದ್ದರ ಬಗ್ಗೆ ಜಿಲ್ಲಾಧಿಕಾರಿಗಳ ವರದಿ ಪ್ರಕಾರ ಮೂರು ಜನ ಎಂದು ತಾವು ಹೇಳುತ್ತಿದ್ದೀರಿ, ಅವರು ಅಲ್ಲಿಯ ಜನ ಮತ್ತು ರೈತರು ಎಂಟು ಎಂದು ಹೇಳಿ, ಹೆಸರು, ಸಂಖ್ಯೆ ಮತ್ತು ಊರುಗಳ ವಿವರ ಕೊಟ್ಟಿದ್ದಾರೆ. ನಿಮಗೆ ಸಂಶಯವಿದ್ದರೆ ಒಂದು ಸದನ ಸಮಿತಿ ನೇಮಿಸಿ ಎಲ್ಲೆಲ್ಲಿ ಸತ್ತಿದ್ದಾರೆ, ಈ ಕ್ರಾಪ್ ಫೈಲ್ಯೂರ್ ಬಗ್ಗೆ ಮತ್ತು ತಮ್ಮ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಶಕ್ತಿ ಇಲ್ಲದೇ ಇರುವಂತಹ ಜನ ತೊಂದರೆಗೆ ಈಡಾದಂತಹ ಜನ ಎಷ್ಟು ಇದ್ದಾರೆಂದು ಗುರುತಿಸುವುದಕ್ಕೆ ಒಂದು ಸದನ ಸಮಿತಿ ಮಾಡಿ ಇದರಲ್ಲಿ ಯಾರ ಪ್ರಿಸ್ಟೀಜ್ ಇಲ್ಲ, ಅದಕ್ಕೆ ತಾವು ಸದನ ಸಮಿತಿ ಮಾಡಿ ಕಾಂಪೆನ್‌ಸೇಷನ್ ಇಮ್ಮೀಡಿಯೇಟ್‌ಲಿ ಕೊಡಿ. ಒಂದು ವೇಳೆ ಯಾರಾದರೂ ಕಾಂಪೆನ್‌ಸೇಷನ್ ಕೊಡುವುದಕ್ಕೆ ಡಿಲೇ ಮಾಡಿದ್ದರೆ, ಈ ಪ್ರೋಸೆಸ್‌ನಲ್ಲಿ ಡಿಲೇ ಮಾಡಿದ ಅಧಿಕಾರಿ ಮೇಲೆ ಕ್ರಮ ಜರುಗಿಸಿ. ಅವರದ್ದು ಏನೂ ತಪ್ಪಿಲ್ಲವೆಂದು ಹೇಳುವುದಕ್ಕೆ ಹೋಗಬೇಡಿ. ಈ ಎಲ್ಲಾ ರಿಪೋರ್ಟ್ ಇರತಕ್ಕಂಥದ್ದು ನೀವು ಮಂಡಿಸತಕ್ಕಂಥದ್ದು only in the month of January and February 4th. ಇದನ್ನು ಬಿಟ್ಟು ಯಾವುದನ್ನೂ ಕೂಡ ನೀವು ಗಮನಕ್ಕೆ ತೆಗೆದುಕೊಂಡಿಲ್ಲ, ಮತ್ತು ಯಾವ ರಿಪೋರ್ಟ್ ಕೂಡ ನಿಮ್ಮ ಮುಂದೆ ಇಲ್ಲ. ಆ ಅಕ್ರಮದ ಬಗ್ಗೆ ನೀವು ಏನೂ ಹೇಳಲಿಲ್ಲ. ಅದಕ್ಕೆ ದಯವಿಟ್ಟು ಅಧ್ಯಕ್ಷರೆ, ನಾನು ತಮಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈಗ ಸದನ ಸಮಿತಿ ಮಾಡಿ ಎಲ್ಲೆಲ್ಲಿ ಸತ್ತಿದ್ದಾರೆ ಅವರಿಗೆ ಕಾಂಪೆನ್‌ಸೇಷನ್ ಎಷ್ಟು ಕೊಡಬೇಕು ಎನ್ನುವುದರ ಬಗ್ಗೆ, ಪರ್ ಹೆಕ್ಟೇರ್ ಎಷ್ಟು ಕಾಂಪೆನ್‌ಸೇಷನ್ ಕೊಡಬೇಕು ಎಂಬ ಬಗ್ಗೆ ಆಗಬೇಕು. ತಕ್ಷಣ ಅವರಿಗೆ ಬೇಕಾದರೆ ಒಂದೊಂದು ಸಾವಿರ ರೂಪಾಯಿ ಕೊಡಿ, ಆ ಮೇಲೆ ಸದನ ಸಮಿತಿ ರಿಪೋರ್ಟ್ ಬಂದ ಮೇಲೆ ಅದರ ಆಧಾರದ ಮೇಲೆ ಏನು ಕೊಡುತ್ತೀರಿ ಎನ್ನತಕ್ಕಂತಹ ನಿರ್ಣಯವನ್ನು ತೆಗೆದುಕೊಂಡು ಈ ಸದನದಲ್ಲಿ ಮಂಡಿಸಿ. ಆ ನಿರ್ಣಯವನ್ನು ತಾವು ತೆಗೆದುಕೊಳ್ಳಿ, ಮತ್ತು ಯಾರಾದರೂ ಅಧಿಕಾರಿಗಳು ವಿಫಲರಾಗಿದ್ದರೆ ಅವರ ಮೇಲೆ ಕ್ರಮ ಜರುಗಿಸಿ. ಯಾರು ಜಿಲ್ಲಾಧಿಕಾರಿಗಳು ಒಂದು ರಿಪೋರ್ಟ್ ಆ ರೀತಿಯಾಗಿ, ಉಸ್ತುವಾರಿ ಸಚಿವರಾದ ಮಿರಾಜುದ್ದೀನ್ ಪಾಟೀಲರೂ ಕೂಡ ಹೇಳಿದ್ದಾರೆ. ಅಲ್ಲಿ

ಕ್ರಾಪ್ ಫೈಲ್ಯೂರ್ ಆದ ಕಾರಣ ಅವರು ಸತ್ತಿದ್ದಾರೆಂದು ಅವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆ ಸ್ಟೇಟ್‌ಮೆಂಟ್ ನಾನು ಹೇಳಿದ್ದು ಸರಿ ಇಲ್ಲ ಅಂದರೆ, ಏಕೆಂದರೆ ಅನೇಕ ಸಾರಿ ನಾವು ಬೋಗಸ್ ಕ್ಲೇಮ್ ಮಾಡಿದರೂ ಕೊಡಬೇಕೆಂದು ಏನೂ ಇಲ್ಲ. ಅದಕ್ಕೆ ಅದು ಸರಿ ಅಲ್ಲ, ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಿದರೂ ತಾವು ಸ್ಪಷ್ಟ ಪಡಿಸಿ, ನಾನು ಹೇಳಿದ್ದು ಆ ರೀತಿಯಾಗಿಲ್ಲ , ನಾನು 5,000 ರೂಪಾಯಿ ಕೊಟ್ಟಿರಲಿಲ್ಲ, ಕೊಡುವುದಕ್ಕೆ ಹೋಗಿಲ್ಲ ಎನ್ನುವ ಮಾತು ಆದರೂ ಬರಬೇಕು. ಅದನ್ನು ಬಿಟ್ಟು ಒಂದು ಕಡೆ ನೀವು ಸತ್ತಿದ್ದಾರೆಂದು ಒಪ್ಪಿಕೊಳ್ಳುತ್ತೀರಿ, ಇನ್ನೊಂದು ಕಡೆ ಹಣ ಬಿಡುಗಡೆ ಮಾಡುತ್ತೀರಿ, ನಾವು ಕೇಳಿದಾಗ ಮಾತ್ರ ಮೂರು ಜನ ಸತ್ತಿದ್ದಾರೆ ಇನ್ನು ಏಳು ಜನ ಬೇರೆ ಕಾರಣಗಳಿಂದ ಸತ್ತಿದ್ದಾರೆಂದು ಹೇಳುತ್ತೀರಿ. I demand that a House committee be constituted,... ನೀವೇ ಹೌಸ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ, ಅಲ್ಲಿಗೆ ಕಳುಹಿಸಿ ಆ ವರದಿ ತರಿಸಿ ಎಲ್ಲರಿಗೂ ಪರಿಹಾರ ಕೊಡತಕ್ಕಂತಹ ವ್ಯವಸ್ಥೆ ಮಾಡಬೇಕೆಂದು ನಾನು ನಿಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಯಾರ್‍ಯಾರು ಯಾವ ಕಾರಣಕ್ಕೋಸ್ಕರ ಸತ್ತಿದ್ದಾರೆ ಎನ್ನತಕ್ಕಂತಹ ಅಧಿಕೃತವಾಗಿ ಬಂದಿರತಕ್ಕ ವರದಿ ಇದೆ. ಅದನ್ನು ಉದ್ದೇಶಪೂರ್ವಕವಾಗಿ ಸಭೆಯ ಮುಂದೆ ಓದುವುದು ಬೇಡವೆಂದು ಇದ್ದೆ. ಅದರ ಗಾಂಭೀರ್ಯತೆ ಹೋಗುತ್ತದೆ, ನಾವು ಚರ್ಚೆ ಮಾಡತಕ್ಕಂತಹ ವಿಚಾರದ ಗಾಂಭೀರ್ಯತೆ ಹೋಗುತ್ತದೆ ಅದಕ್ಕೋಸ್ಕರ ಇದರ ವಿವರಕ್ಕೆ ಹೋಗುವುದು ಬೇಡವೆಂದು ಇದ್ದೆ. ನನ್ನ ಮುಂದೆ ಇರತಕ್ಕ ವರದಿ ಪ್ರಕಾರ ಮೂರು ಜನರಿಗೆ ಬೆನಿಫಿಟ್ ಆಫ್ ಡೌಟ್ ಆಗಿ ಆಗಿದೆ, ಪೂರ್ತಿಯಾಗಿ ಕ್ರಾಪ್ ಫೈಲ್ಯೂರ್ ಅಲ್ಲವೆಂದು. ಆದರೂ ಸಹ ಬೆನಿಫಿಟ್ ಆಫ್ ಡೌಟ್‌ನಲ್ಲಿ ಕೊಡಬಹುದು ಎಂದು ಹೇಳಿ ಅದಕ್ಕೋಸ್ಕರ ಒಂದೊಂದು ಲಕ್ಷ ರೂಪಾಯಿ ನಾವು ಅವರಿಗೆ ಕಾಂಪೆನ್‌ಸೇಷನ್ ಕೊಟ್ಟೆವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಂಶಯವಾದರೂ ಇದೆಯೆ?

ಶ್ರೀ ಸಿ.ಭೈರೇಗೌಡ: ಅದಕ್ಕೋಸ್ಕರ ಒಂದೊಂದು ಲಕ್ಷ ರೂಪಾಯಿ ಅವರಿಗೆ ಕೊಡುತ್ತಿದ್ದೇವೆ. ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಈಗ ಉಳಿದಿರತಕ್ಕಂಥವರು ವಿಚಾರದಲ್ಲಿ ಕೂಡ ಮಾನ್ಯ ಯಡಿಯೂರಪ್ಪನವರು ಸಿಓಡಿಗೆ ಕಳುಹಿಸಿ ಎಂದು ಹೇಳಿದರು, ಕಳುಹಿಸುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ನಿಮ್ಮ ಕಡೆ ಎರಡು ರಿಪೋರ್ಟ್ ಬರುತ್ತಿದೆ ಒಂದು ಡೆಪ್ಯುಟಿ ಕಮಿಷನರ್ ರಿಪೋರ್ಟ್‌ನಲ್ಲಿ ಕೆಲವೇ ಕೇಸಸ್‌ನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಕೆಲವು ಕೇಸ್‌ಗಳಲ್ಲಿ ಬೇರೆ ಕಾರಣಕ್ಕಾಗಿ ಅವರು ಮಾಡಿದ್ದಾರೆ ಎಂದು ಹೇಳಿದಿರಿ, ಅದಕ್ಕೆ ನಾನು ಹೇಳಿದ್ದು, ನೀವು ಸಿಓಡಿ ಇಲ್ಲ ಜ್ಯುಡಿಷಿಯಲ್ ಪ್ರೋಬ್ ಮಾಡಿ ಎಂದು ಹೇಳಿದೆ. ಈಗ ನಾನು ಹೇಳುತ್ತೇನೆ ಇದರ ಬಗ್ಗೆ ಡೀಟೇಲ್

ಎನ್‌ಕ್ವೈರಿ ಆಗತಕ್ಕಂಥದ್ದು ನಮ್ಮೆಲ್ಲರ ಇಚ್ಛೆ. ನಿಮ್ಮ ಮೇಲೆ ಮತ್ತು ಸರ್ಕಾರದ ಮೇಲೆ ಗೂಬೆ ಕೂಡಿಸಬಾರದು ಎಂದು ನೀವು ಯಾರನ್ನೋ ಪ್ರೊಟೆಕ್ಟ್ ಮಾಡುತ್ತೀರಿ ಎಂದು ಆಗ ಬಾರದು. ಎಂಟು ಅಥವಾ ಐದು ಜನರ ಸದನದ ಸಮಿತಿ ಮಾಡಿ ನೀವು ಯಾರಿಗೆ ಅಪಾಯಿಂಟ್ ಮಾಡುತ್ತೀರಿ ಅವರಿಗೆ ನಾಮಿನೇಟ್ ಮಾಡಿ, ಆ ಕಮಿಟಿ ಕಳುಹಿಸಿ ಏನು ಕಾಂಪೆನ್‌ಸೇಷನ್ ಕೊಡಬೇಕು, ಯಾರಿಗೆ ಶಿಕ್ಷೆ ಕೊಡಬೇಕು, ಯಾರಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಪರ್ ಹೆಕ್ಟೇರ್‌ಗೆ ಎಷ್ಟು ಕಾಂಪೆನ್‌ಸೇಷನ್ ಕೊಡಬೇಕೆಂದು ಅದನ್ನು ತೀರ್ಮಾನ ತೆಗೆದುಕೊಂಡು ಮಾಡಿ. ನಾವು ಪರ್ ಹೆಕ್ಟೇರ್‌ಗೆ ಎರಡೂವರೆ ಸಾವಿರ ಕೊಡಬೇಕೆಂದು ಹೇಳಿದ್ದೇವೆ. ನೀವು ಅದನ್ನು ಎಷ್ಟು ಮಾಡಬೇಕು ಮಾಡಿ, ತೋರಿಸಿ, ಯಾವ ಕಾನೂನೂ ಕೂಡ ಅಡ್ಡಿ ಬರುವುದಿಲ್ಲ, ಅದಕ್ಕೆ ಸದನದ ಸಮಿತಿ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಎರಡೂವರೆ ಸಾವಿರ ಎಂದು ಹೇಳಿದರೂ ಸಹ ವಾಸ್ತವಿಕ ಸತ್ಯ ಸಂಗತಿಯನ್ನು ತಾವು ಒಪ್ಪಿಕೊಳ್ಳುತ್ತೀರಿ. ತಮ್ಮ ಜಿಲ್ಲಾ ಮಂತ್ರಿಗಳು ಸ್ಥಳಕ್ಕೆ ಹೋಗಿ ಬಂದಮೇಲೆ ಅವರ ಮಾತನ್ನು ನೀವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ, ಅದಕ್ಕೆ ನಾನು ಹೇಳುವುದು ಈ ಕಡೆಯವರ ಸಹಾಯ ನಿಮಗೆ ಬೇಕೆಂದರೆ ವಾಸ್ತವಿಕ ಸತ್ಯ ಸಂಗತಿ ತಿಳಿದು ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನಿಮಗೆ ಕಳಕಳಿ ಇದ್ದರೆ, ದಯಮಾಡಿ ಸದನ ಸಮಿತಿಗೆ ಒಪ್ಪಿಕೊಳ್ಳಿ. ವಾಸ್ತವಿಕ ಸತ್ಯ ಸಂಗತಿಯನ್ನು ಗಮನಕ್ಕೆ ತಂದು ನಾವು ವರದಿಯನ್ನು ಮಾಡುತ್ತೇವೆ. ಇದು ಮೊದಲನೆಯದು. ಎರಡನೆಯದು ಬಹುಶಃ ಎಲ್ಲೋ ಒಂದು ಕಡೆ ನಮ್ಮನ್ನು ಯಾರೂ 10 ಜನ ರೈತರು ಸತ್ತಿದ್ದಾರೆಂದು ಈ ಕಾರಣಕ್ಕೆ ಅದಕ್ಕೆ ಸೀಮಿತವಾಗಿ ಮಾತ್ರ ನಾವು ಮಾತನಾಡುತ್ತೇವೆ, ನಾನು ಹೇಳುವುದು ಇದರ ಜೊತೆ ನಿಮ್ಮ ಮುಖ್ಯ ಮಂತ್ರಿಗಳು ಪರಿಹಾರ ಕೊಡುವ ಬಗ್ಗೆ ಪಬ್ಲಿಕ್ಕಾಗಿ ಒಪ್ಪಿಕೊಂಡಿದ್ದಾರೆ. ಅದು ಗುಲ್ಬರ್ಗಾ, ಬೀದರ್ ಮತ್ತು ಬಿಜಾಪುರದ ಕೆಲವು ಭಾಗಗಳಲ್ಲಿ ತೊಗರಿ ಬೆಳೆ ನಾಶವಾಗಿರುವುದು. ನಿಮ್ಮ ಡೆಪ್ಯುಟಿ ಕಮಿಷನರ್‌ರವರಿಂದ ಬಂದಿರುವ ವರದಿ ಪ್ರಕಾರ ಎಷ್ಟು ಹೆಕ್ಟೇರ್ ಬೆಳೆ ಇದಕ್ಕಾಗಿ ನಾಶವಾಗಿದೆ ಎಂದು ವರದಿ ಮಾಡಿ. ಇಲ್ಲದಿದ್ದರೆ ಏನಾಗುತ್ತದೆ, ನಾವು ಏನೋ ಚಟಕ್ಕೆ ಹೇಳಿದ ಹಾಗೆ, ಕಣ್ಣೀರು ಹಾಕಿದ ಹಾಗೆ ತಾವು ಉತ್ತರ ಕೊಟ್ಟರೆ ನಾವು ವಾಕ್‌ಔಟ್ ಮಾಡಿದರೆ ಪರಿಹಾರ ಸಿಗುವುದಿಲ್ಲ. ವಾಸ್ತವಿಕ ಸತ್ಯ ಸಂಗತಿಯನ್ನು ನೀವು ಹೇಳಿ. ಇವತ್ತು ನೀವು ಅಲ್ಲಿ ಕುಳಿತಿದ್ದೀರಿ, ನಾಳೆ ಇನ್ನೊಬ್ಬರು ಕುಳಿತುಕೊಳ್ಳುತ್ತಾರೆ. ಸತ್ಯ ಸಂಗತಿ ಏನು, ಅಲ್ಲಿ ರೈತರು ಸತ್ತಿರುವ ಬಗ್ಗೆ ಸದನ ಸಮಿತಿ ಮಾಡಿ, ಸದನ ಸಮಿತಿ ಬಗ್ಗೆ ನಿಮಗೆ ವಿಶ್ವಾಸವಿದ್ದರೆ ಅವರಿಗೆ ದಯಮಾಡಿ ಕಳುಹಿಸಿಕೊಡಿ, ವರದಿ ತಂದು ಕೊಡಲಿ, ತಾವು ಏಕೆ ಪರಿಹಾರ ಕೊಡದೆ ಇದುವರೆಗೆ ಆ ರೈತರಿಗೆ ಕಾಡಿಸುತ್ತಿದ್ದೀರಿ, ಹಿಂದೆ ನಾವು ಗುಲ್ಬರ್ಗ ಜಿಲ್ಲೆಗೆ 10 ಕೋಟಿ ರೂಪಾಯಿ ಕೊಟ್ಟಿದ್ದೆವು, ಬೆಳೆ ನಾಶವಾಗಿರುವುದನ್ನು ಡೆಪ್ಯುಟಿ ಕಮಿಷನರ್,

ಒಪ್ಪಿಕೊಂಡ ಮೇಲೆಯೂ ಸಹ ನೀವು ಭಿಕ್ಷೆ ಕೊಟ್ಟ ಹಾಗೆ 500 ರೂಪಾಯಿ ಕೊಟ್ಟರೆ ಒಂದು ಹೆಕ್ಟೇರ್‌ಗೆ ಔಷಧಿ ಸಿಂಪಡಿಸುವುದಕ್ಕೆ 1,000 ರೂಪಾಯಿ ಖರ್ಚು ಮಾಡಿದ್ದಾನೆ. ನಾನು ವಿನಂತಿ ಮಾಡುತ್ತೇನೆ, ಕನಿಷ್ಟ ಒಂದು ಹೆಕ್ಟೇರ್‌ಗೆ 2,000 ರೂಪಾಯಿ ಪರಿಹಾರವನ್ನು ಅದು ಒಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಕೊಡುವುದು ಒಳ್ಳೆಯದು. ನಿರಂತರವಾಗಿ ಕೆಲವರು ಕಳಪೆ ಮಟ್ಟದ ಕ್ರಿಮಿನಾಶಕಗಳನ್ನು ತಯಾರು ಮಾಡುತ್ತಿದ್ದಾರೆ. ಈ ರೀತಿ ಅಕ್ರಮವಾಗಿ ತಯಾರಾದ ಕಳಪೆ ಮಟ್ಟದ ಕ್ರಿಮಿನಾಶಕಗಳನ್ನು ಮುಗ್ಧ ರೈತರು ತಿಳಿದುಕೊಳ್ಳದೇನೇ ತೆಗೆದುಕೊಂಡು ಹೋಗಿ ಬೆಳೆಗಳಿಗೆ ಸಿಂಪಡಿಸುತ್ತಿದ್ದಾರೆ. ಅದರಿಂದ ರೋಗ ಹೋಗದೇನೆ ರೈತರು ತೊಂದರೆಗೆ ಒಳಗಾಗುತ್ತಿದ್ದಾರೆ. ಅಂತಹವರ ಮೇಲೆ ಕಾನೂನಿನ ಪ್ರಕಾರವಾಗಿ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ನಾನು ನೇರವಾಗಿ ಕೇಳುವುದೇನೆಂದರೆ ಜಿಲ್ಲಾಧಿಕಾರಿಗಳಿಂದ ಎಷ್ಟು ಹೆಕ್ಟೇರ್ ಲಾಸ್ ಆಗಿದೆ ಎಂದು ವರದಿ ಬಂದಿದೆ. ಅದನ್ನು ಹೇಳಿ ಅದು ರೆಕಾರ್ಡಿಗೆ ಹೋಗಲಿ. ಹಾಗೆಯೇ ಅವರಿಗೆ ಮೊದಲು ಕೊಟ್ಟ ರೀತಿಯಲ್ಲಿ ಎರಡು ಸಾವಿರ ರೂಪಾಯಿ ಪರ್ ಹೆಕ್ಟೇರ್‌ಗೆ ಪರಿಹಾರವನ್ನು ಕೊಡಿ. ಇನ್ನು ಎರಡನೆಯದಾಗಿ ನಕಲಿ ಕೀಟನಾಶಕಗಳನ್ನು ತಯಾರು ಮಾಡುವವರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ? ಮೂರನೆಯದಾಗಿ, ನಮ್ಮ ಪ್ರಕಾರ ಇವೊತ್ತು ಇದೇ ಕಾರಣಕ್ಕಾಗಿ ಹತ್ತು ಜನ ಸತ್ತಿದ್ದಾರೆ. ನೀವು ಅಲ್ಲ ಎಂದು ಹೇಳುತ್ತಿದ್ದೀರಿ. ಹಾಗಿದ್ದರೆ ಸಂತೋಷ. ಆದರೆ ವಾಸ್ತವಿಕ ಅಂಶವನ್ನು ತಿಳಿದುಕೊಂಡು ಬರುವುದಕ್ಕೋಸ್ಕರ ನೀವು ಸದನದ ಸಮಿತಿಯನ್ನು ರಚನೆ ಮಾಡಿ. ಸದನದ ಸಮಿತಿಯನ್ನು ರಚನೆ ಮಾಡುವುದಕ್ಕೆ ನೀವೇನು ಕಳೆದುಕೊಳ್ಳುತ್ತೀರಿ? ಆರು ತಿಂಗಳಿಂದ ಸದನ ಪ್ರಾರಂಭ ಆಗಿರಲಿಲ್ಲ. ನೀವು ಕಣ್ಣು ಮುಚ್ಚಿ ಕುಳಿತಿದ್ದೀರಿ. ಇವೊತ್ತು ನಾವೆಲ್ಲಾ ಸದನವನ್ನು ಪ್ರಾರಂಭ ಮಾಡಿದ್ದೇವೆ. ಏನಾದರೊಂದು ತೀರ್ಮಾನ ಮಾಡಿ ಅವರಿಗೆ ಪರಿಹಾರ ಕೊಡುವಂಥ ಒಂದು ಪ್ರಯತ್ನವನ್ನು ಮಾಡೋಣ. ಇದರಲ್ಲಿ ರಾಜಕಾರಣ ಏನು ಇದೆ? ಇದುವರೆಗೆ ನೀವು ನಿಮ್ಮ ಕರ್ತವ್ಯವನ್ನು ಮಾಡಿಲ್ಲ. ಈಗ ಕೊನೆಗಾಲದಲ್ಲಾದರೂ ನೀವು ನಿಮ್ಮ ಕರ್ತವ್ಯವನ್ನು ಮಾಡಿ. ಅದಕ್ಕೆ ಉತ್ತರ ಕೊಡಿ.

ಶ್ರೀ ಸಿ. ಭೈರೇಗೌಡ: ಮಾನ್ಯ ವಿರೋಧ ಪಕ್ಷದ ನಾಯಕರು ಸತ್ತಿರತಕ್ಕಂಥವರ ಬಗ್ಗೆ ಅನುಮಾನ ಇದ್ದರೆ ಸಿ.ಓ.ಡಿ.ಎನ್‌ಕ್ವೈರಿ ಮಾಡಿಸಿ ಎಂದು ಹೇಳಿದ್ದಾರೆ. ನಾವು ಸಿ.ಓ.ಡಿ. ತನಿಖೆಯನ್ನು ಮಾಡಿಸುವುದಕ್ಕೆ ಒಪ್ಪಿದ್ದೇವೆ. ಅಲ್ಲಿಂದ ವರದಿ ಬಂದನಂತರ ಆ ವರದಿಯಲ್ಲಿ ಇದೇ ಕಾರಣದಿಂದ ಅವರು ಸತ್ತಿದ್ದಾರೆಂದು ಇದ್ದರೆ ಅಂತಹವರಿಗೂ ಕೂಡ ನಾವು ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಇನ್ನು ಕಳಪೆ ದರ್ಜೆಯ ಔಷಧಿಗಳ ಬಗ್ಗೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಾನೂನು ಇದೆ. ಕಾನೂನಿನ ಪ್ರಕಾರ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಗುಲ್ಬರ್ಗಾ

ಹಾಗೂ ಬೀದರ್ ಜಿಲ್ಲೆಗಳಲ್ಲಿ ಕ್ರಮವಾಗಿ 264 ಮತ್ತು 109 ಸಸ್ಯಸಂರಕ್ಷಣಾ ರಸಾಯನಿಕಗಳ ಮಾದರಿಗಳನ್ನು ಸಂಗ್ರಹ ಮಾಡಿ ಅವುಗಳ ಪೈಕಿ ಕ್ರಮವಾಗಿ 53 ಮತ್ತು 3 ಮಾದರಿಗಳು ತಪ್ಪು ಛಾಪುಗಳು ಎಂದು ತಿಳಿದು ಬಂದಿದೆ. ಅಂದರೆ ಮೂರು ಮಿಸ್ ಬ್ರ್ಯಾಂಡೆಡ್ ಎಂದು ತಿಳಿದು ಬಂದಿದೆ. ಅವರ ಮೇಲೆ ಇನ್‌ಸೆಕ್ಟಿಸೈಡ್ಸ್ ಆ್ಯಕ್ಟ್ ಪ್ರಕಾರ, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ. 17 ಪ್ರಕರಣಗಳು ಈಗಾಗಲೇ ನ್ಯಾಯಾಲಯದ ಮುಂದೆ ದಾಖಲಾಗಿವೆ. ಉಳಿದಿರತಕ್ಕಂಥವರಿಗೆ ಕಾನೂನಿನ ಪ್ರಕಾರ ಒಂದು ಶೋಕಾಸ್ ನೋಟೀಸ್ ಕೊಡಬೇಕಾಗುತ್ತದೆ. ಆ ಶೋಕಾಸ್ ನೋಟೀಸ್‌ಗೆ ಅವರಿಂದ ಉತ್ತರ ಬರುತ್ತದೆ. ಅವರಿಂದ ಉತ್ತರ ಬಂದ ತಕ್ಷಣ ನಾವು ಅವರು ಉತ್ತರವನ್ನು ರಿಜೆಕ್ಟ್ ಮಾಡಿ ನ್ಯಾಯಾಲಯದ ಮುಂದೆ ಅವರ ಮೇಲೆ ಪ್ರಾಸಿಕ್ಯೂಷನ್‌ಗೆ ಹೋಗಬೇಕಾಗುತ್ತದೆ. ಆ ಪ್ರೋಸೆಸ್ ಈಗ ನಡೆಯುತ್ತಿದೆ. ನಾವು ಯಾರನ್ನೂ ಕೂಡ ಬಿಟ್ಟಿಲ್ಲ. ನಾನು ಈ ಹಿಂದೆ ಎರಡು ವರ್ಷಗಳ ಹಿಂದೆ ಗುಲ್ಬರ್ಗಾಕ್ಕೆ ಹೋಗಿ ಈ ರೀತಿ ಮಿಸ್ ಬ್ರ್ಯಾಂಡ್ ಆಗಿರತಕ್ಕಂಥ ಯಾವ ಕಂಪನಿಗಳು ಇವೆ, ಯಾರು ಇದನ್ನು ಮಾಡಿದ್ದಾರೆ ಅವರನ್ನು ದಸ್ತಗಿರಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದಾಗ ವಿರೋಧ ವ್ಯಕ್ತಪಡಿಸಿ ಗುಲ್ಬರ್ಗಾ ಬಂದ್ ಆಚರಣೆ ಮಾಡಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲಿ ಎಷ್ಟೆಷ್ಟು ಹೆಕ್ಟೇರ್ ಲಾಸ್ ಆಗಿದೆ, ನಾಶವಾಗಿದೆ ಎಂಬುದನ್ನು ಹೇಳಿ. ನಾವು ಹಳ್ಳಿಯಿಂದ ಬಂದಿರುವುದು. ಅಲ್ಲಿ ನಮ್ಮನ್ನೆಲ್ಲಾ ಕೇಳುತ್ತಾರೆ.

ಶ್ರೀ ಸಿ.ಬೈರೇಗೌಡ: ನಾವೇನು ದೆಹಲಿಯಿಂದ ಬಂದಿಲ್ಲ. ನಾನೂ ಕೂಡ ಹಳ್ಳಿಯಿಂದ ಬಂದಿರುವುದು. ನಾನು ಆಗಲೇ ಎಷ್ಟೆಷ್ಟು ಹೆಕ್ಟೇರ್ ನಾಶ ಆಗಿದೆ ಎಂದು ಹೇಳಿದ್ದೇನೆ. ನಷ್ಟ ಆಗಲಿಲ್ಲ ಎಂದು ನಾನೇನು ಹೇಳಲಿಲ್ಲ. ಒಟ್ಟಾರೆ 2.95 ಲಕ್ಷ ಹೆಕ್ಟೇರ್‌ನಲ್ಲಿ ಶೇಕಡಾ 95ರಷ್ಟು ವಿಸ್ತೀರ್ಣ ವಿವಿಧ ಬೆಳೆಗಳಿಂದ ಆವೃತ್ತವಾಗಿದೆ. ಬಿತ್ತನೆಯಾದ ಕೆಲವು ಬೆಳೆಗಳು ಸುಮಾರಾಗಿದ್ದು ಬೆಳೆಗಳ ಪರಿಸ್ಥಿತಿ ಜುಲೈ ಕೊನೆ ವಾರದಿಂದ ಆಗಸ್ಟ್ ಸೆಪ್ಟೆಂಬರ್ ಮಾಹೆಗಳಲ್ಲಿ ಮಳೆ ಬಾರದೆ ದೀರ್ಘಕಾಲ ಒಣ ಹವೆಯಿಂದ ಅಲ್ಪ ಬೆಳೆಗಳಾದ ಉದ್ದು, ಹೆಸರು, ಎಳ್ಳು ಇತ್ಯಾದಿ ಬೆಳೆಗಳು ಕುಂಠಿತವಾಗಿರುವುದರಿಂದ ಒಂದು ಲಕ್ಷ ಎಂಭತ್ತೇಳು ಸಾವಿರ ಒಂಭೈನೂರ ಅರವತ್ತೊಂದು ಹೆಕ್ಟೇರ್ ವಿಸ್ತೀರ್ಣದ ಬೆಳೆಗಳಿಗೆ ಹಾನಿ ಉಂಟಾಗಿದೆ. ಆಗಲೆ ಎಷ್ಟು ನಷ್ಟ ಆಗಿದೆ ಎಂದೂ ಕೂಡ ಹೇಳಿದ್ದೇನೆ. ಗುಲ್ಬರ್ಗಾದಲ್ಲಿ ಎರಡು ಲಕ್ಷ ಮೂವತ್ತಾರು ಸಾವಿರ ಎಂಟನೂರ ಎಂಭತ್ತೆಂಟು ಹೆಕ್ಟೇರ್‌ದಷ್ಟು ಬಿತ್ತನೆಯಾಗಿರತಕ್ಕಂಥದ್ದು, ಅದರಲ್ಲಿ ಅಫೆಕ್ಟೆಡ್ ಬೆಳೆ ಅಂದರೆ ಹಾಳಾಗಿರತಕ್ಕಂಥದ್ದು ಒಂದು ಲಕ್ಷ ಎಪ್ಪತ್ತೈದು ಸಾವಿರ ನಲವತ್ತೇಳು ಹೆಕ್ಟೇರ್. ಬಿಜಾಪೂರ, ಗುಲ್ಬರ್ಗಾ ಅಥವಾ ಬೀದರ್ ಅಷ್ಟೇ ಅಲ್ಲ ತಾವು ಒಪ್ಪಿದರೆ ಇಡೀ ರಾಜ್ಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ಮಂಡ್ಯ ಜಿಲ್ಲೆಗೆ ನಾನು ಸ್ವತಃ ಹೋಗಿ ನೋಡಿದ್ದೇನೆ ಅಲ್ಲಿ ಪೂರ್ತಿಯಾಗಿ ಭತ್ತ ಹಾಳಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತೊಗರಿ ಬೆಳೆಗೆ ಸಂಬಂಧಪಟ್ಟಂತೆ ಬಿಜಾಪೂರ ಬೀದರ್ ಹಾಗೂ ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟೆಷ್ಟು ಹೆಕ್ಟೇರ್ ಬೆಳೆ ನಾಶವಾಗಿದೆ ಅವರಿಗೆಲ್ಲಾ ಹೆಕ್ಟೇರ್‌ಗೆ ಎರಡು ಸಾವಿರ ರೂಪಾಯಿ ಪರಿಹಾರವನ್ನು ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಎರಡನೆಯದಾಗಿ ಸತ್ತಿರುವವರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಲು ಸದನದ ಸಮಿತಿ ಮಾಡಿ ಎಂದು ಕೇಳುತ್ತಿದ್ದೇನೆ. ಸದನದ ಸಮಿತಿಯನ್ನು ಮಾಡಲು ನಿಮಗೇನು ತೊಂದರೆ?

ಶ್ರೀ ಸಿ.ಭೈರೇಗೌಡ: ಇದರಲ್ಲಿ ನಾವು ಮುಚ್ಚಿಟ್ಟುಕೊಳ್ಳುವಂಥದ್ದು ಏನೂ ಇಲ್ಲ. ಇಲ್ಲಿ ನಮಗೆ ವರದಿ ಬಂದಿದೆ. ಬಂದಿರುವ ವರದಿ ಪ್ರಕಾರ ಬೆನಿಫಿಟ್ ಆಫ್ ಡೌಟ್ ಇದೆ. ಆದಕಾರಣ ಮೂರು ಜನರಿಗೆ ಪರಿಹಾರವನ್ನು ಕೊಡಲು ಒಪ್ಪಿದ್ದೇವೆ. ಇದೇ ಕಾರಣದಿಂದ ಅಲ್ಲಿ ಪೂರ್ತಿಯಾಗಿ ಸತ್ತಿದ್ದಾರೆ ಎಂದು ವರದಿಯಲ್ಲಿ ಇಲ್ಲ. ಆದರೂ ಸಹಿತ ಮಾನವೀಯತೆಯನ್ನು ತೋರಿಸಬೇಕು ಎನ್ನುವಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಮೂರು ಜನರಿಗೆ ಸ್ಟ್ರೈಟ್‌ಅವೇ ಒಪ್ಪಿಕೊಂಡಿದ್ದೇವೆ. ಹಾಗೂ ಅವರಿಗೆ ಒಂದೊಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ. ಇನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಿ.ಓ.ಡಿ. ತನಿಖೆಯನ್ನು ಮಾಡಿ ಎಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಒಪ್ಪಿಕೊಂಡಿದ್ದೇವೆ. ಆ ತನಿಖೆಯಲ್ಲಿ ಇದೇ ಕಾರಣಕ್ಕಾಗಿ ಉಳಿದವರೂ ಕೂಡ ಸತ್ತಿದ್ದಾರೆ ಎಂದು ತಿಳಿದು ಬಂದರೆ ಅವರಿಗೂ ಕೂಡ ಪರಿಹಾರವನ್ನು ಕೊಡುತ್ತೇವೆ. ಒಂಭತ್ತು ಜನರಲ್ಲಿ ಉಳಿದಿರತಕ್ಕಂಥವರು ಆರು ಜನ ಮಾತ್ರ. ಆರು ಜನರಿಗೋಸ್ಕರ, ಆರು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕಾಗಿ ಸದನದ ಸಮಿತಿ ಹೋಗಿ ಬರಬೇಕೇ?

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವೇ ಹೇಳಿದ್ದೀರಿ ಗುಲ್ಬರ್ಗಾದಲ್ಲಿ ಒಂದು ಲಕ್ಷ ಎಪ್ಪತ್ತೈದು ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದೆ. ಬೀದರ್‌ನಲ್ಲಿ ಒಂದು ಲಕ್ಷ ಎಪ್ಪತ್ಮೂರು ಸಾವಿರ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು. ಅದನ್ನೆಲ್ಲವನ್ನೂ ನೋಡಬೇಕಲ್ಲವೇ? ಅದಕ್ಕೆ ಸದನದ ಸಮಿತಿ ಮಾಡಿ ಎಂದು ಹೇಳಿದ್ದು.

ಶ್ರೀ ಸಿ.ಭೈರೇಗೌಡ: ನೀವು ಐದು ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಹೇಳಿದರೆ ನಾವು ಒಂದು ಲಕ್ಷ ಹೆಕ್ಟೇರ್ ಭೂಮಿಯ ಬೆಳೆ ಹಾನಿಯಾಗಿದೆ ಎಂದು ಹೇಳಿದರೆ ನಮಗೂ ನಿಮಗೂ ವ್ಯತ್ಯಾಸ ಇದ್ದರೆ ನಿಜಾಂಶ ಕಂಡು ಹಿಡಿಯುವುದಕ್ಕೆ ಸದನದ ಸಮಿತಿ ಹೋಗಬೇಕು ಎಂದು ಹೇಳೋಣ. ಆದರೆ ಇಲ್ಲಿ ನೀವು ಹೇಳಿರುವ ಅಂಕಿ ಅಂಶಗಳನ್ನೇ ನಾವೂ ಕೂಡ ಹೇಳುತ್ತಿದ್ದೇವೆ. ಆದ್ದರಿಂದ ಸದನದ ಸಮಿತಿಯ ಅವಶ್ಯಕತೆ ಇಲ್ಲ. ಇನ್ನು ಹೆಚ್ಚಿಗೆ ಕಂಪನ್‌ಸೇಷನ್ ಕೊಡಬೇಕು ಎಂದು ಹೇಳುತ್ತಿದ್ದೀರಿ, ಆ ವಿಚಾರದ ಬಗ್ಗೆ ಈ ಸದನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯ ಹಾಗೂ ಸದನದ

ಭಾವನೆಗಳು ಏನು ಇವೆ ಅವೆಲ್ಲಾ ನನಗೆ ಅರ್ಥವಾಗಿವೆ. ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಕಾನೂನನ್ನು ಹಾಗೂ ಸರ್ಕಾರಿ ಆದೇಶವನ್ನು ಬದಲಾಯಿಸಬಹುದು ಎಂದು ನೀವೇ ಹೇಳಿದ್ದೀರಿ. ನಿಮ್ಮ ಮಾತಿನ ಪ್ರಕಾರ ನಾನು ಸಚಿವ ಸಂಪುಟದ ಮುಂದೆ ಹೋಗುತ್ತಿದ್ದೇನೆ. ಸದನದ ಅಭಿಪ್ರಾಯ ಏನು ಇದೆ ಎಂದು ಅಲ್ಲಿ ಹೇಳುತ್ತೇನೆ. ಸಚಿವ ಸಂಪುಟದ ಎಲ್ಲಾ ಸದಸ್ಯರ ಮನಸ್ಸನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಮನಸ್ಸನ್ನು ಒಲಿಸತಕ್ಕಂಥ ತೀವ್ರವಾದಂಥ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಷ್ಟು ದಿವಸ ಏಕೆ ಮಾಡಲಿಲ್ಲ ಎಂಬುದು ನಮ್ಮ ವಾದ.

ಶ್ರೀ ಸಿ.ಭೈರೇಗೌಡ: ಚುನಾವಣೆ ನಡೆಯುತ್ತಿತ್ತು. ನಾವು ನೀವು ಎಲ್ಲಿ ಇದ್ದೆವು ಎಂದು ತಮಗೆ ಚೆನ್ನಾಗಿ ಗೊತ್ತಿದೆ. ಇದುವರೆಗೆ ಅಧಿಕಾರಿಗಳು ಏನು ಕ್ರಮ ಕೈಗೊಳ್ಳಬೇಕಾಗಿತ್ತೋ ಆ ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ. ನಾಲ್ಕನೇ ತಾರೀಖು ಸಚಿವ ಸಂಪುಟ ಸಭೆ ನಡೆದಿತ್ತು. ಆವೊತ್ತು ಕೂಡ ನಾವು ಈ ವಿಷಯವನ್ನು ಆದ್ಯತೆಯ ಮೇಲೆ ತೆಗೆದುಕೊಂಡಿದ್ದೇವೆ. ಸಚಿವ ಸಂಪುಟದ ಇತರ ಸದಸ್ಯರು ಬೇರೆ ಬೇರೆ ಜಿಲ್ಲೆಗಳಲ್ಲಿ ಹಾಳಾಗಿರುವ ಬೆಳೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದರು. ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಕಡಲೆಕಾಯಿ ಹಾಳಾಗಿದೆ ಎಂದು ಹೇಳುತ್ತಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಕೂಡ ಕಡಲೆ ಕಾಯಿ ಹಾಳಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕೂಡ ಬೇರೆ ಬೇರೆ ಬೆಳೆಗಳು ಹಾಳಾಗಿವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದೆಲ್ಲಾ ಒಂದಕ್ಕೊಂದು ಹೋಲಿಸುತ್ತಾ ಹೋಗಬೇಡಿ. ಇವೊತ್ತು ಪ್ರಸ್ತಾಪ ಮಾಡಿದ ವಿಷಯ ಏನು ಇದೆ ಅದಕ್ಕೆ ಮಾತ್ರ ಸೀಮಿತವಾಗಿ ಹೇಳಿ. ಪ್ರತಿಯೊಂದು ಜಿಲ್ಲೆಯಲ್ಲಿ ಒಂದೊಂದು ಸಮಸ್ಯೆ ಇದೆ. ಒಂದು ಕಡೆ ಆಲೂಗಡ್ಡೆ ಇರಬಹುದು, ಒಂದು ಕಡೆ ಈರುಳ್ಳಿ ಇರಬಹುದು, ಒಂದು ಕಡೆ ಕಡಲೆಕಾಯಿ ಇರಬಹುದು, ಒಂದು ಕಡೆ ಟೊಮ್ಯಾಟೋ ಇರಬಹುದು, ಒಂದು ಕಡೆ ಪ್ಯಾಡಿ ಇರಬಹುದು.

ಅಧ್ಯಕ್ಷರು: ನೀವು ಕೇಳಿದ ಸ್ಪಷ್ಟೀಕರಣಕ್ಕೆ ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರವನ್ನು ನಾನು ಬಹಳ ತಾಳ್ಮೆಯಿಂದ ಕೇಳಿದ್ದೇನೆ. ಎಷ್ಟು ವಿಸ್ತೀರ್ಣ ಬೆಳೆ ಹಾನಿಯಾಗಿದೆ ಎನ್ನತಕ್ಕಂಥದ್ದರ ಬಗ್ಗೆ ಹೆಚ್ಚು ಕಡಿಮೆ ನೀವು ಕೊಟ್ಟಿರತಕ್ಕಂಥದ್ದನ್ನು ಅವರು ಒಪ್ಪಿಕೊಂಡಿದ್ದಾರೆ. ಒಂಭತ್ತು ಸಾವುಗಳಲ್ಲಿ ಮೂರು ಸಾವುಗಳು ಆಗಿವೆ ಎಂದು ಒಪ್ಪಿಕೊಂಡಿದ್ದಾರೆ. ಜಿಲ್ಲಾಧಿಕಾರಿಗಳ ವರದಿಯ ಪ್ರಕಾರ ಬೆನಿಫಿಟ್ ಆ ಡೌಟ್ ಇದೆ ಆದರೂ ಮೂರು ಜನರಿಗೆ ಒಂದೊಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ.

3.30 ಪಿ.ಎಂ

ಉಳಿದ ಆರು ಸಾವಿನ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಬಂದಿರತಕ್ಕ ಮಾಹಿತಿಯ ಪ್ರಕಾರ ಇದಕ್ಕೆ ಸಂಬಂಧಿಸಿಲ್ಲವೆಂದು ತೀರ್ಮಾನ ಮಾಡಿದ್ದಾರೆ. ಕೆಲಾಮಿಟಿಯಾಗಿರುವುದರಿಂದ ಪರಿಹಾರ ಕೊಡುವ ಬಗ್ಗೆ ಸಚಿವಸಂಪುಟಕ್ಕೆ ಅಧಿಕಾರವಿದೆಯೆಂದು ತಾವು ಹೇಳಿದ್ದೀರಿ. ಅದಕ್ಕೆ ಸಹ ಅವರು ಉತ್ತರವನ್ನು ಹೇಳಿದ್ದಾರೆ. ಸದನದ ಭಾವನೆಗಳನ್ನು ಸಚಿವಸಂಪುಟಕ್ಕೆ ತೆಗೆದುಕೊಂಡು ಹೋಗಿ, ಮುಖ್ಯಮಂತ್ರಿಯವರಿಗೆ ತಿಳಿಸಿ ಅದರ ಬಗ್ಗೆ ಸಹ ಪುನರ್‌ಪರಿಶೀಲನೆ ಮಾಡುವುದಾಗಿ ಅವರು ಹೇಳಿದ್ದಾರೆ. ಹಾಗಿದ್ದಮೇಲೆ ಈ ವಿಚಾರದ ಬಗ್ಗೆ ಮತ್ತೆ ಮಾತನಾಡಿಕೊಂಡು ಬೆಳೆಸಿಕೊಂಡು ಹೋದರೆ ಸಮಯ ವ್ಯರ್ಥವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೇ, ಇದರ ಬಗ್ಗೆ ಸದನದ ಸಮಿತಿ ಮಾಡುವುದಕ್ಕೇನು ತೊಂದರೆ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಆತ್ಮಹತ್ಯೆಯಾಗಿದೆ, ಇಷ್ಟು ಜನರು ಸತ್ತಿದ್ದಾರೆಂದು ತಾವು ಒಪ್ಪಿಕೊಳ್ಳುತ್ತಿದ್ದೀರಿ. ಅದರಲ್ಲಿ ಮೂರು ಜನರಿಗೆ ಬೆನಿಫಿಟ್ ಆಫ್ ಡೌಟ್ ಇದೆ, ನೋಡುತ್ತೇವೆಂದು ಹೇಳಿದ್ದೀರಿ. ಆತ್ಮಹತ್ಯೆಯಾಗತಕ್ಕ ಈ ಪರಿಸ್ಥಿತಿಗೆ ಕಾರಣಕರ್ತರು ಯಾರು? ತಾವು ಯಾರನ್ನಾದರೂ ಶಿಕ್ಷೆಗೆ ಗುರಿಮಾಡಬೇಕಲ್ಲವೆ? ಸುಮ್ಮನೆ ಪರಿಹಾರ ಕೊಡುವುದು ಮುಖ್ಯವಲ್ಲ. ಆತ್ಮಹತ್ಯೆಯಾಗತಕ್ಕ ವ್ಯವಸ್ಥೆಗೆ ಕಾರಣ ಯಾರು?

ಅಧ್ಯಕ್ಷರು: ಆತ್ಮಹತ್ಯೆ ಮಾಡಿಕೊಂಡಿರುವವರಲ್ಲಿ ಆರು ಪ್ರಕರಣಗಳಲ್ಲಿ ಇದಕ್ಕೆ ಸಂಬಂಧಿಸಿಲ್ಲವೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಯಾರ್‍ಯಾರು, ಏಕೆ, ಎಲ್ಲೆಲ್ಲಿ ಆತ್ಮಹತ್ಯೆ ಮಾಡಿಕೊಂಡರು ಎಂಬ ಬಗ್ಗೆ ಶ್ರೀಮತಿ ಪ್ರಮೀಳನೇಸರ್ಗಿಯವರಿಗೆ ಕೇಳಿ, ಅವರು ವಕೀಲರು.

ಶ್ರೀ ವಾಟಾಳ್‌ನಾಗರಾಜ್: ಇತಿಹಾಸದಲ್ಲಿ ಬೆಳೆ ನಾಶವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಬಗ್ಗೆ ನಾನಂತೂ ಕೇಳಿರಲಿಲ್ಲ. ಇದು ಗಂಭೀರವಾದ ಪರಿಸ್ಥಿತಿ. ಈ ಪರಿಸ್ಥಿತಿಗೆ ಬರಬೇಕಾದರೆ ಯಾರು ಜವಾಬ್ದಾರರು? ಅವರಿಗೆ ಶಿಕ್ಷೆ ಮಾಡುವ ಬಗ್ಗ ಈ ಸದನದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಬಾರದೇ?

ಅಧ್ಯಕ್ಷರು: ಬೆಳೆ ಹಾನಿಯಾಗಿರುವುದರಿಂದ, ಸಾಲವನ್ನು ತೀರಿಸದಿರುವ ಸ್ಥಿತಿ ಉದ್ಭವಿಸಿರುವುದರಿಂದ, ಆರ್ಥಿಕ ಸಂಕಷ್ಟದಿಂದ ಹೆದರಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಕೇವಲ ಮೂರು ಇರಬಹುದೆಂದು ಸರ್ಕಾರದ ಅಭಿಪ್ರಾಯ. ಉಳಿದ ಆರು ಪ್ರಕರಣವು ಇದಕ್ಕ ಸಂಬಂಧಿಸಿದ್ದಲ್ಲ, ಅದು ಬೇರೆಯದ್ದೇ ಆಗಿದೆ ಎಂದು ಸರ್ಕಾರದವರು ಹೇಳಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ಅದು ಸತ್ಯಕ್ಕೆ ದೂರವಾದುದು. ಬೀದರ್ ಜಿಲ್ಲೆಯಲ್ಲಿ ಐವತ್ತು ಸಾವಿರಜನರು ಮೆರವಣಿಗೆ ಮಾಡಿ ನಡೆದಿರತಕ್ಕ ಸತ್ಯ ಸಂಗತಿಯೆಂದು ಜನರು ಹೇಳುತ್ತಾರೆ. ಆದರೆ ಇವರು ಸಾರಾಸಗಟಾಗಿ ಇದನ್ನು ತಳ್ಳಿಹಾಕುತ್ತೇನೆಂದರೆ ಸರಿಯಲ್ಲ. ಐವತ್ತು ಸಾವಿರ ಜನರು ಭುಗಿಲೆದ್ದಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರೂ ಸಹ ಆ ಮಾತನ್ನು ಹೇಳಿದ್ದಾರೆ. ಆದರೆ ಈಗ ಅವರು ಈ ಕಾರಣದಿಂದ ಸತ್ತಿಲ್ಲವೆಂದರೆ ಸರಿಯಲ್ಲ.

(ಗೊಂದಲ)

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ: ನಮಗೆ ಜಿಲ್ಲಾ ಸಚಿವರು ಉತ್ತರವನ್ನು ಕೊಡಲಿ. ಜಿಲ್ಲಾ ಮಂತ್ರಿಯವರು ಅಲ್ಲಿಗೆ ಯಾವಾಗ ಹೋಗಿದ್ದರು? ಯಾರಿಗೆ ಪರಿಹಾರವನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ಉತ್ತರವನ್ನು ಅವರು ಕೊಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಇವರುಗಳು ಬೇರೆ ಕಾರಣಕ್ಕೆ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಆ ರೀತಿ ಬೇರೆ ಕಾರಣಕ್ಕೆ ಸತ್ತಿರುವವರ ಬೆಳೆ ನಾಶವಾಗಿದೆಯೇ, ಅಥವಾ ಇಲ್ಲವೇ ಎಂಬ ಬಗ್ಗೆ ಮಾನ್ಯ ಬೈರೇಗೌಡರು ಉತ್ತರ ಹೇಳಲಿಯೆಂದು ಕೇಳಿದ್ದೆ. ಅವರು ಅದಕ್ಕೆ ಉತ್ತರ ಕೊಡಲಿಲ್ಲ.

ಅಧ್ಯಕ್ಷರು: ಬೇರೆ ಪ್ರಕರಣಗಳಲ್ಲಿ ಸತ್ತಂಥವರಿಗೆ ಜಮೀನು ಇತ್ತೋ, ಇಲ್ಲವೋ, ಜಮೀನು ಇದ್ದರೆ ಬೆಳೆ ಬೆಳೆದಿದ್ದರೋ, ಇಲ್ಲವೋ, ಬೆಳೆದಿದ್ದರೆ ಬೆಳೆ ಹಾನಿಯಾಗಿತ್ತೋ, ಇಲ್ಲವೋ, ಎಂಬ ಬಗ್ಗೆ ಹೇಳಲು ಸಮಯ ಬೇಕಾಗುತ್ತದೆ. ಎಲ್ಲಾ ಮಾಹಿತಿಯನ್ನು ಒಂದೇ ಸಾರಿ ಕೊಡಲು ಆಗುತ್ತದೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ಎಲ್ಲಾ ಕಾರಣಗಳನ್ನು ಸೇರಿಸಿಯೇ ಜಿಲ್ಲಾಧಿಕಾರಿಯವರು ವರದಿ ಕಳುಹಿಸಿದ್ದು. ಬೆಳೆ ನಾಶವಾಯಿತು, ಕೀಟನಾಶಕಗಳನ್ನು ಸಿಂಪಡಿಸಿಯೂ ಆಯಿತು, ನಾಶವಾಗಿಯೂ ಆಯಿತು. ಆದರೆ ಇವರು ಇನ್ನೂ ಆ ಜಮೀನನ್ನು ಹುಡುಕುವುದರಲ್ಲೇ ಇದ್ದರೆ ಹೇಗೆ?

ಶ್ರೀ ವಿಜಯಕುಮಾರ್ ಖಂಡ್ರೆ: ಮಾನ್ಯ ಅಧ್ಯಕ್ಷರೇ, ಜಿಲ್ಲಾ ಉಸ್ತುವಾರಿ ಸಚಿವರು ಬೆಳೆ ನಾಶವಾಗಿರುವ ಬಗ್ಗೆ ಪರಿಶೀಲನೆ ಮಾಡಿದ್ದಾರೆ. ಮೃತಪಟ್ಟ ಕುಟುಂಬದವರನ್ನು ಭೇಟಿಯಾಗಿ ಬಂದಿದ್ದಾರೆ. ಮೃತಪಟ್ಟಿರುವ ರೈತರಿಗೆ ಭೂಮಿ ಇದೆ, ಅವರ ಬೆಳೆ ನಾಶವಾಗಿದೆ, ಅವರಿಗೆ ಪರಿಹಾರವನ್ನು ಸಹ ಸಚಿವರು ಕೊಟ್ಟು ಬಂದಿದ್ದಾರೆ. ಈ ರೀತಿ ನೋಡಿ ಬಂದಿದ್ದರೂ ಸಹ ಇವರು ಸದನವನ್ನು ತಪ್ಪುದಾರಿಗೆಳೆಯುವುದು ಸರಿಯಲ್ಲ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ: ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸದನದ ಸಮಿತಿ ಮಾಡಬೇಕು.

ಶ್ರೀ ಮೀರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ಸಚಿವರು): ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಯಡಿಯೂರಪ್ಪನವರು, ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರು, ಹಶ್ಮಿಯವರು, ಮಾನ್ಯ ವಿಜಯಕುಮಾರ್ ಖಂಡ್ರೆಯವರು ಈಗಾಗಲೇ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಈ ತಿಂಗಳ 7ನೇ ತಾರೀಖು ಬಾಲ್ಕಿ ತಾಲ್ಲೂಕಿನ ಆ ಎಲ್ಲಾ ಮನೆಗಳಿಗೆ ಭೇಟಿ ಕೊಟ್ಟಿದ್ದೇನೆ. ಜಿಲ್ಲಾಧಿಕಾರಿಯವರು ಆತ್ಮಹತ್ಯೆ ಮಾಡಿಕೊಂಡಿರುವ 9 ಪ್ರಕರಣಗಳಲ್ಲಿ ಮೂರು ಮಾತ್ರ ಈ ಕಾರಣಕ್ಕಾಗಿ ಮಾಡಿಕೊಂಡಿದ್ದಾರೆ, ಬೇರೆ ಪ್ರಕರಣಗಳಲ್ಲಿ ಕಾರಣ ಬೇರೆಯದ್ದಾಗಿದೆಯೆಂದು ವರದಿ ಮಾಡಿರುತ್ತಾರೆ. ಆ ಮೂರು ಕುಟುಂಬಗಳಲ್ಲಿ ಎರಡು ಕುಟುಂಬದವರಿಗೆ ಐದೈದು ಸಾವಿರ ರೂಪಾಯಿಗಳನ್ನು, ಒಂದು ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ನ್ಯಾಚುರಲ್ ಕೆಲಾಮಿಟಿ ಫಂಡ್‌ನಿಂದ ಕೊಡಲಾಗಿದೆ. ಒಂದು ಪ್ರಕರಣದಲ್ಲಿ ಪೋಸ್ಟ್‌ಮಾರ್ಟಮ್ ಆಗಿತ್ತು. ಅವರಿಗೆ ಹತ್ತು ಸಾವಿರ ಕೊಡಲಾಗಿದೆ, ಇನ್ನೆರಡು ಪ್ರಕರಣಗಳಲ್ಲಿ ಪೋಸ್ಟ್‌ಮಾರ್ಟಮ್ ಆಗಿರಲಿಲ್ಲ, ಆದ್ದರಿಂದ ಐದು ಸಾವಿರ ಕೊಡಲಾಗಿದೆ. ಉಳಿದ ಆರು ಪ್ರಕರಣಗಳಲ್ಲಿ ಆ ಕುಟುಂಬದ ಸದಸ್ಯರು ಒಂದು ಕಾರಣವನ್ನು ಹೇಳಿದರೆ, ಊರಿನ ಜನರು ಮತ್ತೊಂದು ಕಾರಣವನ್ನು ಹೇಳುತ್ತಾರೆ. ಜಿಲ್ಲಾಧಿಕಾರಿಯವರು ವರದಿ ಕಳುಹಿಸಿದ್ದಾರೆ, ಸ್ಥಳೀಯ ಜನರು ಕೊಟ್ಟಿರುವ ಹೇಳಿಕೆಯನ್ನೂ ಸಹ ನಾನು ಪರಿಶೀಲನೆ ಮಾಡುತ್ತೇನೆ, ಆನಂತರ ನಾನು ಸರ್ಕಾರಕ್ಕೆ ವರದಿ ಮಾಡುತ್ತೇನೆ. ಸರ್ಕಾರದಿಂದ ಆದಷ್ಟು ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇವೆಂದು ಭರವಸೆಯನ್ನು ಅಲ್ಲಿ ಕೊಟ್ಟು ಬಂದಿದ್ದೇನೆ. ಪತ್ರಿಕೆಗಳಿಗೆ ಮಾತ್ರವಲ್ಲ ದೂರದರ್ಶನ ಮತ್ತು ಆಕಾಶವಾಣಿಯವರಿಗೂ ಸಹ ಇದೇ ಸ್ಟೇಟ್‌ಮೆಂಟ್‌ನ್ನು ನಾನು ಕೊಟ್ಟಿದ್ದೇನೆ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ, ಒಬ್ಬರು ಸಚಿವರಾಗಿ ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಾರೆಂದರೆ ಹೇಗೆ?

ಅಧ್ಯಕ್ಷರು: ಇದೇನು ತಪ್ಪು ಮಾಹಿತಿಯೇ? ಇದೇನು ವಿಧಾನಸಭೆಯೆಂದು ತಿಳಿದುಕೊಂಡಿದ್ದೀರಾ ಅಥವಾ ಬೇರೆ ಎಲ್ಲಾದರೂ ಕುಳಿತಿದ್ದೀರೆಂದು ತಿಳಿದುಕೊಂಡಿದ್ದೀರಾ? ಅವರೊಬ್ಬರು ಜವಾಬ್ದಾರಿ ಇರತಕ್ಕ ಸಚಿವರು, ಇಷ್ಟೊತ್ತು ಆದಮೇಲೆ ಅವರಿಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಅವರು ಹೇಳುವ ಉತ್ತರ ಸರಿಯಲ್ಲವೆ? ಅವರು ನೀಡುವ ಮಾಹಿತಿ ಅವರಿಗೇ ಗೊತ್ತಿಲ್ಲವಂತೆ, ಇವರಿಗೆ ಗೊತ್ತಿದೆಯಂತೆ. ಎಲ್ಲಿಂದಲೋ ಎಲ್ಲಿಗೆ ವಿಚಾರವನ್ನು ತೆಗೆದುಕೊಂಡು ಹೋಗುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಶ್ಮಿ: ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ. There is a limit upto which

you can take this Assembly. You should not do like this. ಸಚಿವರು ಹೇಳುವ ಮಾಹಿತಿ ಅವರಿಗೇ ಗೊತ್ತಿಲ್ಲವಂತೆ, ಇವರಿಗೆ ಗೊತ್ತಿದೆಯಂತೆ, ಅವರ ಶರೀರದಲ್ಲಿ ಹೋಗಿ ಸೇರಿಕೊಳ್ಳಿ, ಇವರಿಗೆ ಮಾಹಿತಿ ಕೊಡುತ್ತಾರೆ. ಈ ರೀತಿ ತಾವು ಮಾಡಬಾರದು. ಇದು ಬಹಳ ಗಂಭೀರವಾದ ಸದನ. ಏನೋ ಸ್ವಲ್ಪ ತಪ್ಪಾಗುತ್ತದೆ, ಆದರೆ ತಾವು ಹುಡುಗಾಟಿಕೆ ಮಾಡುತ್ತೀರಲ್ಲಾ, You cannot do that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಾವು ಸಿಟ್ಟು ಮಾಡಿಕೊಳ್ಳಬಾರದು. ಹಶ್ಮಿರವರು ಮತ್ತು ಇವರು ಒಂದೇ ಊರಿನಲ್ಲಿ ಇರುತ್ತಾರೆ.

ಅಧ್ಯಕ್ಷರು: ಸಿಟ್ಟು ಇಲ್ಲ. ಆದರೆ ಇವೆಲ್ಲ ಹೇಳಬೇಕಾಗುತ್ತದೆ. ತಾವೂ ಬೀದರ್‌ನವರೆ ಆಗಿರುವುದೇ ನಮಗೆ ಬಂದಿರತಕ್ಕ ಸಮಸ್ಯೆಯಲ್ಲವೆ? ಜಿಲ್ಲೆ ಗುಲ್ಬರ್ಗಾವಾದರೂ ತಾವು ಹುಟ್ಟಿ ಬೆಳೆದದ್ದು ಬೀದರ್‌ನಲ್ಲಿ ಅಲ್ಲವೆ? ನೀವು ವೈಜನಾಥ್‌ರವರಿಬ್ಬರು ಬೀದರ್‌ನವರೇ. ನಮ್ಮ ಸಮಸ್ಯೆ ಇರುವುದೇ ಅಲ್ಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರೆಲ್ಲಾ ಹುಟ್ಟಿ ಬೆಳೆದು ಅಲ್ಲೇ ಇದ್ದವರು. ನಾನು ಅಲ್ಲಿ ಹುಟ್ಟಿದ್ದೆ, ಆದರೆ ಬೆಳೆಯಲಿಲ್ಲ. ಆ ಕತೆ ಬೇರೆಯೇ ಇದೆ. ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಸದನದ ಸಮಿತಿಯನ್ನು ಮಾಡುವುದಕ್ಕೆ ಒಪ್ಪಿಕೊಳ್ಳಲು ಮಾನ್ಯ ಬೈರೇಗೌಡರಿಗೆ ತೊಂದರೆಯಾದರೂ ಏನು?

ಅಧ್ಯಕ್ಷರು: ಸದನ ಸಮಿತಿ ಮಾಡುವುದಕ್ಕೆ ಸರ್ಕಾರದ ಪರವಾಗಿ ಏನು ಹೇಳುತ್ತೀರಿ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಒಪ್ಪಿಕೊಳ್ಳಿ. ಒಂದು ಸಲ ಬೀದರ್‌ಗೆ, ಗುಲ್ಬರ್ಗಾಕ್ಕೆ ಹೋಗಿಬರಲಿ.

ಅಧ್ಯಕ್ಷರು: ನಾನು ಬೇರೆ ವಿಚಾರದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಸಿ.ಬೈರೇಗೌಡ: ಬಹಳ ಗಹನವಾಗಿರುವಂಥ ವಿಚಾರಗಳಲ್ಲಿ ಸದನದ ಸಮಿತಿಗೆ ಒಪ್ಪಬಹುದು.

ಶ್ರೀ ವಾಟಾಳ್ ನಾಗರಾಜ್: ಇದಕ್ಕಿಂತ ಗಹನವಾದ ವಿಚಾರ ಮತ್ತಾವುದಿದೆ? ಹಿಂದೆ ಇದೇ ಸದನದಲ್ಲಿ ತಾವು ಸದಸ್ಯರಾಗಿದ್ದಿರಿ, ಗುಲ್ಬರ್ಗಾದಲ್ಲಿ ಬರಗಾಲ ಬಂದಾಗ ಸದನದ ಸಮಿತಿಯ ಪರವಾಗಿ ನಾವು ನೀವುಗಳೆಲ್ಲರೂ ಹೋಗಿದ್ದವು. ಅದಕ್ಕಿಂತ ಇದು ಭೀಕರವಾದುದು.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರು ಏನು ಹೇಳುತ್ತಾರೆ ಕೇಳೋಣ, ಅವರು ಸದನದ ಸಮಿತಿ ಬೇಡ ಎನ್ನುವ ಪೈಕಿಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್ಕಾರದ ಬಗ್ಗೆ ಸಿಟ್ಟು ಇದ್ದರೂ ಸಹ ಬೈರೇಗೌಡರ ಬಗ್ಗೆ ಸ್ವಲ್ಪ ಅನುಕಂಪವಿದೆ. ಏನಾದರೂ ಒಳ್ಳೆಯದನ್ನು ಮಾಡುತ್ತಾರೆಂದು ಅನುಕಂಪವಿದೆ. ಆದರೆ ಅವರೂ ಸಹ ಅದನ್ನು ಕಳೆದುಕೊಂಡರು. ಆ ವಿಚಾರ ಬೇರೆ ಬಿಡಿ. ಸದನದ ಸಮಿತಿ ಆಗಬೇಕು ಎಂಬುದು ನಮ್ಮ ಬೇಡಿಕೆ. ದಯಮಾಡಿ ಅದಕ್ಕೆ ಅವಕಾಶ ಮಾಡಿ. ಏತಕ್ಕಾಗಿ ಸದನದ ಸಮಿತಿ ಮಾಡಬೇಕೆಂದು ಕೇಳುತ್ತಿದ್ದೇವೆಂದರೆ, ವಾಸ್ತವಿಕವಾಗಿ ಸತ್ತಿರುವ ಹತ್ತು ಜನರು ಯಾವ ಕಾರಣಕ್ಕಾಗಿ ಸತ್ತಿದ್ದಾರೆ ಎಂಬ ಬಗ್ಗೆ ವರದಿ ಕೊಡಲು, ಬೆಳೆ ನಾಶ ವರ್ಷ ವರ್ಷ ಇದೇ ರೀತಿ ಆಗುತ್ತಿರುವ ಬಗ್ಗೆ ಏನಾದರೂ ಪರಿಹಾರ ಕಂಡುಹಿಡಿಯಲು, ನಿಮ್ಮಿಂದ ಪರಿಹಾರವಾದ ಒಂದು ಎಕರೆಗೆ ಎರಡು ಸಾವಿರ ಕೊಡಿಸುವ ಏರ್ಪಾಡು ಮಾಡುವುದು, ಮೂರನೆಯದಾಗಿ ನಿರಂತರವಾಗಿ ನೂರಾರು ಕೋಟಿ ರೂಪಾಯಿಗಳ ಕಳಪೆದರ್ಜೆಯ ಕೀಟನಾಶಕ ಅಲ್ಲಿ ಮಾರಾಟವಾಗುತ್ತಿದೆ. ಈ ಮೂರೂ ವಿಚಾರದ ಬಗ್ಗೆ ತಮಗೆ ವರದಿ ಕೊಟ್ಟರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ, ಆದ್ದರಿಂದ ಇದರ ಬಗ್ಗೆ ತನಿಖೆ ಮಾಡಲು ಸದನದ ಸಮಿತಿ ಮಾಡಲು ತೊಂದರೆಯೇನಿದೆ? ಒಪ್ಪಿಕೊಂಡರೆ ನಾವು ಮುಂದೆ ಬೇರೆ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಈ ಚರ್ಚೆಯನ್ನು ಒಂದು ಗಂಟೆಗೆ ಐದು ನಿಮಿಷಗಳಿರುವಾಗ ಪ್ರಾರಂಭ ಮಾಡಿದೆವು. I am granting final opportunity to the Government to make its statement. Then I will take up the next subject. You will have to co-operate with me. ಆನಂತರ ನಾನು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ದಯಮಾಡಿ ಸಹಕರಿಸಬೇಕು. ಅವರು ಉತ್ತರ ಕೊಟ್ಟಿದ್ದಾರೆ. ಪದೇಪದೇ ಸ್ಪಷ್ಟೀಕರಣವನ್ನು ಕೊಟ್ಟಿದ್ದಾರೆ. ಇಡೀ ದಿವಸ ಇದೇ ನಡೆದರೆ ಬೇರೆ ವಿಷಯ ಚರ್ಚೆಯಾಗುವುದಿಲ್ಲ. ಆದುದರಿಂದ ಅವರು ಈಗ ಫೈನಲ್ ಆಗಿ ಏನು ಹೇಳುತ್ತಾರೆ ನೋಡಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟಪಡಿಸಿದ್ದೇನೆ. ಇದು ವಿಸ್ತಾರವಾದಂತಹ ಒಂದು ಸಮಸ್ಯೆ. ಏನೆಂದರೆ ಈ ರೀತಿಯಾಗಿ ಬೆಳೆ ಹಾಳಾಗಿರತಕ್ಕಂಥಾದ್ದು ರಾಜ್ಯದಲ್ಲಿ ಬೇರೆಬೇರೆ ಕಡೆ ಇದೆ. ಅದಕ್ಕೋಸ್ಕರ ಈಗ ಹೊಸ ವಿಮಾ ಯೋಜನೆ ಜಾರಿಯಲ್ಲಿ ಬಂದಿದೆ. ಪೈಲೆಟ್ ಪ್ರಾಜೆಕ್ಟ್ ಆಗಿ ಒಂದು ಜಿಲ್ಲೆಯಲ್ಲಿ ಅದನ್ನು ಜಾರಿ ಕೊಟ್ಟಿದ್ದೇವೆ. ಈಗಿರುವ ವಿಮಾ ಯೋಜನೆ ಪ್ರಕಾರ ಯಾರು ಸಾಲ ಸಹಕಾರ ಸಂಘಗಳ ಮೂಲಕವಾಗಲಿ, ಕಮರ್ಷಿಯಲ್ ಬ್ಯಾಂಕ್ ಮೂಲಕವಾಗಲಿ ಅವರು ಮಾತ್ರ ವಿಮೆಗೆ ಒಳಪಡುತ್ತಾರೆ. ಆದರೆ ಬೇರೆ ರೈತರು ಒಳಪಡುವುದಕ್ಕೆ ಸಾಧ್ಯವಿಲ್ಲ. ಆದರೆ ಈಗ ಬಂದಿರತಕ್ಕಂಥ ಹೊಸ ವಿಮಾ ಪಾಲಿಸಿ ಪ್ರಕಾರ ಸಣ್ಣ ಮತ್ತು ಅತಿ ಸಣ್ಣ ರೈತರು ಎಷ್ಟು ಜನ ಇದ್ದಾರೆ ಅವರೆಲ್ಲರನ್ನೂ ಕೂಡ ಈ ವಿಮಾ ಯೋಜನೆಗೆ ಒಳಪಡಿಸತಕ್ಕಂಥ ವ್ಯವಸ್ಥೆ ಜಾರಿಗೆ ಬಂದಿದೆ. ಪ್ರಾಯೋಗಿಕವಾಗಿ ವಿಜಾಪುರ ಜಿಲ್ಲೆಯಲ್ಲಿ

ಈ ವರ್ಷದಿಂದ ನಾವು ಜಾರಿಗೆ ಕೊಟ್ಟಿದ್ದೇವೆ. ಮುಂದಿನ ವರ್ಷದಿಂದ ಅದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೇರಿ ಮಾಡಬೇಕಾಗಿದೆ; ಮುಂದಿನ ವರ್ಷ ಏನು ಮಾಡಬೇಕು ಎನ್ನುವ ಆಲೋಚನೆ ಮಾಡುತ್ತೇವೆ. ಹಾಗೂ ತೀರ್ಮಾನ ಮಾಡುತ್ತೇವೆ. ಇದು ರಾಜ್ಯಾದ್ಯಂತ ವಿಸ್ತಾರವಾಗಿರತಕ್ಕಂಥ ಸಮಸ್ಯೆ. ಈಗಿರತಕ್ಕಂಥ ಸಮಸ್ಯೆ ಬಗ್ಗೆ ನಾನು ಹೇಳಿದ್ದೇನೆ. ಅವರಿಗೂ ನಮಗೂ ವ್ಯತ್ಯಾಸ ಏನಿಲ್ಲ. ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎನ್ನುವುದನ್ನು ಅವರು ಒಪ್ಪುತ್ತಾರೆ. ಅವರು ಹೇಳಿರತಕ್ಕಂಥಾದ್ದು ನಿಜ. ವ್ಯತ್ಯಾಸ ಏನಿಲ್ಲ. ನಾನು ಹೇಳುವುದೇನೆಂದರೆ, ಕೆಲಾಮಿಟೀಸ್ ಫಂಡ್‌ನಲ್ಲಿ ಪರಿಹಾರ ಕೊಡುವುದರಲ್ಲಿ ಅವಕಾಶ ಇರತಕ್ಕಂಥಾದ್ದು ಒಂದು ಹೆಕ್ಟೇರ್‌ಗೆ 500 ರೂಪಾಯಿಯಿಂದ 2,000 ರೂಪಾಯಿಗಳವರೆಗೆ ಎಂದು ಇದೆ. ಅವರು ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ. ನಾನೊಬ್ಬನೇ ಸರ್ಕಾರ ಅಲ್ಲ. ಮಾನ್ಯ ಖರ್ಗೆಯವರು ಸಚಿವ ಸಂಪುಟದ ಸಭೆಯಲ್ಲಿ ಹೆಚ್ಚು ಮಾಡಬಹುದು ಅಥವಾ ಕಡಿಮೆ ಮಾಡಬಹುದು ಎಂದು ಹೇಳಿದ್ದಾರೆ. ನಾನು ಅವರ ಮಾತಿನ ಪ್ರಕಾರವೇ ಹೇಳುತ್ತೇನೆ. ಅವರ ಮಾತನ್ನು ಒಪ್ಪುವುದಕ್ಕೆ ಇಷ್ಟಪಡುತ್ತೇನೆ. ಸಚಿವ ಸಂಪುಟದ ಸಭೆಯಲ್ಲಿ ನಿಮ್ಮ ಭಾವನೆಗಳು ಏನು ಇದೆ, ಆ ಭಾವನೆಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ, ಮಾನ್ಯ ಹಣಕಾಸಿನ ಮಂತ್ರಿಗಳ ಹಾಗೂ ಇತರ ಸಹೋದ್ಯೋಗಿಗಳ ಜೊತೆ ರೈತರ ಪರವಾಗಿ ನಾನೂ ಕೂಡ ಒತ್ತಾಯ ಮಾಡಿದ್ದೇನೆ. ನಿಮ್ಮ ಭಾವನೆಗಳನ್ನು ಅಲ್ಲಿ ಪ್ರತಿಬಿಂಬಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆನ್ನುವ ಮನವಿ ಮಾಡುತ್ತಾ, ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ನನಗೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇವರು ರೈತರ ಜೀವನದ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇವರು ಸದನದ ಸಮಿತಿ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಿಲ್ಲ. ಒಂದು ಹೆಕ್ಟೇರ್‌ಗೆ 2,000 ರೂಪಾಯಿ ಕೊಡುವುದಕ್ಕೆ ಒಪ್ಪುತ್ತಾ ಇಲ್ಲ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಾವು ವಾಕೌಟ್ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳೆಲ್ಲರೂ ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದುದು ಸ್ಪಷ್ಟ. ಏನೆಂದರೆ, ಸರ್ಕಾರ ನವೆಂಬರ್‌ನಿಂದ ಇಲ್ಲಿಯವರೆಗೆ ಎಂದರೆ ಮೂರು ತಿಂಗಳು ನೀವು ಇದನ್ನು ಏಕೆ ಅಲಕ್ಷ್ಯ ಮಾಡಿದಿರಿ ಎನ್ನುವುದು ಒಂದು ಪ್ರಶ್ನೆ. ನಿಮ್ಮ ರಿಪೋರ್ಟ್ ಡೆಪ್ಯೂಟಿ ಕಮಿಷನರ್‌ನಿಂದ, ಅಗ್ರಿಕಲ್ಚರ್ ಆಫೀಸರ್‌ನಿಂದ ಕಂಟಿನ್ಯೂಯಸ್ ಆಗಿ ಮೂರು ತಿಂಗಳಿನಿಂದ ಬರುತ್ತಿದೆ, ಬಂದರೂ ಕೂಡ ಕಾಂಪನ್‌ಸೇಷನ್ ಕೊಟ್ಟಿಲ್ಲ, ಏಕೆ? ಅದಕ್ಕೆ ನಿಮ್ಮಿಂದ ಉತ್ತರ ಇಲ್ಲ. ಇನ್ನು ಎರಡನೆಯದಾಗಿ ಕ್ರಾಪ್ ಇನ್ಶೂರೆನ್ಸ್ ಸ್ಕೀಮ್ ಏನಿದೆ, ಇದು ಈಗ ಇರುವ ಪ್ರಕಾರ

ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಬ್ಯಾಂಕ್‌ನಿಂದ ಕೊಡುತ್ತಿದ್ದಾರೆ. ಅದಕ್ಕೆ ಆಣೇವಾರಿ ಸಹ ಮಾಡಿಲ್ಲ. ನೀವು ಬೀದರ್ ಜಿಲ್ಲೆಯಲ್ಲಿ ಕೇಳಿ, ಗುಲ್ಬರ್ಗ ಜಿಲ್ಲೆಯಲ್ಲಿ ಕೇಳಿ ಯಾವ ರೈತರಿಗೂ ಕೂಡ ಆಣೇವಾರಿ ಮಾಡಿ ಇವರಿಗೆ ಕಾಂಪನ್ಸೇಷನ್ ಕೊಡಬಹುದು ಎನ್ನುವ ರೆಕಮೆಂಡೇಷನ್ ಮಾಡಿಲ್ಲ, ಎಂದರೆ ಇದು ನಿಮ್ಮ ವಿಫಲತೆ ಎಂದು ಹೇಳುತ್ತೀರೋ ಏನು ಎಂದು ಹೇಳಿ. ನಿಮ್ಮ ಅಧಿಕಾರಿಗಳು, ಕ್ರಾಪ್ ಕಟಿಂಗ್ ಮಾಡಿ, ಆಣೇವಾರಿ ಫಿಕ್ಸ್ ಮಾಡಿ ಇಷ್ಟೊಂದು ಇದೆ ಎಂದು ಇದುವರೆವಿಗೂ ಕೊಟ್ಟಿಲ್ಲ. ನಾವು ಪ್ರವಾಸ ಕೈಗೊಂಡಾಗ ನಮ್ಮ ಮುಂದೆ ಈ ವಿಚಾರ ಬಂದಿತ್ತು. ನಿಮ್ಮಲ್ಲೂ ಕೂಡ ಬಂದಿತ್ತು. ಆ ವರದಿ ಕೊಡಿ ನೀವು. ಅದರಲ್ಲಿ ಕೊಟ್ಟಿಲ್ಲ ಅಧ್ಯಕ್ಷರೇ, ಅಣೇವಾರಿ ಕೂಡ ತಾವು ಮಾಡುವುದರಲ್ಲಿ ರಿಪೋರ್ಟ್ ತರಿಸಿಕೊಂಡು ಕೋ-ಆಪರೇಟೀವ್ ಬ್ಯಾಂಕ್‌ನಿಂದ ಯಾರಿಗೆ ಕೊಡಬೇಕು ಅಂತಹವರಿಗೆ ಕೊಡುವುದರಲ್ಲಿ ನೀವು ವಿಫಲರಾಗಿದ್ದೀರಿ. ಇನ್ನು ಮೂರನೆಯದಾಗಿ ಏನು 10 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅದರಲ್ಲಿ ಮೂರು ಜನರನ್ನು ತಾವು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಒಪ್ಪಿಕೊಂಡಿದ್ದೀರಿ. ಇನ್ನು ಉಳಿದ ಏಳು ಜನರ ಬಗ್ಗೆ ನಮಗೆ ಸಂಶಯ ಇದೆ ಎಂದರೆ ಏನು ಸೂಚಿಸಬೇಕು ಆ ರಿಪೋರ್ಟ್? ಇದರ ಬಗ್ಗೆ ವಾದವಿವಾದ ನಡೆದಾಗ ಕೆಲವು ಜನ ಚಳುವಳಿ ಮಾಡುತ್ತಿದ್ದಾರೆ, ಹಾಗೂ ಇದರ ಬಗ್ಗೆ ಪ್ರೊಸೆಷನ್ ಮಾಡಿ ಧರಣಿಯನ್ನು ಮಾಡುತ್ತಾ ಜಿಲ್ಲಾಧಿಕಾರಿಗಳ ಆಫೀಸ್ ಮುಂದೆ ಕುಳಿತಿದ್ದಾರೆ. ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಆಗುವವರೆಗೆ ನೀವು ಏಕೆ ಕಾಯುವುದು? ವರದಿಯನ್ನು ತರಿಸಬೇಕಾಗಿತ್ತು. ಅದು ಬಿಟ್ಟು ಡೆಪ್ಯೂಟಿ ಕಮಿಷನರ್‌ರವರಿಂದ ಒಂದು ಹೇಳಿಕೆ, ಮಂತ್ರಿಯವರಿಂದ ಒಂದು ಹೇಳಿಕೆ ಹೇಳುವುದು ನೀವೊಂದು ಹೇಳುವುದು, ಈ ರೀತಿಯಾಗಿ ಕೂಡ ನೀವು ಸರಿಯಾದಂತಹ ರಿಪೋರ್ಟ್ ತರಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದೀರಿ. ಅದಕ್ಕೆ ಸದನದ ಸಮಿತಿ ಮಾಡಿ ಎಂದು ಹೇಳುತ್ತಿದ್ದೇವೆ. ಅದನ್ನೂ ಕೂಡ ನೀವು ಮಾಡುತ್ತಿಲ್ಲ. ಇನ್ನು ಗುಲ್ಬರ್ಗಾ ಮತ್ತು ಬೀದರ್ ಎರಡೂ ಕಡೆ ಕೂಡ ಕನಿಷ್ಟ ಪಕ್ಷ ಕೃಷಿ ಇಲಾಖೆ ಹಾಗೂ ರೆವಿನ್ಯೂ ಇಲಾಖೆ, ಡೆವಲಪ್‌ಮೆಂಟ್ ಕಮಿಟಿ ಇವರು ಮೂವರೂ ಕೂಡ ಮೀಟಿಂಗ್ ಮಾಡಿ ನೀವುಗಳೆಲ್ಲಾ ಚುನಾವಣೆಯಲ್ಲಿ ಮಗ್ನರಾಗಿದ್ದರೂ ಕೂಡ ಅವರು ಆದರೂ ಈ ಕೆಲಸವನ್ನು ಮಾಡಬಹುದಾಗಿತ್ತು. ಆದರೆ ಅವರೂ ಕೂಡ ಈ ಕೆಲಸ ಮಾಡಿಲ್ಲ. ಆದರೆ ಕೆಲಸ ಮಾಡದೇ ರಿಪೋರ್ಟ್ ಮಾತ್ರ ನೀವು ಹೇಳಿದಿರಿ. ಎಷ್ಟು ಮೀಟಿಂಗ್ ಮಾಡಿ ಎಷ್ಟು ಜನರಿಗೆ ಕಾಂಪನ್ಸೇಷನ್ ಕೊಟ್ಟಿರಿ ಎಂದೂ ಕೂಡ ಹೇಳಿಲ್ಲ. ಎಷ್ಟು ರೈತರು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು ಹೇಳಿಲ್ಲ. ನೀವು ಹೆಕ್ಟೇರ್‌ವೈಸ್ ಮಾಹಿತಿ ಹೇಳುತ್ತಿದ್ದೀರಿ. ಅದು ನನ್ನ ಹತ್ತಿರ ಕೂಡ ಇದೆ. ಇಷ್ಟು ಹೆಕ್ಟೇರ್‌ನಲ್ಲಿ ಕ್ರಾಪ್ ಫೇಲ್ ಆಗಿದೆ, ತೊಗರಿ ಬೆಳೆ ಇಷ್ಟು ಹೋಯಿತು, ಎಳ್ಳು, ಉದ್ದು ಹೋಯಿತು ಎನ್ನತಕ್ಕಂಥಾದ್ದನ್ನು ಹೇಳಬಹುದು. ಆದರೆ ಎಷ್ಟು ಅಫೆಕ್ಟೆಡ್ ಫ್ಯಾಮಿಲಿಗೆ ನಾವು ಪರಿಹಾರ ಕೊಡುತ್ತೇವೆ ಅಥವಾ ಕೊಟ್ಟಿದ್ದೇವೆ ಎಂದು ಅಂಕಿಅಂಶ ನಿಮ್ಮ ಹತ್ತಿರ ಇಲ್ಲ. ನಾನು ಹೇಳುತ್ತೇನೆ, ಇಷ್ಟೊಂದು ನಿರಾಸಕ್ತಿ

ಮಾಡಿ ಆಸಕ್ತಿ ತೋರಿಸದೆ ನೀವು ಕೆಲಸವನ್ನು ನಿರ್ವಹಿಸುವುದಾದರೆ ಖಂಡಿತವಾಗಿ ಇದು ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಮತ್ತು ಜನರಿಗೆ ಕೂಡ ನೀವು ಏನು ಸಹಾಯ ಮಾಡಬೇಕೆಂದು ಮನಸ್ಸಿನಲ್ಲಿ ಇದೆ, ಅದನ್ನೂ ಕೂಡ ನೀವು ಮಾಡಿ ತೋರಿಸುತ್ತಿಲ್ಲ.

ಶ್ರೀ ಸಿ.ಬೈರೇಗೌಡ: ನಿಮ್ಮ ಗಮನಕ್ಕೆ ಒಂದು ವಿಚಾರ ತರುವುದಾದರೆ, ನೀವು ಅಣೇವಾರಿ ಬಗ್ಗೆ ಹೇಳಿದಿರಿ. ಅದು ಕಾನೂನಿನಲ್ಲಿ ಏನು ಹೇಳುತ್ತದೆಂಬುದನ್ನು ತಾವು ಗಮನಿಸಿ. ಏಕೆಂದರೆ ತಾವು ಕಂದಾಯ ಮಂತ್ರಿಗಳಾಗಿದ್ದವರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೆ ಗೊತ್ತಿದೆ, ಕಾನೂನು ಹೇಗಿದ್ದರೂ ಕೂಡ ನೀವು ಕಾಂಪನ್ಸೇಷನ್ ಕೊಡುವುದಕ್ಕೆ ಬೇರೆ ಮಾರ್ಗ ಹುಡುಕಬೇಕಲ್ಲಾ.

ಶ್ರೀ ಸಿ.ಬೈರೇಗೌಡ: ಅದನ್ನೇ ನಾನು ಕ್ಯಾಬಿನೆಟ್ ಮುಂದೆ ತರುತ್ತೇನೆ ಎಂದು ಹೇಳಿದ್ದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗ ಅದು ಸಾಧ್ಯವಿಲ್ಲ ಎಂದಾಗ ಅದಕ್ಕೆ ಆಲ್ಟರ್ನೇಟೀವ್ ಆಗಿ ದಾರಿ ಹುಡುಕಬೇಕು. ಆ ದಾರಿ ಕಂಡುಹಿಡಿಯುವುದರಲ್ಲಿ ವಿಫಲರಾಗಿದ್ದೀರಿ.

ಶ್ರೀ ಸಿ.ಬೈರೇಗೌಡ: ನಾನು ಕ್ಯಾಬಿನೆಟ್ ಮುಂದೆ ಈ ವಿಚಾರವನ್ನು ಹೇಳುತ್ತೇನೆ. ನಿಮ್ಮ ಭಾವನೆಗಳನ್ನು ಪ್ರತಿಬಿಂಬಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಅಣೇವಾರಿ ನಿಗದಿಪಡಿಸಿಲ್ಲ ಎಂದು ಹೇಳಿರತಕ್ಕಂಥ ಮಾತು ಕಡತದಲ್ಲಿ ಹೋಗಿದೆ. ಕಾನೂನಿನಲ್ಲಿ ಏನಿದೆ, ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಪ್ರಕಾರ ವರ್ಷದಲ್ಲಿ ಒಂದೇ ಸಾರಿ ಅಣೇವಾರಿ ಫಿಕ್ಸ್ ಮಾಡಬೇಕಾಗುತ್ತದೆ. ಅದು ಗೆಜೆಟ್‌ನಲ್ಲಿ ಬರಬೇಕಾಗುತ್ತದೆ. ಅದನ್ನು ನಾವು ಇಷ್ಟ ಪಟ್ಟಂತಹ ಕಾಲದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಮೊದಲು ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಬೇಕಾಗುತ್ತದೆ. ಅದನ್ನು ಮಾಡಿದ ನಂತರ ಕಾನೂನು ಪ್ರಕಾರ ಅದು ಗೆಜಿಟ್‌ನಲ್ಲಿ ನಾವು ಪಬ್ಲಿಷ್ ಮಾಡಬೇಕಾಗುತ್ತದೆ. ಆ ಅಣೇವಾರಿಯನ್ನು ಅನುಸರಿಸಿ ನಾವು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನೇ ಸರ್ಕಾರ ಬೇಜವಾಬ್ದಾರಿಯಿಂದ ವರ್ತನೆ ಮಾಡಿದೆ, ಅಣೇವಾರಿ ನಿಗದಿ ಮಾಡಿದೆ ಎನ್ನತಕ್ಕಂಥಾದ್ದು ಸಾಧುವಾದುದಲ್ಲ. ಅದು ಕಾನೂನು ಪ್ರಕಾರ ಸಾಧ್ಯವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇನ್ನೊಮ್ಮೆ ರೀಪೋರ್ಟ್ ಓದಿ, 70-80 ಪರ್ಸೆಂಟ್ ಕ್ರಾಪ್ ಕಟಿಂಗ್ ಮಾಡಿದ್ದೇವೆ ನಾವು ಎಂದು ನೀವು ಹೇಳಿದ್ದೀರಿ. ಅದು ನಿಮ್ಮ ರಿಪೋರ್ಟ್‌ನಲ್ಲಿ ಇದೆ, ಓದಿ.

SRI C.BYREGOWDA: The report of the deputy commissioner is not a Statutory Report. ಇದು ಸ್ಟ್ಯಾಚ್ಯುಟ್ ಪ್ರಕಾರ ಫಿಕ್ಸ್ ಮಾಡಿದ್ದೇವೆ. ಮಾರ್ಕೆಟ್ ಪ್ರಕಾರ ಫಿಕ್ಸ್ ಮಾಡಿದ್ದಾರೆ. The report of the deputy commissioner cannot overrule an Act. It cannot overrule a rule.

ಶ್ರೀ ಎಂ.ಮಲ್ಲಿಕಾರ್ಜನ ಖರ್ಗೆ: ಇಲ್ಲ, ನೀವು ಓವರ್‌ರೂಲ್ ಮಾಡಬೇಡಿ. ನೀವು ಕೋ-ಆಪರೇಟೀವ್ ಬ್ಯಾಂಕ್‌ನಿಂದ ಕ್ರಾಪ್ ಇನ್ಸೂರೆನ್ಸ್ ಹಣವನ್ನು ಪಡೆಯಬೇಕಾದರೆ ಯಾವ ಮಾರ್ಗ? ಇದೇ ತಾನೇ? ಈ ಮಾರ್ಗದಿದ ಹಣವನ್ನು ಅವರಿಗೆ ತೆಗೆದುಕೊಳ್ಳಬೇಕು ಎಂದರೆ ನಿಮ್ಮ ಅಧಿಕಾರಿಗಳು ಕೆಲಸ ಮಾಡಬೇಕೋ ಇಲ್ಲವೋ? ಕಾನೂನು ಇದೆ, ಆ ಕಾನೂನು ಪ್ರಕಾರ ನೀವು ಕೆಲಸ ಮಾಡಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ: ನಾನು ಕಾನೂನು ಓದುತ್ತೇನೆ. Sir, as per section 194 of the karnataka Land Revenue Act, 1964, Anewari has to be declared with result to various crops. The Anewari is declared once in a year taking into account, both, Rabi and kharif crops.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೆ ಗೊತ್ತಿದೆ. ಗೊತ್ತಿದ್ದು ನೀವು ಏನು ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ಬೆಳೆ ಏನು ಫೇಲ್ ಆಗಿದೆ, ತೊಗರಿ, ಉದ್ದು, ಕಡಲೆ ಇದನ್ನು ಫೆಲ್ಯೂರ್ ಆದಾಗ ಈ ವರ್ಷ ಮುಗಿಯಿತಲ್ಲಾ, ನವೆಂಬರ್ - ಡಿಸೆಂಬರ್‌ನಲ್ಲಿ ನೀವು ತಕ್ಷಣ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಹೇಳಿ ಎಲ್ಲಿ ಇನ್ಸೂರ್ ಮಾಡಿದ್ದಾರೆ, ಇನ್ಸ್ಯೂರ್ ಮಾಡದೇ ಇದ್ದಲ್ಲಿ ನೀವು ಡಿಸ್ಕ್ರಿಷನ್ ಉಪಯೋಗ ಮಾಡಿಕೊಂಡು ಅವರಿಗೆ ಏನು ಕಾಂಪನ್ಸೇಷನ್ ಕೊಡಬೇಕೋ ಅದನ್ನು ಕೊಡಿಸಬಹುದು. ಆದರೆ ಎಲ್ಲಿ ಇನ್ಸೂರ್ ಮಾಡಿದ್ದು, ಯಾವ ಬ್ಯಾಂಕುಗಳು ಕೊಡುವುದಕ್ಕೆ ತಯಾರು ಇದೆ ಅಂತಹ ಕಡೆ ನಿಮ್ಮ ರಿಪೋರ್ಟ್ ಇಲ್ಲ. ಹೀಗಾದರೆ ಕೇಂದ್ರ ಸರ್ಕಾರದಿಂದ ಆಗಲಿ, ಇನ್ಸ್ಯೂರೆನ್ಸ್ ಡಿಪಾರ್ಟ್‌ಮೆಂಟ್‌ನಿಂದಾಗಲಿ ಹಣ ಹೇಗೆ ಬರುತ್ತದೆ? ಅದಕ್ಕೆ ನೀವು ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಹಾಗೂ ಸದನ ಸಮಿತಿ ಮಾಡುವುದಕ್ಕೆ ತಯಾರಿಲ್ಲ. ಇದನ್ನು ನಾವು ವಿರೋಧಿಸುತ್ತಾ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಜ ನಗರ): ಮಾನ್ಯ ಅಧ್ಯಕ್ಷರೇ, ಶಾಶ್ವತ ಪರಿಹಾರದ ಬಗ್ಗೆ ನೀವು ಏನೂ ಚಕಾರ ಎತ್ತಲಿಲ್ಲ. ಪರಿಣಾಮಕಾರಿಯಾಗಿ ನೀವು

ಶಾಶ್ವತ ಪರಿಹಾರದ ಬಗ್ಗೆ ನಿಮ್ಮ ಅಂಕಿಅಂಶಗಳಲ್ಲಿ ಒಂದು ಹೊಸ ಯೋಜನೆಯನ್ನು ಮಾಡುತ್ತೇವೆ ಎಂಬ ವಿಚಾರವನ್ನು ಹೇಳಲಿಲ್ಲ. ಇದರ ಜೊತೆಗೆ ಆ ಜಮೀನುಗಳನ್ನು ಪಡೆದಿರಲ್ಲ ಕಾರಂಜ ಮತ್ತು ಚುಳ್ಕಿನಾಲಾ ಅದು ನಿಮಗೆ ಬರುವುದಿಲ್ಲ, ಆದರೂ ರೈತರ ಬೇಡಿಕೆ ಏನು ಇದೆ ಅದು ಸಮಗ್ರವಾಗಿದೆ. ಅವರಿಗೆ ಪರಿಹಾರವನ್ನು ಕೊಡುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಆದುದರಿಂದ ಇವೊತ್ತು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಈ ಅಸಾಧಾರಣವಾದಂಥ ಪ್ರಕರಣ ಏನು ಇದೆ, ಈ ಬಗ್ಗೆ ಒಂದು ಸಮಗ್ರವಾದ ನ್ಯಾಯಾಂಗ ತನಿಖೆಯಾಗಬೇಕು ಮತ್ತು ಸದನಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡಿ ನಾನು ಧರಣಿ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಭಾಧ್ಯಕ್ಷರೇ, ಸದನಸಮಿತಿಯನ್ನು ರಚನೆ ಮಾಡಲಿಕ್ಕೆ ಒಪ್ಪದೆ ವಿರೋಧವನ್ನು ಮಾಡುತ್ತಿದ್ದಾರೆ ಮತ್ತು ನಾವು ಕೇಳಿದಂಥ ಯಾವುದೇ ಪ್ರಶ್ನೆಗೆ ಭೈರೇಗೌಡರು ಉತ್ತರವನ್ನು ಹೇಳಲಿಲ್ಲ. ಅಲ್ಲಿ ಸತ್ತಿರತಕ್ಕಂತಹವರು ಬೇರೆ ಕಾರಣಕ್ಕಾಗಿ ಸತ್ತಿದ್ದಾರೆ ಎಂದು ಹೇಳುತ್ತಾರೆ ಆದರೆ ಸತ್ತಿರತಕ್ಕಂತಹವರ ಬೆಳೆ ಹಾನಿಯಾಗಿದೆಯೆ ಇಲ್ಲವೆ ಎಂದು ಹೇಳಲಿಲ್ಲ. ಹಾಗಾಗಿ ನಾನೂ ಕೂಡ ಇದನ್ನು ಪ್ರತಿಭಟನೆ ಮಾಡಿ ಧರಣಿ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಯವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಅಧ್ಯಕ್ಷರು: ಸನ್ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಶ್ರೀರಾಂರೆಡ್ಡಿಯವರು ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಮುಂದಿನ ಕಲಾಪವನ್ನು ನಡೆಸೋಣ. ಕಲಾಪವನ್ನು ನಡೆಸುವ ವೇಳೆ ತಾವು ಅಲ್ಲಿ ಕುಳಿತುಕೊಂಡರೆ ಚೆನ್ನಾಗಿ ಕಾಣುವುದಿಲ್ಲ. ಭೈರೇಗೌಡರೂ ಸಹ ತಮ್ಮ ಹಿತೈಷಿಗಳಿದ್ದಾರೆ. ಅವರು ಅದನ್ನು ಸರಿ ಮಾಡುತ್ತಾರೆ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ಹಾಗೆ ವಂದನಾರ್ಪಣಾ ಪ್ರಸ್ತಾವ.

(9) ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣೆ ಪ್ರಸ್ತಾವ

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ.

''9ನೇ ಮಾರ್ಚ್ 1998ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯು